ಲಂಕೇಶ್

ಅಕ್ಟೋಬರ್ 24, 2007 ರೂ.10/-



ಚೆಂಡ ಬೆಂಡ!



ಕಪಟ ಜ್ಯೋತಿಷಿ ಸೋಮಯಾಜಿ


ಹುನಗುಂದ: ಶಾಸಕ-ತಹಶೀಲ್ದಾರ್ ಖದೀಮ ಜೋಡಿ

ಹುಬ್ಬಳ್ಳಿ : ಲಿಂಗಾಯತರಿಗೆ ಬ್ರಾಹ್ಮಣರ ಸ್ಕೆಚ್!

ಪೇದೆ ಮಾದಯ್ಯ ಕೊಲೆ



ಇರಿದವಳು ಅಕ್ಕ ಕೊಂದವನು ಎಸಿಪಿ



ಕನ್ನಡವನ್ನು ಕೊಲ್ಲುತ್ತಿರುವ ಮೈಕ್ರೊಸಾಫ್ಟ್

ಸಾಮಾನ್ಯವಾಗಿ ನಮ್ಮ ರಾಜಧಾನಿಯ ಕನ್ನಡ ಚಳವಳಿಗಳಿಗೆ ಶತ್ರುಗಳೆಂದರೆ ಪರಭಾಷಿಕರು. ಪರಭಾಷಿಕರು ಎಂದರೆ ತಮಿಳರು, ತೆಲುಗರು, ಮಲಯಾಳಿಗಳು. ಈ ಚಳವಳಿಯಲ್ಲಿ ಚೆಡ್ಡಿಗಳು ಸೇರಿಕೊಂಡಾಗಲೆಲ್ಲಾ ಕರ್ನಾಟಕದಲ್ಲೇ ನೆಲೆಸಿರುವ ಮುಸ್ಲಿಮರು ಸಹ ಕನ್ನಡ ಚಳವಳಿಯ ಹೆಸರಲ್ಲಿ ದಾಳಿಗೆ ಗುರಿಯಾದದ್ದಿದೆ. ಆದರೆ ವಾಸ್ತವವೆಂದರೆ ಈ ಕಲ್ಪಿತ ಶತ್ರುಗಳ ವಿರುದ್ಧ ಕೆಲವು ಕನ್ನಡಪರ ಸಂಘಟನೆಗಳು ಬಹಳ ವರ್ಷಗಳಿಂದ ಸಮರವನ್ನೇ ನಡೆಸಿಕೊಂಡು ಬಂದಿದ್ದರೂ ಮತ್ತು ಆ ಸಮರದಲ್ಲಿ ಇತರ ಭಾಷಿಕರನ್ನು ತಮಗೆ ಕಪ್ಪ ಕಾಣಿಕೆ ಸಲ್ಲಿಸುವ ಸಾಮಂತರನ್ನಾಗಿ ಮಾಡಿಕೊಂಡಿದ್ದರೂ ಕನ್ನಡದ ಕೊಲೆ ಮಾತ್ರ ನಿಂತಿಲ್ಲ, ಕನ್ನಡಕ್ಕೆ ಭವಿಷ್ಯವೂ ಕಾಣುತ್ತಿಲ್ಲ. ಏಕೆಂದರೆ ಕನ್ನಡದ ದುಸ್ಥಿತಿಗೆ ಮತ್ತು ಆಗಲಿರುವ ಅವನತಿಗೆ ಕಾರಣ ಈ ಸೋದರ ಭಾಷಿಕರಲ್ಲ, ಬದಲಾಗಿ ಈ ಸಮರವನ್ನು ಕನ್ನಡದ ನಿಜವಾದ ಶತ್ರುಗಳ ವಿರುದ್ಧ ಹೂಡದಿರುವುದೇ ಆಗಿದೆ.

ಜಾಗತೀಕರಣದ ಈ ಯುಗದಲ್ಲಿ ಕನ್ನಡದ ನಿಜವಾದ ಶತ್ರುಗಳು ನಮ್ಮ ಸೋದರ ಭಾಷೆಗಳಾದ ತಮಿಳು ತೆಲುಗರಲ್ಲವೇ ಅಲ್ಲ, ಏಕೆಂದರೆ ಆ ಭಾಷೆಗಳು ಮತ್ತು ಭಾಷಿಕರು ನಮ್ಮಂತೆ ಶೋಷಿತ ಭಾಷೆ ಮತ್ತು ಭಾಷಿಕರೇ ಆಗಿದ್ದಾರೆ. ಈಗ ಎಲ್ಲಾ ಭಾರತೀಯ ಭಾಷೆಗಳಿಗೂ ಯಾರಾದರೂ ಒಬ್ಬ ಶತ್ರುವಿದ್ದಾನೆ ಎನ್ನುವುದಾದರೆ ಅದು ಮೈಕ್ರೋಸಾಫ್ಟ ಕಂಪನಿ ಮತ್ತು ಅದಕೆ ತಲೆ ಹಿಡಿಯುತ್ತಿರುವ ನಮ್ಮದೇ ಸರ್ಕಾರಗಳು!

ಭಾಷೆಗಳು ಲಿಪಿಯ ರೂಪವನ್ನು ಪಡೆದುಕೊಳ್ಳುವುದರೊಂದಿಗೆ ಭಾಷೆಯ ಜೀವಾಳವೂ ಲಿಪಿಯನ್ನೇ ಆಧರಿಸಲ್ಪಡುತ್ತದೆ. ಲಿಪಿಯು ಭಾಷೆಯನ್ನು ಅದರ ವ್ಯಾಕರಣದಲ್ಲಿ ಹಿಡಿದಿಡುತ್ತದೆ ಮತ್ತು ಅದನ್ನು ಹೀಗೆ ಎಂದು ಸಾಮಾನ್ಯೀಕರಿಸುತ್ತದೆ ಹಾಗೂ ಸಾರ್ವತ್ರೀಕರಿಸುತ್ತದೆ. ಭಾಷೆಯ ಈ ಬಗೆಯ ಲಿಪೀಕರಣ ಎಷ್ಟು ವೈಜ್ಞಾನಿಕವಾಗಿ ಆಗುತ್ತದೆಯೋ ಅಷ್ಟರಮಟ್ಟಿಗೆ ಭಾಷೆಯ ಬೆಳವಣಿಗೆಗೆ ಪೂರಕವಾಗಿರುತ್ತದೆ. ಬದಲಾಗುತ್ತಿರುವ ಹೊಸ ಸಮಾಜದ ಅಗತ್ಯಗಳಿಗೆ ತಕ್ಕಂತೆ ಭಾಷೆಯನ್ನು ಬೆಳೆಸುವುದು ಸಾಧ್ಯವಾಗುತ್ತದೆ. ಭಾಷೆಯನ್ನು ಆಡುವ ಸಮುದಾಯದ ಎಲ್ಲಾ ಜನತೆಯ ಅಭಿವ್ಯಕ್ತಿಗೆ ಆ ಸಮುದಾಯದಲ್ಲಿ ಸಮಾನವಾದ ಅವಕಾಶವಿದ್ದರೆ ಭಾಷೆಯೂ ಹೆಚ್ಚು ಶ್ರೀಮಂತವಾಗಿರುತ್ತದೆ ಮತ್ತು ಬದಲಾದ ಪರಿಸ್ಥಿತಿಗೆ ತಕ್ಕಂತೆ ಬೆಳೆಯುವ ಅಂತಃಶಕ್ತಿಯನ್ನು ಪಡೆದುಕೊಂಡಿರುತ್ತದೆ. ಅಂದರೆ ಒಂದು ಭಾಷೆ ಲಿಪಿಕ ರೂಪವನ್ನು ಪಡೆದನಂತರ ಅದರ ಬೆಳವಣಿಗೆ ಎಷ್ಟರ ಮಟ್ಟಿಗೆ ಅದು ವೈಜ್ಞಾನಿಕತೆ ಮತ್ತು ಸಮುದಾಯದ ಸಮಸ್ತ ಪ್ರಾತಿನಿಧಿಕತೆಯನ್ನು ಪಡೆದುಕೊಂಡಿರುತ್ತದೆ ಎಂಬುದನ್ನು ಆಧರಿಸಿರುತ್ತದೆ. ಅದರಲ್ಲೂ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಸಂಸ್ಕೃತ ಹೇರಿಕೆಗೆ ತುತ್ತಾಗುತ್ತಾ ಬಂದಿರುವ ಹಾಗೂ ಈಗ ಆಧುನಿಕ ಕಾಲದಲ್ಲಿ ಇಂಗ್ಲಿಷ್ ಹೇರಿಕೆಗೆ ಬಲಿಯಾಗುತ್ತಿರುವ ಜನಭಾಷೆಗಳು ಉಳಿಯುವುದೇ ದುಸ್ತರವಾಗಿದೆ. ಈ ಸಂದರ್ಭದಲ್ಲಿ ಕನ್ನಡದಂಥ ಭಾಷೆಗಳು ಉಸಿರಾಡುತ್ತಿರುವುದೇ ಅವುಗಳ ಲಿಪಿಕ ರೂಪದಲ್ಲಿರುವ ವೈಜ್ಞಾನಿಕತೆ ಮತ್ತು ಪ್ರಜಾತಂತ್ರದಿಂದ.

ಈಗ ಅದಕ್ಕೂ ಕುತ್ತು ಬಂದಿದೆ. ಜಾಗತೀಕರಣದ ಕಾಲಘಟ್ಟದಲ್ಲಿ ಲಿಪಿಕ ಸಂಸ್ಕೃತಿಯೂ ಇನ್ನೊಂದು ಮಜಲನ್ನು ತಲುಪುತ್ತಿದೆ. ಎಲ್ಲಾ ಲಿಪಿಕ ಭಾಷೆಗಳು ಈಗ ಕಂಪ್ಯೂಟರ್ ಮೂಲಕ ಹೊಸ ಹುಟ್ಟನ್ನು ಪಡೆಯುವ ಅನಿವಾರ್ಯತೆಗೆ ಒಳಪಟ್ಟಿವೆ. ಏಕೆಂದರೆ ಆಧುನಿಕ ಯುಗದ ಎಲ್ಲಾ ವ್ಯವಹಾರ ಮತ್ತು ಸಾಮಾಜಿಕ ಸಂವಹನಗಳು ಇನ್ನು ಮುಂದೆ ನಡೆಯಲಿರುವುದು ಕಂಪ್ಯೂಟರ್ ಮೂಲಕವೇ ಆಗಿದೆ. ಹೀಗಾಗಿ ಕೈಬರಹದ ಮೂಲಕ ಹೊಸ ಹುಟ್ಟು ಪಡೆದ ಭಾಷೆಗಳು ಈಗ ಕಂಪ್ಯೂಟರ್ ಕೀ ಬೋರ್ಡಿನಲ್ಲೂ ಮತ್ತು ಸಾಫ್ಟ್‌ವೇರಿನಲ್ಲೂ ತಮ್ಮ ಹೊಸ ರೂಪವನ್ನು ಕಂಡುಕೊಳ್ಳಬೇಕಿದೆ.

ಮೌಖಿಕ ಭಾಷೆ ಲಿಪಿಕ ರೂಪ ಪಡೆದಾಗ ವ್ಯಾಕರಣ ಮಾತ್ರ ಏಕಮಾತ್ರ ತಂತ್ರವಾಗಿತ್ತು, ಆದರೂ ಅದನ್ನು ಲಿಪಿಕ ರೂಪದಲ್ಲಿ ತರುವಾಗ ಸ್ಥಳೀಯ ಭಾಷಾ ವೈವಿಧ್ಯತೆಗಳ ವ್ಯಾಕರಣ ಮತ್ತು ಪದಸಂಪತ್ತನ್ನು ಉಳಿಸಿಕೊಂಡು ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದವು. ಏಕೆಂದರೆ ಕನ್ನಡದ ತಂತ್ರದ ಮತ್ತು ಬರಹವೆಂಬ ಲಿಪಿಕ ರೂಪದ ಬಳಕೆಯಲ್ಲಿ ತಾಂತ್ರಿಕ ಸ್ವಾತಂತ್ರ್ಯವಿತ್ತು. ಒಂದು ವೇಳೆ ಅದು ತಪ್ಪಾಗಿದ್ದರೂ ಅದನ್ನು ತಿದ್ದುವ ವ್ಯವಸ್ಥೆಯಿತ್ತು.

ಆದರೆ ಈಗ ಕನ್ನಡ ಲಿಪಿಯು ಕಂಪ್ಯೂಟರ್ ಸಾಫ್ಟ್‌ವೇರಾಗಿ ಬದಲಾಗುವ ಸಂದರ್ಭದಲ್ಲಿ ಕಂಪ್ಯೂಟರಿನ ತಂತ್ರಾಂಶದ ಮೇಲೆ ಸಾರ್ವಭೌಮತೆಯನ್ನು ಪಡೆದವರೇ ಕನ್ನಡ ಭಾಷೆಯ ಮೇಲೂ ಸಾರ್ವಭೌಮತೆಯನ್ನು ಪಡೆಯುವ ಏಕಸ್ವಾಮ್ಯತೆ ಎದುರಾಗಿದೆ. ಅದರಲ್ಲೂ ಸರ್ಕಾರವು ಇಡೀ ಆಡಳಿತ ವ್ಯವಹಾರವನ್ನೇ ಕಾಗದ ರಹಿತವಾಗಿ ಕಂಪ್ಯೂಟರ್‌ಗಳಲ್ಲೇ ಮಾಡಬೇಕೆಂದು ತೀರ್ಮಾನಿಸಿದ ಮೇಲೆ ಕನ್ನಡಕ್ಕೆ ಉಪಕಾರವಾಗುವುದಕ್ಕಿಂತ ಅಪಕಾರವೇ ಜಾಸ್ತಿಯಾಗುತ್ತಿದೆ ಮತ್ತು ಕನ್ನಡ ಶಾಶ್ವತವಾಗಿ ಊನಗೊಳ್ಳುತ್ತಿದೆ.

ಆಡಳಿತವನ್ನು ಕನ್ನಡದಲ್ಲೇ ಮಾಡಬೇಕು ಮತ್ತು ಕಂಪ್ಯೂಟರಿನಲ್ಲೇ ಮಾಡಬೇಕು ಎಂದಾದಮೇಲೆ ಸರ್ಕಾರ ತನ್ನ ಎಲ್ಲಾ ಕಚೇರಿಗಳಿಗೂ ಎಲ್ಲಾ ಮೂಲೆಗಳಿಗೂ ಕಂಪ್ಯೂಟರನ್ನು ಸರಬರಾಜು ಮಾಡಬೇಕಾಗುತ್ತದೆ. ಕಂಪ್ಯೂಟರ್ ಎಂದರೆ ಕೇವಲ ಟೇಬಲ್ ಮೇಲೆ ಕಾಣುವ ಡಬ್ಬ ಮಾತ್ರ ಅಲ್ಲ. ವಾಸ್ತವವಾಗಿ ಕಂಪ್ಯೂಟರ್ ಡಬ್ಬವನ್ನು ಯಾರು ಬೇಕಾದರೂ ಮಾಡಬಹುದಾದರೂ ಅದನ್ನು ಬಳಸಲು ಬೇಕಾದ ತಂತ್ರಾಂಶವನ್ನು ಅದನ್ನು ತಯಾರಿಸುವ ಕಂಪನಿಗಳಿಂದ ಕೊಳ್ಳಲೇ ಬೇಕು. ಹೀಗಾಗಿ ಕಂಪ್ಯೂಟರ್ ಹಾರ್ಡ್‌ವೇರನ್ನು ತಯಾರಿಸುವ ಕಂಪನಿಗಳೇ ಅದರ ಸಾಫ್ಟ್‌ವೇರುಗಳನ್ನೂ ಮಾರುತ್ತವೆ. ಅದರಲ್ಲೂ ಈ ಉದ್ಯಮದಲ್ಲಿ ತನ್ನ ತಾಂತ್ರಿಕ ಅಧಿಪತ್ಯದಿಂದಲೇ ಹಲವಾರು ಕುತಂತ್ರಗಳನ್ನು ಮಾಡಿ ಮುಂಚೂಣಿಯಲ್ಲಿರುವ ಬಿಲ್‌ಗೇಟ್ಸ್‌ನ ಮೈಕ್ರೋಸಾಫ್ಟ ಕಂಪನಿ ಕರ್ನಾಟಕ ಸರ್ಕಾರದ e-ಆಡಳಿತದಲ್ಲಿ e-ಕನ್ನಡವೆಂಬ ಯೋಜನೆಯನ್ನು ಸಂಪೂರ್ಣವಾಗಿ ತನ್ನ ಲಾಭಕ್ಕೆ ಬಳಸಿಕೊಂಡು ಕನ್ನಡಿಗರನ್ನು ಮತ್ತು ಕನ್ನಡವನ್ನು ಕೋತಿಗಳನ್ನಾಗಿ ಮಾಡುತ್ತಿದೆ.

ಮೊದಲನೆಯದಾಗಿ ಸರ್ಕಾರ ಈ-ಆಡಳಿತದ ಯೋಜನೆಯ ಸಂಪೂರ್ಣ ಅನುಷ್ಠಾನವನ್ನು ಮೈಕ್ರೋಸಾಫ್ಟ್‌ಗೆ ಒಪ್ಪಿಸಿದೆ. ಇದು ಕೇವಲ ಕಂಪ್ಯೂಟರ್ ಸರಬರಾಜಿನ ಕಾಂಟ್ರಾಕ್ಟ್ ಅಲ್ಲ, ಬದಲಿಗೆ ಸರ್ಕಾರದ ಆಡಳಿತದ ಭಾಷೆ ಮತ್ತು ಪದ್ಧತಿಯನ್ನೇ ಕಾಂಟ್ರಾಕ್ಟ್ ಕೊಟ್ಟ ಲೆಕ್ಕ. ಏಕೆಂದರೆ ಎಲ್ಲಾ ಕಂಪ್ಯೂಟರ್‌ಗಳು ಕಾರ್ಯನಿರ್ವಹಿಸಲು ಒಂದು ಆಪರೇಟಿಂಗ್ ಸಿಸ್ಟಂ-ಆಚರಣಾ ವ್ಯವಸ್ಥೆಯನ್ನು- ಹೊಂದಿರುತ್ತವೆ. ಕೆಲವು ಕಂಪನಿಗಳ ಈ ಆಪರೇಟಿಂಗ್ ಸಿಸ್ಟಂಗಳ ವ್ಯವಸ್ಥೆ ಬಹಿರಂಗವಾಗಿರುತ್ತವೆ. ಕೆಲವು ಕಂಪನಿಗಳು ತಮ್ಮ ಈ ಆಪರೇಟಿಂಗ್ ವ್ಯವಸ್ಥೆಯನ್ನು ಗುಪ್ತವಾಗಿಟ್ಟಿರುತ್ತವೆ ಮತ್ತು ಪೇಟೆಂಟ್ ಮಾಡಿಕೊಂಡಿರುತ್ತವೆ. ಆಪರೇಟಿಂಗ್ ಸಿಸ್ಟಂ ಅನ್ನು ಗ್ರಾಹಕರಿಗೆ ಕೊಟ್ಟರೆ ಗ್ರಾಹಕರು ಒಮ್ಮೆ ಆ ಕಂಪನಿಯ ಆಪರೇಟಿಂಗ್ ಸಿಸ್ಟಂಅನ್ನು ಕೊಂಡರೆ ಸಾಕು. ಮುಂದೆ ತಮ್ಮ ಬದಲಾದ ಅಗತ್ಯಕ್ಕೆ ತಕ್ಕಂತೆ ಅದನ್ನು ಬಳಸುತ್ತಾ ಬೆಳೆಸಿಕೊಳ್ಳುತ್ತಾ ಹೋಗಬಹುದು. ಉದಾಹರಣೆಗೆ ತಮಿಳುನಾಡು ಮತ್ತು ಕೇರಳ ಸರ್ಕಾರಗಳು ತಮ್ಮ ರಾಜ್ಯಗಳಲ್ಲಿ ತರಬೇಕೆಂದುಕೊಂಡಿರುವ ಈ-ಆಡಳಿತದಲ್ಲಿ ಬಳಸಬೇಕೆಂದಿರುವ ಆಪರೇಟಿಂಗ್ ಸಿಸ್ಟಂಗಳು ಈ ರೀತಿಯ ಮುಕ್ತ ಆಪರೇಟಿಂಗ್ ಸಿಸ್ಟಂಗಳು. ಇದರಿಂದ ಗ್ರಾಹಕರು ಮೂಲ ಕಂಪನಿಯ ಮೇಲೆ ಶಾಶ್ವತ ಅವಲಂಬನೆ ಪಡುವಂತಿಲ್ಲ, ಅಷ್ಟು ಮಾತ್ರವಲ್ಲದೆ ತಮ್ಮ ಬದಲಾದ ಆಗತ್ಯಗಳಿಗಾಗಿ ತಂತ್ರಾಂಶವನ್ನು ಸುಧಾರಿಸಲು ಮೂಲ ಕಂಪನಿಗೆ ಹಣ ತೆತ್ತು ಅವರಿಂದಲೇ ಕೊಳ್ಳಬೇಕಾದ ಜೀತಗಾರ ಗ್ರಾಹಕರು ಆಗಬೇಕಿಲ್ಲ, ಹಾಗೂ ತಮ್ಮ ಭಾಷೆಯನ್ನು ತಾವೇ ಸುಧಾರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವು ಹೊಂದಿರುತ್ತವೆ. ಇವೆಲ್ಲಾ ಸಾಧ್ಯವಾಗುವುದು ಮುಕ್ತ ಆಪರೇಟಿಂಗ್ ಸಿಸ್ಟಂ ವ್ಯವಸ್ಥೆಯಿದ್ದರೆ ಮಾತ್ರ.

ಆದರೆ ಕರ್ನಾಟಕ ಸರ್ಕಾರ ಒಪ್ಪಂದ ಮಾಡಿಕೊಂಡಿರುವುದು ಅಂಥ ಕಂಪನಿಗಳ ಜೊತೆ ಅಲ್ಲ, ಇಡೀ ಜಗತ್ತನ್ನು ತನ್ನ ಕುತಂತ್ರದ ತಂತ್ರಾಂಶದಿಂದ ಲೂಟಿ ಹೊಡೆಯುತ್ತಿರುವ ಮೈಕ್ರೋಸಾಫ್ಟ್ ಕಂಪನಿಯೊಂದಿಗೆ. ಮೈಕ್ರೊಸಾಫ್ಟ್ ಕಂಪನಿ ಬಳಸುವುದು ಈಗಾಗಲೇ ಹೇಳಿದಂತೆ ವಿಂಡೋಸ್ ಎಂಬ ಆಪರೇಟಿಂಗ್ ಸಿಸ್ಟಂಅನ್ನು. ಒಮ್ಮೆ ಕಂಪ್ಯೂಟರ್‌ಗಳಲ್ಲಿ ಈ ತಂತ್ರಾಂಶವನ್ನು ಬಳಸಲು ಪ್ರಾರಂಭಿಸಿದರೆ ಆ ಕಂಪ್ಯೂಟರ್‌ಗಳಲ್ಲಿ ಮೈಕ್ರೋಸಾಫ್ಟ್‌ನ ತಂತ್ರಾಂಶವನ್ನು ಬಿಟ್ಟರೆ ಬೇರೆ ಯಾವುದನ್ನೂ ಬಳಸಲಾಗುವುದಿಲ್ಲ ಮತ್ತು ಮೈಕ್ರೋಸಾಫ್ಟ್ ತಂತ್ರಾಂಶವು ಸಂಪೂರ್ಣವಾಗಿ ಪೇಟೆಂಟ್ ಆದ ತಂತ್ರಾಂಶವಾಗಿದೆ. ಅಂದರೆ ಗ್ರಾಹಕರು ಅದರ ಮೂಲ ವ್ಯವಸ್ಥೆಯನ್ನು ಬಳಸಿ ತಮ್ಮ ಅಗತ್ಯಕ್ಕೆ ತಕ್ಕಂತೆ ಸುಧಾರಿಸಲು ಸಾಧ್ಯವೇ ಇಲ್ಲ, ಯಾವುದೇ ಹೊಸ ಅಗತ್ಯ ಉಂಟಾದರೂ ಆ ಕಂಪ್ಯೂಟರ್ ಬಳಸಬೇಕೆಂದರೆ ಮೈಕ್ರೋಸಾಫ್ಟ್ ಕೊಡುವ ಸಲಕರಣೆಯನ್ನೇ ದುಬಾರಿ ದುಡ್ಡು ಕೊಟ್ಟು ಕೊಂಡುಕೊಳ್ಳಬೇಕು. ಮೈಕ್ರೋಸಾಫ್ಟ್ ಕಂಪನಿ ತನ್ನ ಗ್ರಾಹಕರನ್ನು ಹೀಗೆ ಶಾಶ್ವತವಾಗಿ ತನ್ನ ಗುಲಾಮರನ್ನಾಗಿ ಮಾಡಿಕೊಳ್ಳುತ್ತದೆ.

ಅಷ್ಟು ಮಾತ್ರವೇ ಅಲ್ಲ, ಈ ಕಂಪನಿಯೇ ಕನ್ನಡದ

ಚಾರ್ವಾಕ

ಶಿವಸುಂದರ್

ಲಿಪಿಯನ್ನೂ ತನ್ನ ತಂತ್ರಾಂಶದಲ್ಲಿ ಪರಿವರ್ತನೆ ಮಾಡಿ ಸರಬರಾಜು ಮಾಡುತ್ತದೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಮಾಡುವ ವ್ಯವಸ್ಥೆಯಾಗಲೀ ಅಥವಾ ಕನ್ನಡದ ಬಗೆಗಿನ ಅಥವಾ ಯಾವುದಾದರೂ ಒಂದು ಭಾಷೆಯ ಬಗೆಗಿನ ಕಾಳಜಿಯಾಗಲೀ ಮೈಕ್ರೋಸಾಫ್ಟ್‌ಗಿಲ್ಲ. ಉದಾಹರಣೆಗೆ ಇತ್ತೀಚೆಗೆ ಮೈಕ್ರೊಸಾಫ್ಟ್ ಕಂಪನಿ ತನ್ನ ಎಕ್ಸ್‌ಪಿ ಪ್ಯಾಕೇಜಿನೊಂದಿಗೆ ಕೊಟ್ಟಿರುವ ಕನ್ನಡ ತಂತ್ರಾಂಶ ಯಾವುದೇ ಪರಭಾಷೆಯವರಾಗಲೀ ಅಥವಾ ಈ ಹಿಂದೆ ಇಂಗ್ಲಿಷರಾಗಲೀ ಎಷ್ಟು ಕುಲಗೆಡಿಸಿಟ್ಟರೋ ಅದಕ್ಕಿಂತ ಎರಡು ಪಟ್ಟು ಹೆಚ್ಚನದ್ದಾಗಿದೆ. ಈ ಕುಲಗೆಟ್ಟ ಕನ್ನಡವನ್ನೇ ಅವರು ಆಡಳಿತ ಭಾಷೆಯನ್ನಾಗಿ ಮಾಡುತ್ತಿದ್ದಾರೆ. ಈ ತಂತ್ರಾಂಶವನ್ನು ತಿದ್ದಬೇಕೆಂದು ಕನ್ನಡದ ಹಲವಾರು ಸಾಫ್ಟವೇರ್ ಇಂಜಿನಿಯರ್‌ಗಳು ಮತ್ತು ಕಂಬಾರರಂಥ ಸಾಹಿತಿಗಳು ಮನವಿ ಮಾಡಿದ್ದರೂ ಮೈಕ್ರೋಸಾಫ್ಟ್ ಕಂಪನಿ ದುರಹಂಕಾರದಿಂದ ಅದೇ ಕುಲಗೆಟ್ಟ ಕನ್ನಡವನ್ನು ಸರ್ಕಾರಕ್ಕೆ ಸರಬರಾಜು ಮಾಡಿದೆ. ನಾಚಿಕೆಗೆಟ್ಟ ಸರ್ಕಾರ ಅದನ್ನೇ ಆಡಳಿತ ಭಾಷೆಯನ್ನಾಗಿ ಮಾಡಿ ಕನ್ನಡಿಗರಿಗೆಲ್ಲಾ ಕಡ್ಡಾಯ ಮಾಡುತ್ತಿದೆ.

ಮೈಕ್ರೋಸಾಫ್ಟ್‌ನೊಂದಿಗೆ ಮಾಡಿಕೊಂಡಿರುವ ಈ ಒಪ್ಪಂದದಿಂದಾಗಿ ಒಂದೆಡೆ ಕನ್ನಡಿಗರ ತೆರಿಗೆ ಹಣ ವಿನಾಕಾರಣ ಮೈಕ್ರೋಸಾಫ್ಟ್‌ನಂಥ ಲಾಭಕೋರ ಬಹುರಾಷ್ಟ್ರೀಯ ಕಂಪನಿಗಳ ಪಾಲಾದರೆ ಇನ್ನೊಂದೆಡೆ ಕನ್ನಡ ಭಾಷೆಯು ಶಾಶ್ವತವಾಗಿ ಊನಗೊಳ್ಳುವ ಅಪಾಯ ಹೆಚ್ಚಿದೆ. ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ಮೈಕ್ರೋಸಾಫ್ಟ್‌ನಿಂದಾಗುತ್ತಿರುವ ಅನ್ಯಾಯದ ವಿರುದ್ಧ ಕೆಲವು ಕಾಳಜಿಯುಳ್ಳ ಕನ್ನಡಿಗ ಬುದ್ಧಿಜೀವಿಗಳು ಅಂತರ್ಜಾಲದಲ್ಲಿ ಪ್ರತಿಭಟನೆ ಪ್ರಾರಂಭಿಸಿದ್ದಾರೆ. ಅವರ ಅಂತರ್ಜಾಲದ ವಿಳಾಸ ಹೀಗಿದೆ **http: //savekannada. googlepages.com.**

ಆದರೆ ಈ ಹೋರಾಟ ಅಂತರ್ಜಾಲದಿಂದ ಬೀದಿಗೆ ಬರದೆ ಮೈಕ್ರೋಸಾಫ್ಟಿನ ಜೀತ ಕನ್ನಡಿಗರಿಗೆ ಮತ್ತು ಕನ್ನಡಕ್ಕೆ ತಪ್ಪುವುದಿಲ್ಲ.

No Comments



"ಯಡಿಯೂರಪ್ಪನವರಿಗೆ ಅನ್ಯಾಯ ಮಾಡಿದ್ದೇನೆಂದು ದೇವೇಗೌಡರಿಗೆ ಅನಿಸಿದರೆ ಹೊರಗಿನಿಂದ ಬೇಷರತ್ ಬೆಂಬಲ ನೀಡಲಿ."

- ಯಡಿಯೂರಪ್ಪ

"ಕುಮಾರಸ್ವಾಮಿಯವರು ನಾಯಕತ್ವ ವಹಿಸಿಕೊಂಡು ಎಲ್ಲರಿಗೂ ಸಮ್ಮತವಾದ ನಿರ್ಣ[illegible] ತೆಗೆದುಕೊಂಡರೆ ಸರಿ. ಇಲ್ಲವಾದರೆ ನಮ್ಮ ದಾರಿ ನಮ[illegible] ಅವರ ದಾರಿ ಅವರಿಗೆ."

- ಜೆಡಿಎಸ್ ಶಾಸಕರ ಒಂದು ಗುಂಪು



"ಎಚ್. ಡಿ. ದೇವೇಗೌಡರಿಗೆ ಬಿಜೆಪಿ ನಾಯಕರು ಧರ್ಮಪತ್ನಿ ಎನ್ನುವುದೊಂದು ಬಾಕಿ."

- ಬಂಗಾರಪ್ಪ

"ಮೋದಿ ಒಬ್ಬ ಫ್ಯಾಸಿಸ್ಟ್ ಆಗಿದ್ದು ಹೈಕಮಾ[illegible] ಅವರ ಬಗ್ಗೆ ಬೇರೆಯದೇ ಆದ ಮಾನದಂಡ ಅನುಸರಿಸು[illegible] ಹಿರಿಯ ನಾಯಕ ಅಡ್ವಾಣಿಯವರೂ ಬದಲಾಗಿ[illegible]ದ್ದಾರೆ."

- ಸುರೇಶ್ ಮೆಹ್ತಾ, ಗುಜರಾತ್ ಬಿ[illegible] ಘಟಕದ ನಾಯ[illegible]

"ವಚನಭ್ರಷ್ಟತೆಯಲ್ಲಿ ಜೆಡಿಎಸ್-ಬಿಜೆಪಿ ಎರಡೂ ಒಂದೇ[illegible]"

- ಎಚ್. ವಿಶ್ವನಾ[illegible]

ನಂಬಿದ್ರೆನಂಬಿ ಬಿಟ್ರೆಬಿಡಿ



"ಬಿಜೆಪಿಗೆ ಅಧಿಕಾರ ನೀಡದಿರುವುದಕ್ಕೆ ಆರೆಸ್ಸೆಸ್‌ನ ಹಿಡನ್ ಅಜೆಂಡಾವೇ ಕಾರಣ."

- ಎಚ್. ಡಿ. ಕುಮಾರಸ್ವಾಮಿ

"ಯಾವುದೇ ಕಾರಣಕ್ಕೂ ಬಿಜೆಪಿ ಜೊತೆ ಮೈತ್ರಿ ಸಾಧ್ಯವಿಲ್ಲ."

- ಕುಮಾರಸ್ವಾಮಿ

"ಅಂತರರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆಯೊಂ[illegible] ಮಾತುಕತೆ ಪ್ರಾರಂಭಿಸಿದರೆ ಬೆಂಬಲ ವಾಪಸ್."

- ಎಡ ಪಕ್ಷಗಳ ನಾಯಕ[illegible]

"ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿರುವ ಬೆಂಗಳೂ[illegible] ಮಂಗಳೂರು ರೈಲನ್ನು ಖಂಡಿತವಾಗಿ ನವೆಂಬರ್ 15ರಿ[illegible] ಪ್ರಾರಂಭಿಸುತ್ತೇವೆ."

-ಆರ್. ವೇಲು. ಕೇಂದ್ರದ ರಾಜ್ಯ ರೈಲು ಮ[illegible]

ಕಂಕನರಿಗಳ ಕೈಗೆ ಅಧಿಕಾರ ಕೊಟ್ಟರೆ ಇದಾಗುತ್ತದೆ!

"ಸ್ವತಂತ್ರ ವಿದೇಶಾಂಗ ನೀತಿ ಎಂಬುದೊಂದು ಇರುವುದಿ[illegible] ಪ್ರತಿಯೊಂದು ದೇಶವೂ ತನ್ನ ಹಿತಕ್ಕೆ ಪೂರಕವಾ[illegible] ನೀತಿ ಅನುಸರಿಸುತ್ತವೆ ಅಷ್ಟೆ."

- ಕೆ. ಸುಬ್ರಹ್ಮಣ್ಯ[illegible] ಪ್ರಧಾನ ಮಂತ್ರಿಯ ಆಪ್ತ ಸಲಹೆಗಾ[illegible]

21ನೇ ಶತಮಾನದ ವಿಜ್ಞಾನಕ್ಕೆ ಭಾರತದ ಕೊಡುಗೆ!

"ಅಮಾವಾಸ್ಯೆಯ ದಿನದಂದು ಹುಟ್ಟಿದವರಲ್ಲಿ ಬೆರಳೆಣಿ[illegible]ಯಷ್ಟು ಮಂದಿ ಮಾತ್ರ ಉತ್ತಮರಾಗುತ್ತಾರೆ. ಉ[illegible] ಬಹಳಷ್ಟು ಮಂದಿ ಸಮಾಜಬಾಹಿರರೂ, ಉಗ್ರ[illegible] ಆಗುತ್ತಾರೆ."

-ಆಳುವ ಪಕ್ಷಗಳ ಆಸ್ಥಾನ ಜ್ಯೋ[illegible] ಸೋಮಯಾ[illegible]

ಇದೇ ಸತ್ಯ!

"ಗುಜರಾತ್ ಅತ್ಯಂತ ಕ್ಷೇಮವಾಗಿರುವ ಮತ್ತು ಅಪರಾ[illegible] ಮುಕ್ತ ರಾಜ್ಯ ಎಂದು ಸಾಬೀತುಪಡಿಸಿದಲ್ಲಿ ನಾ[illegible] ಸಾರ್ವಜನಿಕ ಜೀವನದಿಂದಲೇ ನಿವೃತ್ತಿ ಹೊಂದುತ್ತೇನೆ[illegible]"

-ಸುರೇಶ್ ಮೆಹ್ತಾ, ಗುಜರಾತ್ ಬಿಜ[illegible] ಘಟಕದ ನಾಯ[illegible]

ಇದು ಈಗ ಗೊತ್ತಾಯಿತೇ?

"ಬಹುಮತ ಸಿಕ್ಕರೆ ಬಾಬಾಬುಡನ್‌ಗಿರಿಯ[illegible] ಪೂರ್ಣಪ್ರಮಾಣದ ದತ್ತಪೀಠ ಮಾಡುತ್ತೇವೆ ಎಂ[illegible] ಹೇಳುತ್ತಿರುವ ಬಿಜೆಪಿ ನಾಯಕರಿಗೆ ಅಧಿಕಾರ ನೀಡಬೇಕೆ[illegible]"

-ಎಚ್.ಡಿ.ಕುಮಾರಸ್ವಾ[illegible]

ಆಳಿಗೊಂದು ಕಲ್ಲು!

"ಕಾಂಗ್ರೆಸ್ ಪಕ್ಷದಲ್ಲಿರುವ ದೇವೇ ಗೌಡರ ನೆಂಟರ[illegible] ಉಚ್ಚಾಟಿಸಿ."

-ಎಚ್. ವಿಶ್ವನಾ[illegible]

ಇದನ್ನು ಹೇಳಲು ಜ್ಯೋತಿಷ್ಯ ಬೇ[illegible]

"ಯಡಿಯೂರಪ್ಪ ಮುಖ್ಯಮಂತ್ರಿ ಆಗುವ ಸಾಧ್[illegible] ಕಡಿಮೆ."

-ಆಳುವ ಪಕ್ಷಗಳ ಆಸ್ಥಾನ ಜ್ಯೋ[illegible] ಸೋಮಯಾ[illegible]

ಗೋರ್ ಎಂಬ ವಿಭಿನ್ನ ವ್ಯಕ್ತಿ



ಕಂಡಹಾಗೆ

ಈತ ಒಮ್ಮೆಗೆ ವಿಭಿನ್ನವಾಗಿಯೂ, ವಿಚಿತ್ರ ಗಳಿಗೆಗಳ ಮನುಷ್ಯನಾಗಿಯೂ ಕಾಣುವ ಅಮೆರಿಕನ್. ಜೀವನದುದ್ದಕ್ಕೂ ಮುಖ್ಯಧಾರೆಯಲ್ಲಿಯೇ ಸಾಗುತ್ತಾ ಬಂದ ಈತ ಅದರ ಪ್ರವಾಹದಲ್ಲೇ ತೇಲಿ ಹೋಗುವ ಬದಲು ಆ ಪ್ರವಾಹದ ಮೇಲೆ ತನ್ನ ಛಾಪನ್ನು ಮೂಡಿಸಲು ಯತ್ನಿಸಿದ ವ್ಯಕ್ತಿ.

ಈತನ ಹೆಸರು ಅಲ್ ಗೋರ್.

ಅಮೆರಿಕದ ಮಾಜಿ ಉಪಾಧ್ಯಕ್ಷನಾದ, 'An Inconvenient Truth' ಎಂಬ ಸಾಕ್ಷ್ಯ ಚಿತ್ರದಲ್ಲಿ ಭಾಗವಹಿಸಿ ಜಾಗತಿಕ ತಾಪಮಾನದ ಏರುವಿಕೆಯ ಬಗ್ಗೆ ಎಲ್ಲೆಡೆ ಎಚ್ಚರ ಮೂಡಿಸಿದ, ಅದಕ್ಕಾಗಿಯೇ ಈಗತಾನೇ ಶಾಂತಿಗಾಗಿ ನೋಬೆಲ್ ಪ್ರಶಸ್ತಿ ಪಡೆದ ಮನುಷ್ಯ ಗೋರ್.

ಹಾಗೆ ನೋಡಿದರೆ ಗೋರ್ ಕೂಡ ಅದೆಷ್ಟೋ ಅಮೆರಿಕನ್ನರಂತೆ ಸಾಮಾನ್ಯ ಮನುಷ್ಯನಾಗುವ-ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಮೆರಿಕದ ಹಾಲಿ ಅಧ್ಯಕ್ಷ ಜಾರ್ಜ್ ಬುಷ್‌ನಂತೆ ಯುದ್ಧಕೋರನೂ, ಅತಾರ್ಕಿಕ ವಾದಗಾರನೂ, ಅಸಂಬದ್ಧ ಚಿಂತನೆಯವನೂ ಆಗುವ-ಅಪಾಯವಿತ್ತು, ಯಾಕೆಂದರೆ ಬುಷ್‌ನಂತೆ ಗೋರ್ ಕೂಡ ಹಣ ಮತ್ತು ರಾಜಕೀಯ ಹಿರಿಮೆ ಹೊಂದಿದ್ದ ವಂಶದಲ್ಲಿ ಜನಿಸಿದ್ದ, ಆತನಂತೆ ಖ್ಯಾತ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಪಡೆದ, ಕೊನೆಗೆ ಸಕ್ರಿಯ ರಾಜಕೀಯಕ್ಕೂ ಕಾಲಿಟ್ಟ.

ಆದರೆ ಪ್ರತಿಯೊಬ್ಬರ ವ್ಯಕ್ತಿತ್ವವನ್ನು ರೂಪಿಸು ವುದು ಅವರ ಅನುಭವಗಳು. ಉದಾಹರಣೆಗೆ ಜಾರ್ಜ್ ಬುಷ್ ತನ್ನ ವಂಶದ ಬಲ ಉಪಯೋಗಿಸಿ ಕೊಂಡು ವಿಯಟ್ನಾಮ್ ಯುದ್ಧದಲ್ಲಿ 'ಪಾಲ್ಗೊಂಡರೂ' ಎಂದೂ ಯುದ್ಧ ಭೂಮಿಯಲ್ಲಿ ಕಾಲಿಡದಂತೆ ಎಚ್ಚರ ವಹಿಸಿದ. ಇಂತಹದೇ ನಕಲಿ ಪಾಲ್ಗೊಳ್ಳುವಿಕೆಯ ಅವಕಾಶ ಅಲ್ ಗೋರ್‌ಗೂ ಒದಗಿ ಬಂದಿತ್ತು. ಆದರೆ ಆತ ಆ ಅವಕಾಶವನ್ನು ನಿರಾಕರಿಸಿದ. ಗೋರ್ ಈ ಕಾರಣಕ್ಕೆ ಮಾತ್ರ ವಿಚಿತ್ರವಾಗಿಯೂ, ವಿಭಿನ್ನವಾಗಿಯೂ ಕಾಣಿಸುವುದಿಲ್ಲ, ಆತ ಮೊದಲೇ ನೈತಿಕ ಕಾರಣಗಳಿಗಾಗಿ ವಿಯಟ್ನಾಮ್ ಯುದ್ಧವನ್ನು ವಿರೋಧಿಸಿದ್ದ ಆದರೆ ತನ್ನ ನಾಗರಿಕ ಜವಾಬ್ದಾರಿಗಳಿಂದ ಹಿಂಜರಿಯಬಾರದೆಂದು ಸೈನ್ಯವನ್ನು ಸೇರಿದ್ದ.

ಆ ಯುದ್ಧದಲ್ಲಿ ತಾನು ಕಂಡದ್ದನ್ನು ಗೋರ್ ಹೀಗೆ ವಿವರಿಸುತ್ತಾನೆ:

"ಆ ಯುದ್ಧ ಒಂದು ದೊಡ್ಡ ತಪ್ಪು ಎಂಬ ನನ್ನ ಅಭಿಪ್ರಾಯದಲ್ಲಿ ಯಾವ ಬದಲಾವಣೆಗಳೂ ಆಗಲಿಲ್ಲ. ಆದರೆ ಅದನ್ನು ವಿರೋಧಿಸುತ್ತಿದ್ದ ನನ್ನಂತಹವರನ್ನೂ ಅಚ್ಚರಿಗೊಳಿಸಿದ ಅಂಶ ಯಾವುದೆಂದರೆ ಅಲ್ಲಿನ ಜನ ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕೆಂದು ತೀವ್ರವಾಗಿ ಹೋರಾಟ ಮಾಡುತ್ತಿದ್ದದ್ದು."

ಇಂತಹ ಅನುಭವ ಇಲ್ಲದ ಬುಷ್ ಬೇರೆ ದೇಶಗಳ ಮೇಲೆ ದಾಳಿ ನಡೆಸುತ್ತಾನಲ್ಲದೆ, ಸೈನ್ಯದ ಸಮವಸ್ತ್ರ ಧರಿಸಿ ಫ್ಯಾಷನ್ ಶೋನಲ್ಲಿ ಭಾಗವಹಿಸುವ ಮಾಡೆಲ್‌ನಂತೆ ಮಾಧ್ಯಮಗಳಿಗೆ ಪೋಸ್ ಕೊಡುತ್ತಾನೆ.

ಯುದ್ಧದಿಂದ ಹಿಂದಿರುಗಿದ ಗೋರ್ ತನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಐದು ವರ್ಷಗಳ ಕಾಲ ತನ್ನ ರಾಜ್ಯದಲ್ಲಿನ ಪತ್ರಿಕೆಯೊಂದರಲ್ಲಿ ವರದಿಗಾರನಾಗಿ ಕೆಲಸ ಮಾಡಿದ. ಆಗ ಆತ ಬರೆದ ತನಿಖಾ ವರದಿಗಳಿಂದಾಗಿ ಅಲ್ಲಿನ ಪೌರಾಡಳಿತದಲ್ಲಿನ ಭ್ರಷ್ಟಾಚಾರ ಬಹಿರಂಗಗೊಂಡು ಇಬ್ಬರು ಅಧಿಕಾರಿಗಳಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು. ಆದರೆ ಅದು ಗೋರ್‌ಗೆ ಸಮಾಧಾನ ತರಲಿಲ್ಲ. ಭ್ರಷ್ಟಾಚಾರವನ್ನು ಬಹಿರಂಗಗೊಳಿಸುವ ಬದಲಾಗಿ ಅದನ್ನು ತಡೆಯಬಹುದಾದ ಸ್ಥಾನದಲ್ಲಿದ್ದರೆ ವಾಸಿ ಎಂದು ನಿರ್ಧರಿಸಿದ. ಆ ನಿಟ್ಟಿನಲ್ಲಿ ವಕೀಲನಾಗಬೇಕೆಂದು ಕಾನೂನು ವಿದ್ಯಾಲಯವನ್ನು ಸೇರಿದ.

ಆದರೆ ಅದನ್ನು ಸಂಪೂರ್ಣಗೊಳಿಸುವ ಮುನ್ನ ಆತನ ಕ್ಷೇತ್ರದ ರಾಜಕೀಯ ನಾಯಕ ನಿವೃತ್ತಿ ಘೋಷಿಸಿದ.



ಆ ಸ್ಥಾನಕ್ಕೆ ತಾನೇಕೆ ಸ್ಪರ್ಧಿಸಬಾರದೆಂದು ಚಿಂತಿಸಿ ಸಕ್ರಿಯ ರಾಜಕೀಯವನ್ನು ಗೋರ್ ಪ್ರವೇಶಿಸಿದ. ಸ್ಥಳೀಯ ಚುನಾವಣೆಗಳಲ್ಲಿ ಗೆದ್ದು ರಾಜಕೀಯವಾಗಿ ಬೆಳೆದ ಗೋರ್ ಹಲವು ಬಾರಿ ಸೆನೇಟರ್ ಆಗಿಯೂ ಆಯ್ಕೆಯಾದ.

ಆದರೆ ಅಲ್ಲೂ ಗೋರ್‌ನದ್ದು ವಿಶಿಷ್ಟ ನಿಲುವುಗಳು. ಯಾವ ಸದ್ದಾಂ ಹುಸೇನನು ಸಾಮೂಹಿಕ ವಿನಾಶಕಾರಿ ಅಸ್ತ್ರಗಳನ್ನು ಹೊಂದಿದ್ದನೆಂದೂ, ಇರಾಕಿನಲ್ಲಿನ ಕುರ್ದ್ ಸಮುದಾಯದ ಜನಾಂಗೀಯ ಹತ್ಯೆ ನಡೆಸಿದ್ದನೆಂದು ಆತನಿಗೆ ಮೊನ್ನೆ ಅಮೆರಿಕ ಗಲ್ಲುಶಿಕ್ಷೆ ವಿಧಿಸಿತ್ತೋ, ಅದೇ ಅಮೆರಿಕ 80ರ ದಶಕದಲ್ಲಿ ಅದೇ ಸದ್ದಾಂನಿಗೆ ಆರ್ಥಿಕ ಮತ್ತು ಶಸ್ತ್ರಾಸ್ತ್ರಗಳ ನೆರವನ್ನು ನೀಡುತ್ತಿದ್ದನ್ನು ಆಗಲೇ ಗೋರ್ ವಿರೋಧಿಸಿದ್ದ.

ಆಗ ಗೋರ್, ಸದ್ದಾಂನ ಕೃತ್ಯಗಳನ್ನು ತಡೆಯಬೇಕಾದರೆ ಆತನಿಗೆ ಅಮೆರಿಕಾ ಯಾವುದೇ ರೀತಿಯ ಸಹಾಯ ಮಾಡಬಾರದೆಂಬ ಕಾಯಿದೆಯನ್ನು ಸೆನೆಟ್‌ನಲ್ಲಿ ಜಾರಿಗೆ ತರಲು ಎರಡು ಬಾರಿ ಪ್ರಯತ್ನಿಸಿದ್ದ. ಆಗ ಗೋರ್‌ನನ್ನು ವಿರೋಧಿಸಿ ಆತ ರೂಪಿಸಿದ್ದ ಕಾಯಿದೆ ಅನುಷ್ಠಾನಕ್ಕೆ ಬಾರದಂತೆ ತಡೆದದ್ದು ಅಂದಿನ ಅಧ್ಯಕ್ಷ ರೊನಾಲ್ಡ್ ರೀಗನ್ ಮತ್ತು ಉಪಾಧ್ಯಕ್ಷ ಜಾರ್ಜ್ ಬುಷ್ (ಹಾಲಿ ಅಧ್ಯಕ್ಷನ ತಂದೆ) ಸರ್ಕಾರ. ಈ ವಿರೋಧದ ನಡುವೆಯೂ ಮತ್ತೆ 1988ರಲ್ಲಿ ಸಾಮೂಹಿಕ ಹತ್ಯಾವಿರೋಧಿ ಕಾಯಿದೆಯನ್ನು ಸೆನೆಟ್‌ನಲ್ಲಿ ಮಂಡಿಸಿದ್ದ. ಆಗ ರೇಗನ್‌ಗೆ ಗೋರ್ ಮೇಲೆ ಎಷ್ಟು ಕೋಪ ಬಂದಿತ್ತೆಂದರೆ ತನ್ನ ಅಧ್ಯಕ್ಷ ಸ್ಥಾನ ನೀಡಿದ ವೀಟೋ ಹಕ್ಕನ್ನು ಜಾರಿಗೊಳಿಸುವುದಾಗಿ ಬೆದರಿಸಿದ್ದ.

ಇದಕ್ಕೆ ಉತ್ತರವಾಗಿ ತಾನೇ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಗೋರ್ ನಿರ್ಧರಿಸಿದ. ಅದಕ್ಕೆಂದು ಎಲ್ಲಾ ತಯಾರಿಗಳು ನಡೆಯುತ್ತಿದ್ದಾಗಲೇ ಅಪಘಾತವೊಂದರಲ್ಲಿ ಆತನ ಮಗನಿಗೆ ಮಾರಣಾಂತಿಕ ಗಾಯಗಳಾದವು. ತನ್ನ ಅಧ್ಯಕ್ಷ ಕನಸುಗಳನ್ನು ಬದಿಗೊತ್ತಿ ಮಗನ ಶುಶ್ರೂಷೆಗೆ ತಂದೆ ಗೋರ್ ನಿಂತ. ಹಾಗೆ ಮಗನನ್ನು ನೋಡಿಕೊಳ್ಳುತ್ತಿದ್ದಾಗಲೇ ಪರಿಸರ ರಕ್ಷಣೆಯನ್ನು ಕುರಿತು 'Earth in the Balance' ಎಂಬ ಪುಸ್ತಕವನ್ನು ಬರೆದ. ಇದು ಅತ್ಯಂತ ಜನಪ್ರಿಯವಾಗಿ ಅಪಾರ ಸಂಖ್ಯೆಯಲ್ಲಿ ಮಾರಾಟವಾಯಿತು. 1992ರಲ್ಲಿ ಡೆಮಾಕ್ರಾಟ್ ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಬಿಲ್ ಕ್ಲಿಂಟನ್ ತನ್ನೊಂದಿಗೆ ಉಪಾಧ್ಯಕ್ಷ ಸ್ಥಾನದ ಸ್ಪರ್ಧಿಯಾಗಿ ಅಲ್ ಗೋರ್‌ನನ್ನು ಆಯ್ಕೆ ಮಾಡಿಕೊಂಡ. ಆ ಚುನಾವಣೆಯಲ್ಲಿ ಅವರಿಬ್ಬರೂ ಗೆದ್ದರು ಮಾತ್ರವಲ್ಲ, ಉಪಾಧ್ಯಕ್ಷನಾಗಿ ಪರಿಸರ ರಕ್ಷಣಾ ನಿಟ್ಟಿನಲ್ಲಿ ಹಲವು ಕಾನೂನುಗಳು ಜಾರಿಗೆ ಬರುವಂತೆ ಗೋರ್ ನೋಡಿಕೊಂಡ. ಎಂಟು ವರ್ಷಗಳ ಕಾಲ ಉಪಾಧ್ಯಕ್ಷನಾದ ಗೋರ್ 2000ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ. ಆ ಚುನಾವಣೆಯಲ್ಲಿ ಮತಚೀಟಿಗಳಲ್ಲಿ ಗೊಂದಲ ಸೃಷ್ಟಿಯಾಗಿ ಅಮೆರಿಕಾದ ಸರ್ವೋಚ್ಚ ನ್ಯಾಯಾಲಯ ಗೋರ್‌ನ ಪ್ರತಿಸ್ಪರ್ಧಿ ಜಾರ್ಜ್ ಬುಷ್ ಗೆದ್ದಿದ್ದಾನೆಂದು ಘೋಷಿಸಿತು. ಈ ತೀರ್ಪನ್ನು ಗೋರ್ ಪ್ರಶ್ನಿಸಬಹುದಿತ್ತು, ಆದರೆ ಆತ ಹಾಗೆ ಮಾಡಲಿಲ್ಲ. ಬದಲಾಗಿ "ನಮ್ಮ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ಮತ್ತು ಜನರ ಐಕ್ಯತೆಯನ್ನು ಕಾಪಾಡಲು ಈ ತೀರ್ಪನ್ನು ಒಪ್ಪಿಕೊಳ್ಳುತ್ತೇನೆ" ಎಂದು ಹೇಳಿ ತನ್ನ ಸಜ್ಜನಿಕೆಯನ್ನು ಮೆರೆದ. ವಾಸ್ತವವಾಗಿ ಆ ಚುನಾವಣೆಗಳಲ್ಲಿ ಬುಷ್‌ಗಿಂತಲೂ ಗೋರ್‌ಗೆ ಐವತ್ತು ಲಕ್ಷ ಹೆಚ್ಚು ಮತಗಳು ಬಂದಿದ್ದವು! ಆದ್ದರಿಂದ ಆತ ಮತ್ತೆ 2004ರಲ್ಲಿ ಬುಷ್ ವಿರುದ್ಧ ಸ್ಪರ್ಧಿಸಬೇಕೆಂಬ ಒತ್ತಡ ಪ್ರಾರಂಭವಾಯಿತು. ಇದಕ್ಕೆ ಮಣಿಯದ ಗೋರ್ "ಇಲ್ಲ, ನಾನು ಸ್ಪರ್ಧಿಸುವುದಿಲ್ಲ, ಬದಲಾಗಿ ಹೊಸ ಮುಖಗಳು ಬರಲಿ" ಎಂದು ಹೇಳಿ ಸುಮ್ಮನಾದ.

ಸಾಮಾನ್ಯವಾಗಿ ಅಮೆರಿಕದ ಇಂತಹ ಉನ್ನತ



ಹುದ್ದೆಗಳನ್ನು ಅಲಂಕರಿಸಿದವರು ಆನಂತರ ನೆಮ್ಮದಿಯ, ನಿವೃತ್ತಿಯ ಜೀವನವನ್ನು ಸಾಗಿಸುತ್ತಾರೆ. ಆದರೆ ಗೋರ್ ಹಾಗೆ ಮಾಡಲಿಲ್ಲ. ಬದಲಾಗಿ ಪರಿಸರ ರಕ್ಷಣೆಗೆ ತನ್ನ ಜೀವವನ್ನೇ ಮುಡಿಪಾಗಿಟ್ಟ. ಅದರ ಬಗ್ಗೆ ಅರಿವು ಮೂಡಿಸಲು ಊರೂರು ಸುತ್ತಿದ. ಕಂಪ್ಯೂಟರ್ ಚಾರ್ಟ್‌ಗಳನ್ನು, ಅಂಕಿ ಅಂಶಗಳನ್ನು, ತಾಪಮಾನ ಏರಿಕೆಯಿಂದಾಗುತ್ತಿರುವ ಬದಲಾವಣೆಗಳನ್ನು, ಇದೆಲ್ಲದರಿಂದ ಭೂಮಿಗೆ ಆಗಲಿರುವ ಅಪಾಯಗಳನ್ನು ಕುರಿತು ಭಾಷಣಗಳನ್ನು ನೀಡಿದ.

ಈ ಭಾಷಣಗಳು ಎಷ್ಟು ಜನಪ್ರಿಯತೆ ಪಡೆದವೆಂದರೆ ಅದಕ್ಕೆಂದು ನೀಡುತ್ತಿದ್ದ ಟಿಕೆಟ್‌ಗಳು ಕ್ಷಣಾರ್ಧದಲ್ಲಿ ಮಾರಾಟವಾಗುತ್ತಿದ್ದವು. ಇದು ಹಲವಾರು ಕಡೆ ನಡೆದಾಗ ಗೋರ್‌ರವರ ಈ ಭಾಷಣವನ್ನೇ ಯಾಕೆ ಒಂದು ಸಾಕ್ಷ್ಯ ಚಿತ್ರವನ್ನಾಗಿಸಬಾರದು ಎಂಬ ಚಿಂತನೆ ಡೇವಿಸ್ ಗುಗನ್‌ಹೈಮ್ ಎಂಬುವವರಲ್ಲಿ ಮೂಡಿತು. ಅದರ ಪರಿಣಾಮವೇ 'An Inconvenient Truth' ಎಂಬ ಚಿತ್ರ.

ಮೊದಮೊದಲು ಈ ಚಿತ್ರ ಬಾಕ್ಸ್ ಆಫೀಸಿನಲ್ಲಿ ಫ್ಲಾಪ್ ಆಗುತ್ತದೆ ಎಂದೇ ಎಲ್ಲರೂ ಲೆಕ್ಕ ಹಾಕಿದ್ದರು. ಆದರೆ ಇದು ಯಶಸ್ವಿ ಚಿತ್ರವಾಯಿತಲ್ಲದೆ ಅದಕ್ಕೆ ಸಾಕ್ಷ್ಯ ಚಿತ್ರಗಳ ವಿಭಾಗದಲ್ಲಿ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿಯೂ ಲಭಿಸಿತು. ಎಪ್ಪತ್ತರ ದಶಕದಲ್ಲೇ ಟೀವಿ ಮಾಧ್ಯಮದಿಂದ ಪ್ರಜಾಪ್ರಭುತ್ವದ ಆಶಯಗಳು ನಶಿಸುತ್ತವೆ ಎಂಬುದನ್ನು ಅರ್ಥಮಾಡಿಕೊಂಡಿದ್ದ-ಆಗಿನ್ನೂ ಅಂತರ್‌ಜಾಲದ ಬಗೆಗಿನ ಕಲ್ಪನೆ ಅಷ್ಟಿರಲಿಲ್ಲ-ಗೋರ್ ಇಂಟರ್‌ನೆಟ್ ಅನ್ನು ಸ್ಥಾಪಿಸಲು ಅನುಕೂಲವಾಗುವಂತೆ ಕಾನೂನಿನ ನೆರವನ್ನೂ ನೀಡಿದ್ದ. ಆಧುನಿಕ ತಂತ್ರಜ್ಞಾನದ ಕೊಡುಗೆಯಾದ ಅಂತರ್‌ಜಾಲ ನಿಜಕ್ಕೂ ಪ್ರಜಾಸತ್ತಾತ್ಮಕ ವೇದಿಕೆಯಾಗುತ್ತದೆಂದೂ, ಅದರ ಮೂಲಕ ವಿದ್ಯೆಯಿಂದ ಹಿಡಿದು ಮಾಹಿತಿಯ ಪ್ರಸಾರವೂ ಸುಲಭವಾಗುತ್ತದೆಂದೂ ಅರಿತ ಪ್ರಥಮ ರಾಜಕಾರಣಿಗಳಲ್ಲಿ ಗೋರ್ ಪ್ರಮುಖರು. ಇದು ಇವತ್ತು ಬಹಳಷ್ಟು ನಿಜವಾಗಿದೆ....

ಇದೆಲ್ಲದರ ಮಧ್ಯೆ ಗೋರ್ ಬುಷ್‌ರವರ ಯುದ್ಧಕೋರತನವನ್ನು ವಿರೋದಿಸುತ್ತಲೇ ಬಂದಿದ್ದಾರೆ. ಸೆಪ್ಟೆಂಬರ್ 11ರಂದು ಅಮೆರಿಕದ ಮೇಲೆ ನಡೆದ ದಾಳಿಯನ್ನೇ ನೆಪವಾಗಿಟ್ಟುಕೊಂಡು ಇರಾಕಿನ ಮೇಲೆ ನಡೆಸಿದ ದಾಳಿಯನ್ನು ಕಟುವಾಗಿ ಟೀಕಿಸಿರುವ ಗೋರ್, ಬುಷ್‌ನ ಈ ನೀತಿಯನ್ನು ವಿರೋಧಿಸುವವರಿಗೆ ಧನ ಸಹಾಯ ಮಾಡುತ್ತಾ ಬಂದಿದ್ದಾರೆ.

ಹಾಗೆಯೇ ತಮ್ಮ ವೈಯಕ್ತಿಕ ಬದುಕಿನಲ್ಲೂ ಪರಿಸರ ರಕ್ಷಣಾ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಗೋರ್‌ರವರ ತಂದೆಯ ಜಮೀನಿನಲ್ಲಿ ತಂಬಾಕು ಬೆಳೆಸುತ್ತಿದ್ದರು. ಆದರೆ ತಂಬಾಕಿನಿಂದಾಗುವ ಹಾನಿಯನ್ನು ಅರಿತ ನಂತರ ಅದನ್ನು ಬೆಳೆಯುವುದನ್ನೇ ನಿಲ್ಲಿಸಿದರು. ಅಷ್ಟೇ ಅಲ್ಲ, ಪಿತ್ರಾರ್ಜಿತವಾಗಿ ಅವರಿಗೆ ಬಂದಿದ್ದ ಅಪಾರ ಮೌಲ್ಯದ ಅನಿಲ ಕಂಪೆನಿಗಳ ಶೇರುಗಳನ್ನು ಮಾರಿದರು. ಒಂದೆಡೆ ಪರಿಸರದ ಬಗ್ಗೆ ಕಾಳಜಿ ವ್ಯಕ್ತಪಡಿಸುತ್ತಾ, ಅದೇ ಪರಿಸರಕ್ಕೆ ಹಾನಿ ಮಾಡುತ್ತಿರುವ ಅನಿಲ ಕಂಪನಿಗಳ ಶೇರುಗಳನ್ನು ಹೊಂದುವುದು ನೈತಿಕತೆಯಲ್ಲ ಎಂಬ ಏಕೈಕ ಕಾರಣದಿಂದ.

ಅಲ್ ಗೋರ್ ನಿಜವಾಗಲೂ ವಿಭಿನ್ನ ವ್ಯಕ್ತಿತ್ವದ ಮನುಷ್ಯ. ನಮ್ಮ ಭೂಮಿಯನ್ನು ನಮ್ಮ ಮಕ್ಕಳಿಗಾಗಿ, ಮೊಮ್ಮಕ್ಕಳಿಗಾಗಿ ಉಳಿಸಬೇಕೆಂಬುದರ ಬಗ್ಗೆ ಜಾಗತಿಕ ಎಚ್ಚರಿಕೆಯನ್ನು ನೀಡಿದ ವ್ಯಕ್ತಿ. ಇಂತಹ ವ್ಯಕ್ತಿಗೆ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿದೆ. ಹಾಗೆ ನೋಡಿದರೆ ರಕ್ತಸಿಕ್ತ ಯುದ್ಧಗಳನ್ನು ನಿಲ್ಲಿಸಿದ್ದಕ್ಕೆ ಅಥವಾ ತಡೆದಿದ್ದಕ್ಕೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಈಗ ಪ್ರಕೃತಿಯೊಂದಿಗೆ ಮಾನವ ನಡೆಸುತ್ತಿರುವ ವಿನಾಶಕಾರಿ ಯುದ್ಧವನ್ನು ತುರ್ತಾಗಿ ತಡೆಯಬೇಕು ಎಂದಿದ್ದಕ್ಕೆ ಗೋರ್‌ಗೆ ಇದನ್ನು ನೀಡಲಾಗಿದೆ.

ಇದು ನಿಜಕ್ಕೂ ಅರ್ಥಪೂರ್ಣವಾಗಿದೆ...

-ಗೌರಿ ಲಂಕೇಶ್

ಮುಂದಿನ ವಾರ 'ಲಂಕೇಶ್' ಶನಿವಾರವೇ ಬರಲಿದೆ


ಮುಂದಿನ 'ಲಂಕೇಶ್' ಸಂಚಿಕೆ 20.10.2007ರ ಶನಿವಾರವೇ ಮಾರುಕಟ್ಟೆಗೆ ಬರುತ್ತಿದೆ. ಜೊತೆಗೆ 'ಗೈಡ್' ಕೂಡ ಇರುತ್ತದೆ. ಆಯುಧ ಪೂಜೆಯ ದಿನ ಪ್ರಿಂಟಿಂಗ್ ಪ್ರೆಸ್‌ಗಳಿಗೆ ರಜಾ ಇರುವ ಕಾರಣ ಈ ತಾತ್ಕಾಲಿಕ ವ್ಯವಸ್ಥೆ ಅಷ್ಟೆ.

ಆನಂತರ ಎಂದಿನಂತೆ ಪ್ರತಿ ಸೋಮವಾರ ನಮ್ಮ-ನಿಮ್ಮ ಭೇಟಿ.

ಏಜಂಟರು ದಯಮಾಡಿ ಗಮನಿಸಿ

ಅಕ್ಟೋಬರ್ 20ರ ಶನಿವಾರ ಬೆಳಗ್ಗೆ ನಿಮಗೆ 'ಲಂಕೇಶ್' ಹಾಗೂ 'ಗೈಡ್'ನ ನವೆಂಬರ್ ಸಂಚಿಕೆಗಳು ತಲುಪಲಿವೆ.


ಹುಬ್ಬಳ್ಳಿ: ಬಿಜೆಪಿ ಲಿಂಗಾಯತರಿಗೆ ಬ್ರಾಹ್ಮಣರ ಸ್ಕೆಚ್!


ಪ್ರಹ್ಲಾದ ಜೋ

ರಾಜ್ಯಾದ್ಯಂತ ಬಿಜೆಪಿಯೊಳಗೆ ಹೊಗೆಯಾಡುತ್ತಿರುವ ಲಿಂಗಾಯತ-ಬ್ರಾಹ್ಮಣ ಒಳಜಗಳ ಹುಬ್ಬಳ್ಳಿಯಲ್ಲಿ ಕ್ಲೈಮಾಕ್ಸ್ ತಲುಪಿದೆ.

ಅನಂತ್‌ಕುಮಾರ್ ಶಿಷ್ಯ ದತ್ತಾ ಡೋರ್ಲೆ ಮೀಡಿಯಾಗಳೆದುರು ಶಾಲಾ ಬಾಲಕನಂತೆ 'ಅಶೋಕ್ ಕಾಟವೆ ನನ್ನ ಮೇಲೆ ಹಲ್ಲೆ ಮಾಡಿಬಿಟ್ಟ' ಎಂದು ಗಳಗಳನೆ ಅತ್ತಿದ್ದಾನೆ. ಈ ಕಾಟವೆ ಯಡಿಯೂರಪ್ಪನ ಪಟ್ಟಾ ಶಿಷ್ಯ. ಜೊತೆಗೆ ವಾಯುವ್ಯ ಸಾರಿಗೆ ನಿಗಮದ ಅಧ್ಯಕ್ಷನೂ ಹೌದು.

ಮೊನ್ನೆ ಅಕ್ಟೋಬರ್ 11 ರ ಗುರುವಾರ ಆರ್‌ಎಸ್‌ಎಸ್ ಕಚೇರಿಯೊಳಗೆ ದತ್ತಾನಿಗೆ ಅಶೋಕ್ ಕಾಟವೆ ಬರೀ ಮಾತಿನ ಒದೆ ಕೊಟ್ಟನೋ ಇಲ್ಲಾ ಝಾಡಿಸಿ ಒದ್ದನೋ ಶ್ರೀರಾಮಚಂದ್ರನೇ ಬಲ್ಲ. ಅವತ್ತು ಅಲ್ಲಿ ಏನೇ ನಡೆದಿರಲಿ, ಒಟ್ಟಾರೆ ಗೊತ್ತಾಗಿದ್ದೇನೆಂದರೆ ಈಗ ಕರ್ನಾಟಕದ ಎಲ್ಲೆಡೆ ಬಿಜೆಪಿಯೊಳಗೆ ಶುರುವಾಗಿರುವ ಬ್ರಾಹ್ಮಣ-ಲಿಂಗಾಯತ ಜಗಳ ಹುಬ್ಬಳ್ಳಿಯಲ್ಲೂ ಭುಗಿಲೆದ್ದಿದೆ. ಪರಸ್ಪರ ಹೊಡೆದಾಟಕ್ಕೂ ನಿಂತಿರುವ ಈ ರಾಮಭಕ್ತ ಕಪಿಸೈನ್ಯದ ಗಲಾಟೆ ಎಷ್ಟು ಜೋರಾಗಿದೆಯೆಂದರೆ ಅಕ್ಟೋಬರ್ 15 ರಂದು ನಿಗದಿಯಾಗಿದ್ದ ಧರ್ಮಯುದ್ಧ ಯಾತ್ರೆಯೂ ಈಗ ರದ್ದಾಗಿಹೋಗಿದೆ. ಅನಂತ್‌ಕುಮಾರ್ ಬಣದ ಸಂಸದ ಪ್ರಹ್ಲಾದ ಜೋಶಿ, ಅವನ ಶಿಷ್ಯ ಉಮೇಶ್, ಸುಧೀರ್, ಸರಾಫರೆಂಬ ಚೆಡ್ಡಿಗಳೆಲ್ಲಾ ಕೂಡಿ 'ಯಡ್ಡಿಗೆ ಸಿಎಂಗಿರಿ ತಪ್ಪಿದರೆ ಇಲ್ಲಿ ನಾನ್ಯಾಕೆ ಹೋರಾಟ ಮಾಡಬೇಕು' ಎಂದು ಕೊಂಕು ಮಾತಾಡಲು ಶುರು ಮಾಡಿದೆ.





ಯಡ್ಡಿ ಬಣದ ಅಶೋಕ್ ಕಾಟವೆ

ವಾಸ್ತವವಾಗಿ ಯಡ್ಡಿಗೆ ಅಧಿಕಾರ ಹಸ್ತಾಂತರ ಆಗದೇ ಹೋದದ್ದರ ಬಗ್ಗೆ ಪ್ರತಿಭಟನೆ ಮಾಡುವ ಕುರಿತು ಚರ್ಚಿಸಲು ಈ ಸಭೆ ಕರೆಯಲಾಗಿತ್ತು. ಆದರೆ ಗಣೇಶನನ್ನು ಮಾಡಲು ಹೋಗಿ ಅವರಪ್ಪನ್ನು ಮಾಡಿದರು ಎನ್ನುವಂತೆ ಈ ಸಭೆ ಬಿಜೆಪಿಯೊಳಗಿನ ಗುಂಪುಗಾರಿಕೆಯನ್ನೇ ಬಹಿರಂಗಪಡಿಸಿಬಿಟ್ಟಿದೆ.

ಅಧಿಕಾರವಂಚಿತ ಯಡ್ಡಿ ಬಗ್ಗೆ ರಾಜ್ಯಾದ್ಯಂತ ಜನರ ಸಿಂಪಥಿ ಏಳುತ್ತಿದೆ ಹಾಗೂ ಅದನ್ನು ಎನ್‌ಕ್ಯಾಷ್ ಮಾಡಿಕೊಳ್ಳಬೇಕೆಂದು ಚೆಡ್ಡಿಗಳು 'ಧರ್ಮಯುದ್ಧ ಯಾತ್ರೆ'ಯ ಪ್ಲಾನ್ ಮಾಡಿದ್ದರು. ಅದರಂತೆ ಅಕ್ಟೋಬರ್ 11 ರ ಗುರುವಾರ ಹುಬ್ಬಳ್ಳಿಯ ಸರ್ಕ್ಯೂಟ್ ಹೌಸಿನಲ್ಲಿ ಚೆಡ್ಡಿಗಳ ಸಭೆ ಶುರುವಾಯಿತು. ಧಾರವಾಡ ಮಹಾನಗರ ಜಿಲ್ಲಾ ಘಟಕ ಈ ರಹಸ್ಯ ಸಭೆ ಕರೆದಿತ್ತು. ಆದರೆ ಸಭೆ ಶುರುವಾದ ಕೆಲವೇ ನಿಮಿಷಗಳಲ್ಲಿ ರಹಸ್ಯ ಗಿಹಸ್ಯಗಳೆಲ್ಲಾ ಬದಿಗೆ ಸರಿದು ಬಹಿರಂಗವಾಗಿದ್ದು ಕಿತ್ತಾಟ ಮಾತ್ರ. ಸಂಸದ ಪ್ರಹ್ಲಾದ ಜೋಶಿ, ಅವನ ಶಿಷ್ಯ ಉಮೇಶ್ ಜೋಶಿ, ಸುಧೀರ, ಸರಾಫ್, ದತ್ತಾ ಡೋರ್ಲೆ, ಲಿಂಗರಾಜ ಪಾಟೀಲ, ವೀರಣ್ಣ ಸವದಿ, ಜಗದೀಶ್ ಶೆಟ್ಟರ್, ನಾರಾಯಣ ಜರತಾರಿಘರ ಬಂದು ಕೂರುತ್ತಿದ್ದಂತೆ ಜಗಳ ಚಾಲೂ ಆಗೇಬಿಟ್ಟಿತು. ಸಭೆಗೆ ಯಾರ್‍ಯಾರನ್ನು ಕರೆದಿಲ್ಲ, ಯಾಕೆ ಕರೆದಿಲ್ಲ ಎಂಬ ಬಗ್ಗೆ ರಾಜೇಂದ್ರ ಗೋಖಲೆ ಹಾಗೂ ದತ್ತಣ್ಣ ನಡುವೆ ಗಲಾಟೆ ಆಯಿತು. ಪಕ್ಷದ ಈ ಇಬ್ಬರೂ ಶಿಸ್ತಿನ ಸಿಪಾಯಿಗಳು ಹಲ್ಕಾ, ಬೈಯ್ಗುಳ, ಪೋಲಿ ಸನ್ನೆಗಳ ಸಂಸ್ಕೃತ ಸಂಭಾಷಣೆ ನಡೆಸುತ್ತಿರುವಾಗಲೇ ಅಶೋಕ್ ಕಾಟವೆ ಪಾದ ಆಗಮಿಸಿತು. ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಹಾಗೂ ಯಡ್ಡಿ ಬಣದ ಕಾಟವೆ ಮಧ್ಯಸ್ಥಿಕೆ ಮಾಡಿ ಜಗಳ ಬಿಡಿಸಲು ಹೋದಾಗ ಅನಂತೂ ಬಣದ ದತ್ತಾ ಹೆಂಡ ಕುಡಿದ ಮಂಗನಂತೆ ಚೀರುತ್ತಾ ಸಭೆ ತ್ಯಜಿಸಿ ಆಚೆಗೆ ಕಾಲಿಟ್ಟ. ಅಲ್ಲಿಂದ ಕೂಗಾಡಿಕೊಂಡೇ ಆರ್‌ಎಸ್‌ಎಸ್ ಕಚೇರಿಗೆ ಹೋಗಿದ್ದಾನೆ. ಅಲ್ಲಿ ಚೆಡ್ಡಿ ಸಂಘದ ಮುಖಂಡ ಮಹೇಶ್ ಬೇಂದ್ರೆ ಇದ್ದ. ಹೇಳಿಕೇಳಿ ಚಿತ್ಪಾಳಿ ಕಿವಿಯವನಾದ ಬೇಂದ್ರೆಗೆ ಅಷ್ಟರಲ್ಲಾಗಲೇ ಅನಂತೂ ಗುಂಪಿನ ಪ್ರಹ್ಲಾದ ಜೋಶಿ, ದತ್ತಾ, ಸುಧೀರರೆಲ್ಲಾ ಕಾಟವೆ ಮೇಲೆ ಮೈಲುದ್ದ ಚಾಡಿ ಹೇಳಿ ಬೇಂದ್ರೆ ಕಿವಿ ಹಿಂಡಿಬಿಟ್ಟಿದ್ದರು. ಅಷ್ಟರಲ್ಲಿ ಕಾಟವೆಯೂ ಅಲ್ಲಿಗೆ ಬಂದು RSS ಲೀಡರ್‌ಗಳನ್ನು ದಬಾಯಿಸಿಬಿಟ್ಟರು. ಸರ್ಕ್ಯೂಟ್ ಹೌಸಿನ ಸಭೆಗೆ ಪಕ್ಷದ ಹಿರಿಯರಾದ ನಿಂಬಣ್ಣವರ್, ಡಾ. ಕರಿಯಣ್ಣವರ್ ಅವರನ್ನು ಯಾಕೆ ಕರೆದಿಲ್ಲ? ಸರ್ಕ್ಯೂಟ್ ಹೌಸಿನ ಸಭೆಯನ್ನು RSS ಕಚೇರಿಗೆ ತಂದದ್ದು ಯಾಕೆ? ಎಂದು ಕಾಟವೆ ರೇಗಿ ಕೇಳಿದರೆ ಈ ಬ್ರಾಹ್ಮಣ ಪಟಾಲಂ ಕಾಟವೆಯನ್ನೇ ವಾಪಸ್ಸು ದಬಾಯಿಸಿದೆ. ಇದೆಲ್ಲಾ ನಡೆಯುತ್ತಿದ್ದಾಗಲೇ ಟಿವಿ ಚಾನೆಲ್ ಹಾಗೂ ಪತ್ರಿಕಾ ವರದಿಗಾರರೆಲ್ಲಾ RSS ಕಚೇರಿ ಬಾಗಿಲಿಗೇ ಬಂದು ನಿಂತು ಬಿಟ್ಟಿದ್ದರು. ಇವರನ್ನೆಲ್ಲಾ ಬರಹೇಳಿದ್ದು ಸಂಸದ ಪ್ರಹ್ಲಾದ ಜೋಶಿ. ಯಾವಾಗ ಮೀಡಿಯಾದವರು ಕಾಣಿಸಿಕೊಂಡರೋ ದತ್ತಾ ಡೋರ್ಲೆ ಎರಡನೇ ನಾಟಕ ಚಾಲು ಮಾಡಿದ. ಟಿವಿ ಕ್ಯಾಮೆರಾದೆದುರು ಅಳುತ್ತಾ "ಅಶೋಕ್ ಕಾಟವೆ ನನ್ನ ಮೇಲೆ ಹಲ್ಲೆ ಮಾಡ್ಯಾನ್ರಿ. ಇಂಥವರು ನಮ್ಮ ಪಾರ್ಟಿಲಿರಲಿಕ್ಕೆ ನಾಲಾಯಕ್" ಎಂದೆಲ್ಲ ಶಾಪ ಹಾಕಿಬಿಟ್ಟ.

ತಮಾಷೆ ಏನೆಂದರೆ ಅಲ್ಲಿದ್ದ ಬಹುತೇಕ ಚೆಡ್ಡಿ ಪತ್ರಕರ್ತರು 'ಯಾವ ಹಲ್ಲೆ, ಹೇಗಾಯಿತು, ಯಾಕಾಯಿತು' ಎಂದು ಒಂದೂ ಪ್ರಶ್ನೆ ಕೇಳದೆ ದತ್ತಾ ಹೇಳಿದ್ದನ್ನೇ ನಂಬಿ ದೊಡ್ಡ ದೊಡ್ಡ ವರದಿ ಬರೆದುಬಿಟ್ಟರು. ಇದಕ್ಕೆ RSS ನಿಷ್ಠೆ ಒಂದೇ ಕಾರಣವಲ್ಲ, ಬದಲಾಗಿ ಮಾಜಿ ಹೂಡಾ ಅಧ್ಯಕ್ಷ ಲಿಂಗರಾಜ ಪಾಟೀಲನಿಂದ ರಿಯಾಯಿತಿ ರೇಟಿನಲ್ಲಿ ಸೈಟು ಗಿಟ್ಟಿಸಲು ಕಾಯುತ್ತಿರುವ ಋಣ ಬಹಳಷ್ಟು ಪತ್ರಕರ್ತರಿಗಿತ್ತು. ಈ ಲಿಂಗರಾಜ ಅನಂತೂ ಬಣದವನು. ಯಡ್ಡಿ, ಕಾಟವೆ ತಲೆ ಕಂಡರಾಗದವನು. ಹುಬ್ಬಳ್ಳಿಯಲ್ಲಿ ಯಡ್ಡಿ ವಿರುದ್ಧ ಅನಂತ್ ಕುಮಾರ್ ಬಣ ವ್ಯವಸ್ಥಿತವಾಗೇ ಕೆಲಸ ಮಾಡುತ್ತಿದೆ. ಕೆಲವು ದಿನಗಳ ಹಿಂದೆ ಅನಂತೂ ಚೇಲಾ ರಂಗಾಬುದ್ಧಿ ಎಂಬ ಇನ್ನೊಬ್ಬ ಚೆಡ್ಡಿ "ಅಶೋಕ್ ಕಾಟವೆಯಿಂದ ನನಗೆ ಜೀವಭಯ ಇದೆ. ಪಾಲಿಕೆ ಚುನಾವಣೆಯಲ್ಲಿ ನಾನು ಸೋಲಲು ಕಾಟವೇನೇ ಕಾರಣ" ಎಂದು ಹೇಳಿಕೊಂಡು ತಿರುಗಿದ್ದ.

> ಈಗ ಕರ್ನಾಟಕದ ಎಲ್ಲೆಡೆ ಬಿಜೆಪಿಯೊಳಗೆ ಶುರುವಾಗಿರುವ ಬ್ರಾಹ್ಮಣ-ಲಿಂಗಾಯತ ಜಗಳ ಹುಬ್ಬಳ್ಳಿಯಲ್ಲೂ ಭುಗಿಲೆದ್ದಿದೆ. ಪರಸ್ಪರ ಹೊಡೆದಾಟಕ್ಕೂ ನಿಂತಿರುವ ಈ ರಾಮಭಕ್ತ ಕಪಿಸೈನ್ಯದ ಗಲಾಟೆ ಎಷ್ಟು ಜೋರಾಗಿದೆಯೆಂದರೆ ಅಕ್ಟೋಬರ್ 15 ರಂದು ನಿಗದಿಯಾಗಿದ್ದ ಧರ್ಮಯುದ್ಧ ಯಾತ್ರೆಯೂ ಈಗ ರದ್ದಾಗಿಹೋಗಿದೆ.




ಚಂದ್ರಕಾಂತ ಬೆಲ್ಲದ, ಲಿಂಗರಾಜ್, ಲಿಂಬಣ್ಣನವರ್

ಪಕ್ಷ ವಿಭಜನೆ

ರಾಜ್ಯ ಮಟ್ಟದಲ್ಲಿ ಯಡ್ಡಿಯನ್ನು ತುಳಿದು ಮೂಲೆಗುಂಪು ಮಾಡಲು ಅನಂತ್‌ಕುಮಾರ್ ಗುಂಪು ತಮ್ಮ ಪ್ರಯತ್ನಗಳನ್ನು ಇತ್ತೀಚೆಗೆ ಹೆಚ್ಚು ಮಾಡಿದೆ. ಪ್ರತಿ ಜಿಲ್ಲೆಯಲ್ಲೂ ಪಕ್ಷದೊಳಗೆ ಎರಡೆರಡು ಗುಂಪುಗಳನ್ನು ಸೃಷ್ಟಿಸುವ ಪಿತೂರಿ ನಡೆದಿದೆ. ಅದೇ ರೀತಿ ಧಾರವಾಡ-ಹುಬ್ಬಳ್ಳಿಯಲ್ಲೂ ಕೂಡಾ ಬಿಜ... ಸ್ಪಷ್ಟವಾಗಿ ಹೋಳಾಗಿದೆ. ಅನಂತೂ ಬಣದಲ್ಲಿ ಸಂ... ಪ್ರಹ್ಲಾದ್ ಜೋಶಿ, ಮಾಜಿ ಸಚಿವ ಜಗದೀಶ್ ಶೆಟ್ಟ... ಹೂಡಾ ಅಧ್ಯಕ್ಷ ಲಿಂಗರಾಜ ಪಾಟೀಲ್, ಕಾರ್ಪೊರೇಟ... ವೀರಣ್ಣ ಸವದಿ, ನಾರಾಯಣ್ ಜರತಾ... ಘರ, ಸುಧೀರ, ಸರಾಫ್ ಮಹಾನಗರ ಅ... ದತ್ತಾ ಡೋರ್ಲೆ ಇದ್ದಾರೆ.

ಮತ್ತೊಂದೆಡೆ ಯಡ್ಡಿ ಗುಂಪಿನಲ್ಲಿ ಶಾ... ಡಾ. ಕರಿಯಣ್ಣವರ್, ಮಾಜಿ ಶಾ... ಚಂದ್ರಕಾಂತ್ ಬೆಲ್ಲದ, ವಾಯುವ್ಯ ಸಾ... ಸಂಸ್ಥೆ ಅಧ್ಯಕ್ಷ ಅಶೋಕ್ ಕಾಟವೆ, ರಾಜೇ... ಗೋಖಲೆ, ನಿಂಬಣ್ಣವರ್, ಕಾರ್ಪೊರೇಟ... ಡಿ.ಕೆ. ಚವ್ಹಾಣ್, ವೆಂಕಟೇಶ್ ಮೇಸ್ತ್ರಿ ಪವಾ... ಮಾಜಿ ಕಾರ್ಪೊರೇಟರ್‌ಗಳಾದ ಕೊರಪಾ... ವೆಂಕಟೇಶ್ ಇದ್ದಾರೆ.

ಮೊನ್ನೆ ನಡೆದ ಮಹಾನಗರ ಪಾ... ಎಲೆಕ್ಷನ್‌ನಲ್ಲೂ ಈ ಮುಸುಕಿನ ಗುದಾ... ನಡೆದಿತ್ತು. ಈಗ ಯಡ್ಡಿ ಗ್ಯಾಂಗಿನವರ... ಅಲ್ಲಿ ಮೇಲುಗೈ ಆಗಿದೆ. ಬೆಲ್ಲದ್ ಗುಂ... 12 ಜನ, ಹುಬ್ಬಳ್ಳಿ ಶಹರದಲ್ಲಿ ಅಶೋ... ಕಾಟವೆ ಗುಂಪಿನ 7 ಜನ ಆರಿಸಿಬಂದಿದ... ಅನಂತೂ ಗುಂಪಿನ ಸಂಸದ ಪ್ರಹ್ಲಾದ ಜೋ... ಗುಂಪಿನಿಂದ ಕೇವಲ ಇಬ್ಬರು ಗೆದ್ದಿದ್ದಾ... ಅನಂತೂ ಬಣದ ಜಗದೀಶ್ ಶೆಟ್ಟರ್ ... ಜನರನ್ನು ಕಣಕ್ಕಿಳಿಸಿದ್ದರೂ ಗೆದ್ದಿದ್ದು ಕೇವ... 9 ಮಾತ್ರ.


ಹೀಗೆ ಯಡ್ಡಿ ಕೈ ಮೇಲಾಗುತ್ತಿ... ವುದನ್ನು ಸಹಿಸಲಾಗದೇ ಈಗ ಅನಂತ... ಬಣದವರು ದತ್ತಾ ಡೋರ್ಲೆಯ... ಮುಂದಿಟ್ಟುಕೊಂಡು ಹಲ್ಲೆ, ಬೈಯ್ಗುಳ... ಆರೋಪ ಮಾಡುತ್ತಾ ಯಡ್ಡಿ ಬಣ... ಕಾಟವೆಯನ್ನು ತುಳಿಯಲು ಹೊರಟಿದ್ದಾರೆ.

ಅಪ್ಪ-ಅಮ್ಮ ಜಗಳದಲ್ಲಿ ಕೂಸು ಬಡವಾಯ್ತು ಎಂಬಂತೆ ಈ ಲಿಂಗಾಯತ-ಬ್ರಾಹ್ಮಣ ಗ್ಯಾಂಗ್‌ವಾರ... ನಿಂದಾಗಿ ಯಡ್ಡಿಗೆ ಅಧಿಕಾರ ತಪ್ಪಿದ ವಿಚಾರ, ಬಿಜೆಪಿಯ... ಧರ್ಮಯುದ್ಧ ಯಾತ್ರೆ ವಿಚಾರ ಯಾರಿಗೂ ಬೇಡ... ವಾಗಿ ಹೋಗಿದೆ. ಪ್ರತಿಭಟನೆ ಕಾರ್ಯಕ್ರಮವೂ ರದ್ದಾಗಿ ಹೋಗಿದೆ.


ಹುಬ್ಬಳ್ಳಿಯ ಆರೆಸ್ಸೆಸ್ ಕಛೇರಿಯಲ್ಲಿ ಚೆಡ್ಡಿಗಳ ಚರ್ಚೆ

■ ಜಗಾಪು...

ಸಂಕೇಶ್ವರರ 'ಗಾಳಿ ಬಂದಾಗ ತೂರಿಕೊ' ಫಾರ್ಮುಲ



ಗಾಳಿ ವಿದ್ಯುತ್ ತಯಾರು ಮಾಡುತ್ತೇನೆಂದು ಹೊರಟಿದ್ದ ಮಾಜಿ ಸಂಸದ ವಿಜಯ ಸಂಕೇಶ್ವರ್ ಮತ್ತೆ ಬಿಜೆಪಿ ಸೇರಲು ರೆಡಿಯಾಗಿದ್ದಾರೆ. 'ಗಾಳಿ ಬಂದಾಗ ತೂರಿಕೋ' ಎಂಬ ಸಿಂಪಲ್ ಅವಕಾಶವಾದಿ ರಾಜಕೀಯ ಫಾರ್ಮುಲ ಒಂದೇ ಇದಕ್ಕೆ ಕಾರಣ.


ಪಕ್ಕಾ ವ್ಯಾಪಾರಿ ಬುದ್ಧಿಯ ಸಂಕೇಶ್ವರ್ ಮೊನ್ನೆಯವರೆಗೂ ಜೆಡಿಎಸ್‌ನಲ್ಲಿದ್ದಾರಾದರೂ ಒಂಚೂರು ಮೈಕೈ ನೋಯಿಸಿಕೊಳ್ಳದೆ ಕೋ-ಜಾ ಸರ್ಕಾರದಿಂದ ಏನೇನು ಲಾಭ ಗಿಟ್ಟಿಸಬಹುದೋ ಅಂತಾದ್ದನ್ನೆಲ್ಲಾ ಮಾಡಿಕೊಂಡಿದ್ದರು. ಯಾವಾಗ ಯಡ್ಡಿಗೆ ಸಿಎಂಗಿರಿ ಮಿಸ್ ಆಗಿ ಸರ್ಕಾರವೂ ಹೋಯಿತೊ ಇನ್ನು ಜೆಡಿಎಸ್‌ನಲ್ಲಿ ಇದ್ದರೆ ಏನೂ ಗಿಟ್ಟಲಾರದೆಂದು ಯೋಚಿಸಿ ಪಾರ್ಟಿಗೆ ರಾಜೀನಾಮೆ ಕೊಟ್ಟಿದ್ದಾರೆ. ಅದರ ಬೆನ್ನ ಹಿಂದೆಯೇ ಅರ್ಜೆಂಟಾಗಿ ಓಡಿಹೋ... ಯಡ್ಡಿಯನ್ನು ಮಾತಾಡಿಸಿ ಬಂದಿದ್ದಾರೆ. ಮುಂದಿನ ಎಲೆಕ್ಷನ್‌ನ... ಬಿಜೆಪಿ ಟಿಕೆಟ್ ಗಿಟ್ಟಿಸಲು ಸಂಕೇಶ್ವರ್ ಈಗಿನಿಂದಲೇ ಹಾಕುತ್ತಿರು... ಸ್ಕೆಚ್ ಇದು. ಯಡ್ಡಿಗಿರುವ ಲಿಂಗಾಯತರ ಸಿಂಪಥಿ ತನಗೂ ಸಿಕ್ಕಿದರೆ ಎಲೆಕ್ಷನ್ ಗೆದ್ದುಕೊಳ್ಳಬಹುದಲ್ಲಾ ಎಂದು ಸಂಕೇಶ್ವರ... ಯೋಚಿಸಿದ್ದಾರೆ. ಆದರೆ ಇಲ್ಲೂ ಒಂದು ಲಿಂಗಾಯತ-ಬ್ರಾಹ್ಮ... ಜಗಳ ಭುಗಿಲೇಳಲಿದೆ. ಧಾರವಾಡ ಉತ್ತರದ ಹಾಲಿ ಬಿಜೆ... ಸಂಸದ ಪ್ರಹ್ಲಾದ್ ಜೋಶಿ ಜಾತಿಯಲ್ಲಿ ಬ್ರಾಹ್ಮಣ, ಜೊತೆ... ಬಿಜೆಪಿಯ ಬಲಿಷ್ಠ ನಾಯಕ ಅನಂತ್‌ಕುಮಾರ್ ಶಿಷ್ಯ ಕೂಡ. ಅ... ಸಂಕೇಶ್ವರ್ ಲಿಂಗಾಯತರು ಹಾಗೂ ಈಗ ಯಡ್ಡಿ ಗುಂಪಿ... ಸೇರಲಿದ್ದಾರೆ. ನಾಳೆ ಎಲೆಕ್ಷನ್ ಬಂದಾಗ ಟಿಕೆಟ್ ಸಿಗುವುದು ಯಾರಿಗೆ?

ಜೋಶಿ ಅಷ್ಟು ಸುಲಭವಾಗಿ ತನ್ನ ಕ್ಷೇತ್ರ ಬಿಟ್ಟುಬಿಡುತ್ತಾರೆಯೇ...

ದೂರದ ಸೇತುವೆ

ಹಲವಾರು ಶತಮಾನಗಳ ಹಿಂದೆ ನಿರ್ಮಿಸಲಾಗಿದ್ದ ಸೇತುವೆಯನ್ನೇ ನೋಡುತ್ತಾ ನಿಂತಿದ್ದ ರಾಮ ಹನುಮಂತನತ್ತ ತಿರುಗಿ "ನೀನು ಮತ್ತು ನಿನ್ನ ವಾನರರ ಸೇನೆ ಅಂದೇ ಅದೆಷ್ಟು ದಕ್ಷತೆ ಮತ್ತು ಶ್ರಮವಹಿಸಿ ಇಂತಹ ಅದ್ಭುತ ಸೇತುವೆಯನ್ನು ನಿರ್ಮಿಸಿದ್ದಿರಿ. ಶತಮಾನಗಳ ಕಾಲ ಅದೆಷ್ಟೋ ನೈಸರ್ಗಿಕ ವಿಕೋಪಗಳನ್ನು ಮತ್ತು ಭೂಖಂಡಗಳ ಚಲನೆಗಳನ್ನು ಈ ಸೇತುವೆ ಎದುರಿಸಿದ್ದರೂ ಇವತ್ತಿಗೂ ನಿಂತಿದೆ. ಆದರೆ ನೋಡು ಮೊನ್ನೆ ಹೈದರಾಬಾದಿನಲ್ಲಿ ಗಮ್ಮಾನ್ ಎಂಬ ಸಂಸ್ಥೆಯು ಆಧುನಿಕ ತಂತ್ರಜ್ಞಾನವನ್ನು ಬಳಸಿ ನಿರ್ಮಿಸುತ್ತಿದ್ದ ಸೇತುವೆ ಅದರ ಮೇಲೆ ಪೋಸ್ಟರ್‌ಗಳನ್ನು ಹಚ್ಚುವ ಮುನ್ನವೇ ಬಿದ್ದು ಹೋಗಿದೆ" ಎಂದು ಪ್ರಶಂಸಿಸಿದ.

ಹನುಮಂತ ಕೃತಜ್ಞಾ ಭಾವದಿಂದ ಕೈಮುಗಿದು "ಜೈ ಶ್ರೀರಾಮ, ಎಲ್ಲಾ ನಿನ್ನ ದಯೆಯಿಂದಲೇ ಸಾಧ್ಯವಾದದ್ದು. ನಿನ್ನ ಹೆಸರನ್ನು ಇಟ್ಟಿಗೆಗಳ ಮೇಲೆ ಬರೆದು ಅವುಗಳನ್ನು ನೀರಿನಲ್ಲಿ ಬಿಸಾಡಿದಾಗ ಅವು ನೀರಿನಲ್ಲಿ ತೇಲಲಾರಂಭಿಸಿದವು. ಟಿಸ್ಕೋ ಕಂಪನಿಯ ಸ್ಟೀಲ್, ಅಂಬುಜಾ ಅಥವಾ ಎಸಿಸಿ ಕಂಪನಿಯ ಸಿಮೆಂಟ್, ಇದ್ಯಾವುದೂ ನಮ್ಮ ಸೇತುವೆಗೆ ಬೇಕಾಗಿರಲಿಲ್ಲ, ಅದೆಲ್ಲಾ ಬಿಡಿ, ಆ ಹಳೆ ಕತೆಯೆಲ್ಲ ಯಾಕೀಗ?" ಎಂದು ವಿನಂತಿಸಿಕೊಂಡ.



"ಅಲ್ಲ ಹನುಮಂತ, ಭೂಲೋಕದಲ್ಲಿರುವ ಹಲವರು ಈ ಸೇತುವೆಯನ್ನು ನಾಶಮಾಡಿ ಇಲ್ಲೊಂದು ಸುರಂಗ ನಿರ್ಮಿಸಬೇಕು ಎನ್ನುತ್ತಿದ್ದಾರೆ. ಇದೊಂದು ಕೋಟ್ಯಂತರ ರೂಪಾಯಿಗಳ ಕಾಂಟ್ರಾಕ್ಟು. ಸೇತುವೆಯನ್ನು ಕೆಡವಲು, ಸುರಂಗವನ್ನು ನಿರ್ಮಿಸಲು ಎರಡರಲ್ಲೂ ಹಣ ಮಾಡುತ್ತಾರೆ" ಎಂದ ರಾಮ.

"ಹಾಗಾದರೆ ನಾವು ಯಾಕೆ ಅಲ್ಲಿಗೆ ಹೋಗಿ ನಮ್ಮ ವಿಚಾರವನ್ನು ತಿಳಿಹೇಳಬಾರದು?" ಎಂದ ಹನುಮಂತ ರಾಮನ ಮುಂದೆ ಮಂಡಿಯೂರುತ್ತಾ,

"ಕಾಲ ಬದಲಾಗಿದೆ. ಈಗ ಅವರು ನಮ್ಮ ಜನ್ಮ ದಿನಾಂಕವನ್ನು ಕೇಳುತ್ತಾರೆ. ಆದರೆ ನಮ್ಮ ಬಳಿ ಜನ್ಮ ದಿನದ ದಾಖಲೆಯಾಗಲಿ, ಶಾಲಾ ಸರ್ಟಿಫಿಕೇಟಾಗಲಿ ಇಲ್ಲ, ಅಂದು ನಾವು ಕಾಲ್ನಡಿಗೆಯಲ್ಲೇ ಸಂಚರಿಸುತ್ತಿದ್ದವು; ಅಬ್ಬಬ್ಬಾ ಅಂದರೆ ಎತ್ತಿನ ಗಾಡಿಯಲ್ಲಿ, ಈಗ ನೋಡಿದರೆ ಡ್ರೈವಿಂಗ್ ಲೈಸೆನ್ಸ್ ಕೇಳುತ್ತಾರೆ. ಅಷ್ಟೇ ಅಲ್ಲ, ಅಡ್ರೆಸ್ ಪ್ರೂಫ್ ಕೇಳುತ್ತಾರೆ. ಕಳೆದ ಅರ್ಧ ಶತಮಾನದಿಂದ ನಾನು ಅಯೋಧ್ಯೆಯಲ್ಲಿ ಹುಟ್ಟಿದೆನೋ ಇಲ್ಲವೋ ಎಂಬುದರ ಬಗ್ಗೆಯೇ ಚರ್ಚಿಸುತ್ತಿದ್ದಾರೆ ಇನ್ನು ಅಡ್ರೆಸ್ ಪ್ರೂಫ್ ಅನ್ನು ಎಲ್ಲಿಂದ ತರೋದು? ಮತ್ತೊಂದು ಸಮಸ್ಯೆ ಯಾವುದೆಂದರೆ, ನಾವು ಬಿಲ್ಲುಬಾಣಗಳನ್ನು ಹಿಡಿದು ನಮ್ಮ ಈ ವೇಶದಲ್ಲಿ ಪ್ರತ್ಯಕ್ಷವಾದರೆ ಸಾಮಾನ್ಯ ಜನರು ನಮ್ಮನ್ನು ಗುರುತಿಸಬಹುದು, ಆದರೆ ಅರ್ಜುನ್ ಸಿಂಗ್ ಎಂಬ ಮಂತ್ರಿ ನಾವು ಯಾವುದೋ ಬುಡಕಟ್ಟಿನ ಜನಾಂಗದವರು ಎಂದು ಭಾವಿಸಿ ಅಬ್ಬಬ್ಬಾ ಅಂದರೆ ಯಾವುದೋ ಐಐಟಿ ಸಂಸ್ಥೆಯಲ್ಲಿ ಮೀಸಲಾತಿ ಅಡಿ ಒಂದು ಸೀಟ್ ಕೊಡಿಸಬಹುದು. ಅಂದ ಹಾಗೆ ದೇವಮಾನವನಾದ ನಾನು ಥ್ರೀಪೀಸ್ ಸೂಟ್ ಹಾಕಿಕೊಂಡು ನಾನು ಶ್ರೀರಾಮ ಎಂದು ಘೋಷಿಸಿದರೆ ನಮ್ಮ ಭಕ್ತರೇ ಅನುಮಾನ ಪಡಬಹುದು. ಇದೊಂದು ಸಂಕೀರ್ಣ ಸಮಸ್ಯೆ" ಎಂದ ರಾಮ.

"ಆದರೆ ನೀವೇ ರಾಮ ಎಂದೂ, ಆ ಸೇತುವೆಯನ್ನು ನಾನೇ ನಿರ್ಮಿಸಿದ್ದೆಂದೂ ನಾನು ಅವರೆಲ್ಲರಿಗೆ ಹೇಳಿದರೆ ಹೇಗೆ?" ಎಂದು ಹನುಮಂತ ಪ್ರಶ್ನಿಸಿದ.

"ಅಂಜನಿ ಪುತ್ರನೇ, ಅದು ಹೇಗೆ ಸಾಧ್ಯ? ನಿನ್ನ ಲೇಔಟ್ ಪ್ಲಾನ್ ಕೊಡು, ಈ ಸೇತುವೆ ಯೋಜನೆಯ ವಿವರಗಳನ್ನು, ಅದಕ್ಕೆ ತಗುಲಿದ ವೆಚ್ಚವನ್ನು, ಅದನ್ನು ಹೇಗೆ ಭರಿಸಿದೆ ಎಂಬ ವಿಷಯವನ್ನು, ಅದನ್ನು ಪೂರ್ಣಗೊಳಿಸಿದ್ದರ ವರದಿಯನ್ನೂ ಕೇಳುತ್ತಾರೆ. ಇವತ್ತಿನ ಭಾರತದಲ್ಲಿ ಯಾವುದೇ ದಾಖಲೆಗಳಿಲ್ಲದೆ ಯಾವುದನ್ನೂ ಸ್ವೀಕರಿಸುವುದಿಲ್ಲ, ನಿನಗೆ ಕೆಮ್ಮಿದ್ದರೂ, ನಿನಗೆ ಕೆಮ್ಮಿದೆ ಎಂದು ವೈದ್ಯರಿಂದ ಪ್ರಮಾಣ ಪತ್ರವನ್ನು ನೀಡಬೇಕು.

ಸುಮ್ ಸುಮ್ಮನೆ

"ಇಂದು ಹಿಂಟೆಣೆ ಪಡೆಯಲೂ - ನೀನು ಸತ್ತಿಲ್ಲ, ಇನ್ನೂ ಬದುಕಿದ್ದೀಯ ಎಂದು ದೃಢಪಡಿಸುವ ಪ್ರಮಾಣ ಪತ್ರ ಕೇಳುತ್ತಾರೀಗ ಅಂದರೆ ನಂಬುತ್ತೀಯಾ?" ಎಂದು ರಾಮ ವಿವರಿಸಿದ.

"ಈ ಇತಿಹಾಸಕಾರರೇ ನನಗೆ ಅರ್ಥವಾಗುತ್ತಿಲ್ಲ, ನೂರಾರು ವರ್ಷಗಳ ಕಾಲ ಸುರದಾಸ, ತುಲಸಿದಾಸ, ತ್ಯಾಗರಾಜ, ಜಯದೇವ, ರಾಮದಾಸ, ಸಂತ ತುಕಾರಾಮಾ, ಇಂಥ ಹಲವಾರು ಸಂತರಿಗೆ ನೀನು ದರ್ಶನವನ್ನು ನೀಡುತ್ತಲೇ ಬಂದಿದ್ದೀ. ಆದರೂ ನೀರು ಒಂದು ಕಾಲ್ಪನಿಕ ವ್ಯಕ್ತಿಯೆಂದೂ, ನೀನು ಬದುಕಿರಲಿಲ್ಲವೆಂದೂ ವಾದಿಸುತ್ತಾರಲ್ಲಾ? ನನ್ನ ಪ್ರಕಾರ ನಮ್ಮ ಮುಂದೆ ಉಳಿದಿರುವುದು ಒಂದೇ ದಾರಿ. ನಾವು ಮತ್ತೆ ಭೂಮಂಡಲದಲ್ಲಿ ರಾಮಾಯಣವನ್ನು ಪುನರಾವರ್ತಿಸಿ ದಾಖಲೆಗಳನ್ನು ಸರಿಪಡಿಸಬೇಕು" ಎಂದು ಹನುಮಂತ ಹೇಳಿದ.

ರಾಮ ಮುಗುಳ್ನಗುತ್ತಾ "ಅದು ಅಷ್ಟು ಸುಲಭವಲ್ಲ, ಕರುಣಾನಿಧಿಯ ಮುಂದೆ ತಾನ ಸಂತನಂತೆ ಕಾಣುತ್ತೇನೆ ಎಂಬ ಭಯ ರಾವಣನಿಗಿದೆ. ಮಾರೀಚ ಮಾವನೊಂದಿಗೂ ನಾನು ಮಾತನಾಡಿದ್ದೇನೆ. ನಾನು ಕಾಡಿನಲ್ಲಿದ್ದಾಗ ಸೀತೆಯನ್ನು ಆಕರ್ಷಿಸಲು ಜಿಂಕೆಯ ರೂಪದಲ್ಲಿ ಪ್ರತ್ಯಕ್ಷವಾಗಿದ್ದ ಮಾರೀಚ ಮಾವನಿಗೆ ಇವತ್ತು ಸಲ್ಮಾನ್ ಖಾನ್ ಬಗ್ಗೆ ಅದೆಷ್ಟು ಭಯ ಅಂದರೆ ಆತ ಯಾವುದೇ ಕಾರಣಕ್ಕೂ ಭೂಮಿಯ ಮೇಲೆ ಕಾಲಿಡುವುದಿಲ್ಲ ಎಂದು ಹೇಳುತ್ತಿದ್ದಾನೆ" ಎಂದು ವಿವರಿಸಿ ಸುಮ್ಮನಾದ.

ರಾಮ ಮತ್ತು ಹನುಮಂತ ಸೇತುವೆಯನ್ನು ನೋಡುತ್ತಾ ನಿಟ್ಟುಸಿರಿಟ್ಟರು! ಅಲ್ಲಿಗೆ ವಿಷ್ಣು ಅಲಿಯಾಸ್ ರಾಮ ಅಲಿಯಾಸ್ ಕೃಷ್ಣ ಯಾವುದೇ ಕಾರಣಕ್ಕೂ ಕಲಿಯುಗದಲ್ಲಿ ಭಾರತದಲ್ಲಿ ಪ್ರತ್ಯಕ್ಷವಾಗುವುದಿಲ್ಲ ಎಂಬುದು ನಿರ್ಧಾರವಾಯಿತು....

ವಾಜಪೇಯಿಗೆ ಹುಷಾರಿಲ್ಲ

ಅಟಲ್ ಬಿಹಾರಿ ವಾಜಪೇಯಿ ಆರೋಗ್ಯ ಪೂರ್ತಿ ಕೈಕೊಟ್ಟಿದೆ. ಅವರಿಗೆ ನಡೆದಾಡಲು ಆಗುತ್ತಿಲ್ಲ, ಮಾತು ಸಲೀಸಾಗಿ ಹೊರಡುತ್ತಿಲ್ಲ, ನೆನಪಿನ ಶಕ್ತಿ ಎಷ್ಟು ಉಡುಗಿಹೋಗಿದೆ ಎಂದರೆ ಬಿಜೆಪಿಯ ದೊಡ್ಡ ನಾಯಕರೇ ಮನೆಗೆ ಬಂದರೂ ಅವರಿಗೆ ಗುರುತು ಸಿಗುತ್ತಿಲ್ಲ.

ಇದು 83 ವರ್ಷದ ವಾಜಪೇಯಿ ದೇಹಸ್ಥಿತಿ ಬಗ್ಗೆ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನ ವೈದ್ಯರ ಅನಿಸಿಕೆ.

ವಾಜಪೇಯಿ ಆರೋಗ್ಯ ಸುಧಾರಿಸಲಿ ಎಂದು ಆಶಿಸುತ್ತಲೇ ಈ ಸಂಘ ಪರಿವಾರದೊಳಗೆ ಇರುವ ಹೊಲಸು ಗುಂಪುಗಾರಿಕೆ ಬಗ್ಗೆ ಎರಡು ಮಾತು ಹೇಳಲೇಬೇಕು.



ಬಿಜೆಪಿಗೀಗ ಹೇಳಿಕೊಳ್ಳುವಂಥ ನಾಯಕನಿಲ್ಲ, ಈಗಿನ ಅಧ್ಯಕ್ಷ ರಾಜನಾಥ್‌ಸಿಂಗ್‌ಗೆ ಅವನ ಸ್ವಂತ ರಾಜ್ಯ ಉತ್ತರ ಪ್ರದೇಶದಲ್ಲೇ ಕಿಮ್ಮತ್ತಿಲ್ಲ. ಇನ್ನು ಆತ ರಾಷ್ಟ್ರನಾಯಕ ಅನ್ನಿಸಿಕೊಳ್ಳಲು ಸಾಧ್ಯಾನಾ?

ಇನ್ನೇನು ಪಾರ್ಲಿಮೆಂಟ್ ಎಲೆಕ್ಷನ್ ಬರುತ್ತಿರುವಾಗ ತನ್ನ ಬಿಜೆಪಿ ಪಾರ್ಟಿ ಮುನ್ನಡೆಸಲು ಸಮರ್ಥ ನಾಯಕನೊಬ್ಬನಿರಲಿ ಎಂದು RSS ತಲೆ ಕೆಡಿಸಿಕೊಂಡಿದೆ.

ಲಾಲ್‌ಕೃಷ್ಣ ಅಡ್ವಾಣಿ ಆದರೆ ಹೇಗೆ ಎಂಬ ಲೆಕ್ಕಾಚಾರ ಕೆಲವರ ತಲೆಯೊಳಗಿದೆ. ಯಶವಂತ್ ಸಿನ್ಹಾ ಅಧಿಕಾರ ಹಸ್ತಾಂತರದ ಬಗ್ಗೆ ಮಾತಾಡಲು ದೇವೇಗೌಡರ ಹತ್ತಿರ ಬಂದಾಗ ಆಡಿದ ಮಾತೆಲ್ಲಾ ಅಡ್ವಾಣಿಯ ಪ್ರಧಾನಿ ಪಟ್ಟದ ಆಕಾಂಕ್ಷೆಗೆ ಗೌಡರ ಬೆಂಬಲ ಯಾಚಿಸಿದ್ದಷ್ಟೇ ಆಗಿತ್ತು, ಬಹುಶಃ ಯಡ್ಯೂರಿಗೆ ಸಿಎಂಗಿರಿ ತಪ್ಪಲು ಅಡ್ವಾಣಿಯ ಈ ದೂರಾಲೋಚನೆಯೂ ಕಾರಣವಾಗಿರಬಹುದು.

ಅದಿರಲಿ ಬಿಡಿ,

ಅಲ್ಲಿ ದೆಹಲಿಯಲ್ಲಿನ ಬಿಜೆಪಿಯೊಳಗೆ ಈಗ ತಮ್ಮ ನಾಯಕ ಅರ್ಥಾತ್ ಪ್ರಧಾನಮಂತ್ರಿ ಅಭ್ಯರ್ಥಿ ಯಾರೆಂಬ ಗೊಂದಲ ಇನ್ನೂ ಮುಂದುವರೆದಿದೆ. ಇತ್ತೀಚೆಗೆ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಭೋಪಾಲ್‌ನಲ್ಲಿ ನಡೆಯಿತು. ಅಲ್ಲಿ ಅಡ್ವಾಣಿ, ರಾಜನಾಥ್‌ಸಿಂಗ್ ಇದ್ದರೂ ವಾಜಪೇಯಿ ಬಂದಿರಲಿಲ್ಲ. ಅವತ್ತು ಅಡ್ವಾಣಿ ನಾಯಕತ್ವದಲ್ಲಿ ಬಿಜೆಪಿ ಚುನಾವಣೆಗೆ ಹೋಗುತ್ತದೆ ಎಂದು ಅಧಿಕೃತವಾಗಿ ಘೋಷಿಸಲಾಗುತ್ತದೆ ಎಂಬ ನಿರೀಕ್ಷೆ ಬಹುತೇಕರಿಗಿತ್ತು. ಆದರೆ ರಾಜನಾಥ್ ಸಿಂಗ್ ಅನಿರೀಕ್ಷಿತವಾಗಿ ಜೇಬಿನಿಂದ ಒಂದು ಪತ್ರ ತೆಗೆದು ಹೀಗೆ ಓದಿದರು:

"ನಾನು ಬೇಗನೆ ಸಕ್ರಿಯ ರಾಜಕೀಯಕ್ಕೆ ಮರಳುತ್ತೇನೆ."

-ವಾಜಪೇಯಿ ಪತ್ರ ಅದು. ಮಜಾ ಅಂದರೆ ಅದಕ್ಕೆ ವಾಜಪೇಯಿ ಸಹಿನೇ ಇರಲಿಲ್ಲ. ಇದಕ್ಕೆ ಅದೇ ಸಭೆಯಲ್ಲಿ ಅಡ್ವಾಣಿ ಕೊಟ್ಟ ಪ್ರತಿಕ್ರಿಯೆ ಬಿಜೆಪಿಯೊಳಗಿನ ಕಚ್ಚಾಟಕ್ಕೆ ಇನ್ನಷ್ಟು ಪುರಾವೆ ನೀಡಿತು.

"ನಾನು ಸೆಪ್ಟೆಂಬರ್ 19 ರಂದು ದೆಹಲಿಯಲ್ಲಿ ವಾಜಪೇಯಿ ಆರೋಗ್ಯ ವಿಚಾರಿಸಿಕೊಂಡು ಭೋಪಾಲಿಗೆ ಬಂದೆ. ಅಷ್ಟು ಹುಷಾರಿರದಿದ್ದ ವಾಜಪೇಯಿ ಎರಡೇ ದಿನದಲ್ಲೇ ಇಷ್ಟು ಬೇಗ ಚೇತರಿಸಿಕೊಂಡು ಪತ್ರ ಬರೆದಿದ್ದಾರೆ. ಅವರು ಆದಷ್ಟೂ ಬೇಗನೆ 'ಎದ್ದು' ಬರುತ್ತಾರೆ ಎಂದು ನಿರೀಕ್ಷಿಸುತ್ತೇನೆ" ಎಂದು ಅಡ್ವಾಣಿ ವ್ಯಂಗ್ಯವಾಗಿ ಮಾತಾಡಿದ್ದಾರೆ.

ಭೋಪಾಲ್ ಸಭೆಯಲ್ಲೇ ಅಡ್ವಾಣಿ ಮುಂದಿನ ಪ್ರಧಾನಿ ಅಭ್ಯರ್ಥಿ ಎಂದು ಅನೌನ್ಸ್ ಮಾಡುವುದನ್ನು ತಪ್ಪಿಸಲು ಕೆಲವು ಚಡ್ಡಿಗಳೇ ನಡೆಸಿದ ಹುನ್ನಾರ ಇದು. ರಾಜನಾಥ್ ಸಿಂಗ್ ಈಗ ಪಾರ್ಟಿ ಅಧ್ಯಕ್ಷ. ಮುಂದೆ ಎಲೆಕ್ಷನ್ ನಡೆದು ಬಿಜೆಪಿಗೆ ಮೆಜಾರಿಟಿ ಸಿಕ್ಕರೆ ನಾನೇ ಯಾಕೆ ಪ್ರಧಾನಿ ಆಗಬಾರದೆಂಬ ರಾಜನಾಥರ ಯೋಚನೆಯೆ ಈ ನಕಲಿ ವಾಜಪೇಯಿ ಪತ್ರದ ಹಿಂದಿನ ರಹಸ್ಯ. ವಾಜಪೇಯಿಗೆ ಹೊರಜಗತ್ತಿನಲ್ಲಿ ಏನೇನಾಗುತ್ತಿದೆ ಎಂಬುದೇ ಗೊತ್ತಾಗುತ್ತಿಲ್ಲ. ಗೊತ್ತಾದರೂ ಪಕ್ಷವನ್ನು ಮುನ್ನಡೆಸುವ, ನಿರ್ಧಾರ ಕೈಗೊಳ್ಳುವ, ಓಡಾಡುವ ಶಕ್ತಿಯೇ ಇಲ್ಲದಿರುವಾಗ 'ಮತ್ತೆ ರಾಜಕೀಯಕ್ಕೆ ಬರುತ್ತೇನೆ' ಎನ್ನುವುದು ಕುಚೋದ್ಯವಾಗಿ ಕಾಣುವುದಿಲ್ಲವೆ.

AIIMS ಡಾಕ್ಟರ್‌ಗಳು ವಾಜಪೇಯಿಗೆ Cerabral atrophy, Cerebral infarct, Dementia ಎಂಬ ತೀವ್ರ ಕಾಯಿಲೆಗಳ ಲಿಸ್ಟನ್ನೇ ಮಾಡಿಟ್ಟಿದ್ದಾರೆ. ಇವೆಲ್ಲಾ ಬರೀ ದೈಹಿಕ ಕಾಯಿಲೆಗಳಲ್ಲ, ಬದಲಾಗಿ ಮಾನಸಿಕ ಅಸ್ವಸ್ಥತೆಗಳು (mental disorder). ಸೆಪ್ಟೆಂಬರ್‌ನಲ್ಲಿ ಬಿಜೆಪಿಯ ಮಾಜಿ ಕೇಂದ್ರ ಸಚಿವ ಮುಕ್ತಾರ್ ಅಬ್ಬಾಸ್ ನಖ್ವಿ ಭೇಟಿಯಾಗಲು ಹೋದರೆ ವಾಜಪೇಯಿಗೆ ಅವರನ್ನು ಗುರುತಿಸಲಾಗಲಿಲ್ಲವಂತೆ. ಮಾತೂ ಆಡಲಿಲ್ಲವಂತೆ.

ವಾಜಪೇಯಿ ಸಕ್ರಿಯ ಕೋಮುವಾದಿ ರಾಜಕೀಯಕ್ಕೆ ಮರಳಿ ಬರುವುದು ಮುಗಿದ ಅಧ್ಯಾಯ. ಆದರೆ ಬಿಜೆಪಿಗಳಿಗೆ ಮುಂದಿನ ನಾಯಕ ಯಾರೆಂಬ ಚಿಂತೆ ಕಾಡತೊಡಗಿದೆ.

ಸದ್ಯಕ್ಕೆ ಅಡ್ವಾಣಿಯೇ ಮುಂಚೂಣಿಯಲ್ಲಿರುವಂತೆ ಕಾಣುತ್ತಿದೆ. ಜಿನ್ನಾ ಬಗ್ಗೆ ಅಡ್ವಾಣಿ ನೀಡಿದ್ದ ಹೇಳಿಕೆಯಿಂದ ಕೆರಳಿದ್ದ ಚಡ್ಡಿಗಳು ಪಾರ್ಟಿ ಅಧ್ಯಕ್ಷ ಸ್ಥಾನದಿಂದ ಓಡಿಸಿ ರಾಜನಾಥರನ್ನು ಕೂರಿಸಿದ್ದರು. ಆದರೆ ಈತ ಮಾಜಿ ಪೈಲ್ವಾನನಂತೆ ಕಾಣುತ್ತಾನೆಯೇ ವಿನಃ ಮುಕ್ಕದ್ದಿ ಘರ ಅಲ್ಲಿ. ಇನ್ನು ಅಡ್ವಾಣಿ ಒಬ್ಬ ಹಿಂದೂವಾದಿಯಾಗಿದ್ದು NDA ನಲ್ಲಿದ್ದ ಬಹುತೇಕ ಮಿತ್ರಪಕ್ಷಗಳಿಗೆ ವಾಜಪೇಯಿ ಬಗ್ಗೆ ಇದ್ದಷ್ಟು ವಿಶ್ವಾಸ ಅಡ್ವಾಣಿ ... ಇರಲಿಲ್ಲ. ಮುಖ್ಯವಾಗಿ NDA ಈಗ ಒಡೆದ ಮನೆಯಾಗಿ... ವಾಜಪೇಯಿ ಅಧ್ಯಾಯ ಮುಗಿಯುತ್ತಿದೆ. ಒಟ್ಟಿನಲ್ಲಿ ಬಿಜೆಪಿ ಭವಿಷ್ಯ ಅಷ್ಟು ಆಶಾದಾಯಕವಾಗಿಲ್ಲ.

ಬೆಂಗಳೂರು ಪಾಲಿಕೆಯ ಪೀಡೆ ಫೋರ್‌ಟ್ವೆಂಟಿ ಭಾಸ್ಕರ

ನಕಲಿ ಬಿಬಿಎಂಪಿ ಅಧಿಕಾರಿ ಮಹೇಶ್ ಎಂಬಾತ ಜನರಿಂದ ಒದೆ ತಿಂದು ಜೆಪಿ ನಗರ ಪೊಲೀಸ್ ಠಾಣೆಯ ಲಾಕಪ್ಪಿಗೆ ಬಿದ್ದ ಸುದ್ದಿ ಕೇಳಿದ್ದೀ. ಇಡೀ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿಗಳೆಲ್ಲ 'ಹಣ್ಣು ತಿಂದ ಭಾಸ್ಕರ ತಪ್ಪಿಸಿಕೊಂಡ, ಸಿಪ್ಪೆ ತಿಂದ ಮಹೇಶ ಸಿಕ್ಕಿಬಿದ್ದ' ಎಂದೇ ಲೊಚಗುಟ್ಟುತ್ತಿದ್ದಾರೆ!

ಹಕೀಕತ್ತೇನೆಂದರೆ, ಇದೇ ಅಕ್ಟೋಬರ್ 8 ರಂದು ಜೆ.ಪಿ.ನಗರದ ಸಿಲ್ವರ್ ಓಕ್ ಸ್ಟ್ರೀಟ್‌ಗೆ ಪಾಲಿಕೆಯ 'ಪ್ರಹರಿ' ವ್ಯಾನಿನಲ್ಲಿ ಬಂದಿಳಿದ ಮಹೇಶ್ ಎಂಬಾತ ಕಂಡಕಂಡ ಕಟ್ಟಡದ ಫೋಟೋ ಕ್ಲಿಕ್ಕಿಸುತ್ತಿದ್ದ. ತನ್ನನ್ನು ಪಾಲಿಕೆಯ ಇಂಜನಿಯರ್ ಭಾಸ್ಕರ್ ಕಳಿಸಿಕೊಟ್ಟಿದ್ದಾರೆಂದೂ ಇಲ್ಲಿನ ಎಲ್ಲಾ ಮನೆಗಳನ್ನು ನೆಲಸಮಗೊಳಿಸುವಂತೆ ಪಾಲಿಕೆ ಕಮೀಷನರ್ ಆದೇಶಿಸಿದ್ದಕ್ಕೇ ತಾನು ಫೋಟೋ ತೆಗೆಯುತ್ತಿದ್ದೇನೆಂದೂ ಹಾಗೊಮ್ಮೆ ತೆಗೆಯಬಾರದೆಂದರೆ ಮನೆಯೊಂದಕ್ಕೆ ತಲಾ ಒಂದೂವರೆ ಲಕ್ಷದಂತೆ ಲಂಚ ಕೊಡಬೇಕೆಂದೂ ಡೀಲು ಕುದುರಿಸಲೆತ್ನಿಸಿದ್ದ. ಗುಮಾನಿ ಬಂದ ಜನ ಪಾಲಿಕೆಗೆ ಫೋನ್ ಮಾಡಿ ವಿಚಾರಿಸಿದರೆ ಅಲ್ಲಿ ಭಾಸ್ಕರ್ ಎಂಬ ಇಂಜನಿಯರ್ ಇಲ್ಲ ಮತ್ತು ಫೋಟೋ ತೆಗೆಯಲು ಪಾಲಿಕೆ ಯಾರನ್ನೂ ಕಳಿಸಿಲ್ಲ!

ಅಷ್ಟೇ: ಮಹೇಶನನ್ನು ಹಿಡಿದು ಯಗ್ಗಾಮಗ್ಗಾ ಚಚ್ಚಿದ ಜೆ.ಪಿ. ನಗರ ನಿವಾಸಿಗಳು ಆತನನ್ನು ಜೆ.ಪಿ. ನಗರದ ಇನ್ಸ್‌ಪೆಕ್ಟರ್ ಕೋನಪ್ಪರೆಡ್ಡಿಗೊಪ್ಪಿಸಿಬಿಟ್ಟರು. ಲಾಕಪ್ಪಿಗೆ ದಬ್ಬಿ ಸಮಾ ಬಡಿದ ಕೋನಪ್ಪರೆಡ್ಡಿ ಇತ್ತ ಮಹೇಶನನ್ನೂ ಆತನ ಸಹಚರರನ್ನೂ ಜೈಲಿಗೆ ರವಾನಿಸುತ್ತಿದ್ದರೆ ಅತ್ತ ಇಷ್ಟೆಲ್ಲಕ್ಕೂ ಕಾರಣಕರ್ತನಾಗಿದ್ದ ಫೋರ್ ಟ್ವೆಂಟಿ ಭಾಸ್ಕರ ತನ್ನ ಶಿಷ್ಯರನ್ನು ಜಾಮೀನು ಕೊಟ್ಟು ಹೊರತರುವಲ್ಲಿ ಬಿಜಿಯಾಗಿಬಿಟ್ಟ!

ಜೆ.ಪಿ. ನಗರದ ಇನ್ಸ್‌ಪೆಕ್ಟರ್ ಕೋನಪ್ಪರೆಡ್ಡಿ ಬಹುಶಃ ಸರಿಯಾಗಿ ಬಾಯಿಬಿಡಿಸಿದ್ದರೆ ಇಂಥಾ ದಂಧೆಯ ಮೂಲಪುರುಷ ನಿವಾರಣೆ ಭಾಸ್ಕರನನ್ನು ಆತನ ಶಿಷ್ಯ ಮಹೇಶನ ಜೊತೆಗೇ ಜೈಲಿಗಟ್ಟಬಹುದಿತ್ತು. ಗಾಬರಿಯಲ್ಲಿ ಜನ ಹಿಡಿದುಕೊಟ್ಟವರನ್ನಷ್ಟೇ ಜೈಲಿಗೆ ಸಾಗಿಸಿ ಕೈತೊಳೆದುಕೊಂಡಿದ್ದರಿಂದಾಗಿ ಪುಡಿರೌಡಿ ಭಾಸ್ಕರ ತಪ್ಪಿಸಿಕೊಂಡ.

ಅಷ್ಟಕ್ಕೂ ತನ್ನ ಶಿಷ್ಯರನ್ನು ಬಿಟ್ಟು ಬೆಂಗಳೂರಿನ ಕಂಡಕಂಡ ಬಿಲ್ಡಿಂಗುಗಳ ಫೋಟೋ ತೆಗೆಸಿ ಅದರ ಮಾಲೀಕರನ್ನು ಬ್ಲಾಕ್‌ಮೇಲ್ ಮಾಡಿ ರೊಕ್ಕ ಪೀಕುವ ಈ ಭಾಸ್ಕರ ಯಾರು? ನಿಜಕ್ಕೂ ಆತ ಪಾಲಿಕೆಯ ಇಂಜಿನಿಯರಾ? ಇತ್ಯಾದಿ ಗುಮಾನಿ ಅನೇಕರಿಗಿದೆ. ಇಲ್ಲಿಗೆ ಐದು ವರ್ಷದ ಹಿಂದೆ ಉಪಮೇಯರ್ ಶಹತಾಜ್ ಖಾನಂಳನ್ನು ಇದೇ ಭಾಸ್ಕರ ಪಾಲಿಕೆ ಸಭೆಯಲ್ಲೇ ಹಿಡಿದು ಬಡಿದ. ಜೈಲಿಗೂ ಹೋಗಿ ಬಂದ. ಆನಂತರ ಕಾಮಗಾರಿಸ್ಥಾಯಿ ಸಮಿತಿಯ ಪೀವನ್ ಮರಿಗೌಡನನ್ನು ಪಾಲಿಕೆಗೇ


ಆರೋಪಿ ಮಹೇಶ್


ನುಗ್ಗಿ ಹೊಡೆದ. ಮತ್ತೆ ಜೈಲಿಗೆ ಹೋಗಿಬಂದ. ತದನಂತರ ಪಾಲಿಕೆ ಇಂಜನಿಯರ್ ಒಬ್ಬರ ಬ್ಲಾಕ್‌ಮೇಲ್‌ಗೆ ಯತ್ನಿಸಿ ಅಲಸೂರು ಗೇಟ್ ಪೊಲೀಸ್ ಠಾಣೆಯ ಲಾಕಪ್ಪು ಕಂಡ. ಈತನ ವಿರುದ್ಧ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿಗಳು ಪೊಲೀಸರಿಗೆ ಡಜನ್ನುಗಟ್ಟಲೇ ದೂರು ಕೊಟ್ಟಿದ್ದಾರೆ. ಈತನನ್ನು ಪಾಲಿಕೆ ಆವರಣಕ್ಕೆ ಸೇರಿಸದಂತೆ ಬೆಂಗಳೂರಿನ ಕೌನ್ಸಿಲರ್‌ಗಳೆಲ್ಲ ಸೇರಿ ನಿರ್ಣಯ ಪಾಸು ಮಾಡಿದ್ದಾಗಿದೆ. ಸ್ವತಃ ಹಿಂದಿದ್ದ ಕಮೀಷನರ್ ಜೈರಾಜ್ ಈತನನ್ನು ರೌಡಿಪಟ್ಟಿಗೆ ಸೇರಿಸುವಂತೆ ಪೊಲೀಸ್ ಕಮೀಷನರ್ ಅಚ್ಯುತರಾಯರಿಗೆ ದೂರು ಕೊಟ್ಟಿದ್ದಾರೆ.

ಇಷ್ಟಾಗ್ಯೂ ಬಿಬಿಎಂಪಿ ಸಿಬ್ಬಂದಿಗಳಿಗೆ ಭಾಸ್ಕರನ ಹಾವಳಿ ತಪ್ಪಿಲ್ಲ. ಈತ ಪತ್ರಕರ್ತನ ವೇಷದ ರೌಡಿಯಾ? ಪುಢಾರಿ ಸೋಗಿನ ಬ್ಲಾಕ್‌ಮೇಲರಾ? ಸ್ತ್ರೀಪೀಡಕನಾ? ಅಥವಾ ಪಾಲಿಕೆಯ ಇಂಜನಿಯರ್‌ಗಳ ಖಯಾಲಿ

ರಾ. ಸೋಮನಾಥ್

ನಿವಾರಕನಾ? ಎಂಬುದೇ ಗೊತ್ತಾಗುತ್ತಿಲ್ಲ. ಆದರೆ ಪಾಖಂಡಿ ಭಾಸ್ಕರ ಈ ಎಲ್ಲಾ ಕಲ್ಯಾಣಗುಣಗಳ ಮೂರ್ತರೂಪಿ. ಪ್ರಾರಂಭದಲ್ಲಿ 'ನಿವಾರಣೆ' ಎಂಬ ಅನಿಯತಕಾಲಿಕ ಪತ್ರಿಕೆಯೊಂದನ್ನು ಮುದ್ರಿಸಿ ಬಿಟ್ಟಿ ಹಂಚಿಕೊಂಡಿದ್ದ. ಆನಂತರ 'ಬೆಂಗಳೂರು ಮಹಾನಗರ ಪಾಲಿಕೆ' ಎಂಬ ಟೈಟಲನ್ನೇ ತರಿಸಿ ಅದನ್ನು ಕರಪತ್ರದ ಮಾದರಿಯಲ್ಲಿ ಹಂಚಿಕೊಂಡಿದ್ದ. ಅದಕ್ಕೂ ಮುನ್ನ ಚಾಮರಾಜಪೇಟೆಯ ಹಳೇ ರೌಡಿ 'ಮುಗ್ಯಾಂಬೋ' ಎಂಬಾತನಿಗೆ ಈತ ಛೇಲಾಗಿರಿ ಮಾಡಿಕೊಂಡಿದ್ದ. ಆನಂತರ ಜನತಾದಳದ ಕಾರ್ಯಕರ್ತನಾಗಿ ದೇವೇಗೌಡರ ಬಂಟ ಆದಿಶೇಷಯ್ಯನ ಜೊತೆಬಿದ್ದ. ಕ್ರಮೇಣ ಪಾಲಿಕೆ ಇಂಜನಿಯರ್‌ಗಳಿಗೆ ಲೈವ್‌ಬ್ಯಾಂಡ್ ಹುಡುಗಿಯರನ್ನು ಕರೆಸಿ ಪಾರ್ಟಿ ಕೊಡಲಾರಂಭಿಸಿದ.

ಭಾಸ್ಕರ ಎಂಥಾ ಹರಾಮಿಯೆಂದರೆ ತಾನೇ ಕರೆಸಿದ ಬ್ಯಾಂಡ್ ಹುಡುಗಿಯರು ಪಾಲಿಕೆ ಇಂಜನಿಯರ್‌ಗಳ ಜೊತೆಗಿದ್ದಾಗಲೇ ಫೋಟೋ ತೆಗೆಯುತ್ತಿದ್ದ. ಅದನ್ನಿಟ್ಟುಕೊಂಡೇ ಬ್ಲಾಕ್‌ಮೇಲ್ ಮಾಡುತ್ತಿದ್ದ. ಬಂದಬಂದ ಮೇಯರ್‌ಗಳಿಗೆಲ್ಲ ಎಣ್ಣೆ ತಿಕ್ಕುತ್ತಿದ್ದ. ಬರುಬರುತ್ತ ಭಾಸ್ಕರ ಯಾವ ಮಟ್ಟಕ್ಕೆ ಬೆಳೆದನೆಂದರೆ ಬೆಂಗಳೂರಿನಲ್ಲಿ ಎಲ್ಲೇ ಹೊಸ ಅಪಾರ್ಟ್‌ಮೆಂಟ್ ತಲೆ ಎತ್ತಿದರೂ ಅಲ್ಲಿಗೆ ಹೋಗಿ ಕಾಟ ಕೊಡುತ್ತಿದ್ದ. ಅವುಗಳ ಫೋಟೋ ತೆಗೆದು ಚಾಲ್ತಿಯಲ್ಲೇ ಇಲ್ಲದ ತನ್ನ ಪತ್ರಿಕೆಯಲ್ಲಿ ಬರೆಯುತ್ತೇನೆಂದು ಬೆದರಿಸಿ ಲಕ್ಷಾಂತರ ರೂಪಾಯಿ ಸುಲಿಯುತ್ತಿದ್ದ. ತಾನು ಸುಲಿಯುವುದಲ್ಲದೇ ಆನಂತರ ಪಾಲಿಕೆಯ ಭ್ರಷ್ಟರನ್ನೂ ಛೂ ಬಿಡುತ್ತಿದ್ದ.


ಜಯರಾಜ್


ಕ್ರಮೇಣ ಪಾಲಿಕೆ ಅಧಿಕಾರಿಗಳನ್ನು ಹೋಟೆಲುಗಳ ವಿರುದ್ಧ ಛೂಬಿಟ್ಟು ರೇಡ್ ಮಾಡಿಸುತ್ತಿದ್ದ. ಪಾಲಿಕೆ ಕಂಟ್ರಾಕ್ಟರ್‌ಗಳನ್ನು ಬ್ಲಾಕ್‌ಮೇಲ್ ಮಾಡತೊಡಗಿದ. ಪಾಲಿಕೆ ಕಾಮಗಾರಿಗಳನ್ನೆಲ್ಲ ತಾನೇ ಹೋಗಿ ಇನ್ಸ್‌ಪೆಕ್ಷನ್ ಮಾಡಿ ಇಂಜನಿಯರ್‌ಗಳಿಂದ ದುಡ್ಡು ಕೀಳತೊಡಗಿದ. ಒಂದಷ್ಟು ಇಂಜನಿಯರ್‌ಗಳು ಸದ್ದಿಲ್ಲದೇ ಮಂತ್ಲಿ ಕೊಡತೊಡಗಿದರೆ, ಪಾಲಿಕೆಯ ನಿಷ್ಠಾವಂತ ಅಧಿಕಾರಿಗಳೆಲ್ಲ ಭಾಸ್ಕರನ ತಲೆ ಕಂಡಿದ್ದೇ ಎಸ್ಕೇಪಾಗುತ್ತಿದ್ದರು. ಮಾಹಿತಿ ಹಕ್ಕು ಕಾಯ್ದೆ ಜಾರಿಗೆ ಬಂದದ್ದು ಈತನಿಗೆ ಎಂಥಾ ಲಾಭವಾಯಿತೆಂದರೆ; ನಗರ ಯೋಜನಾ ಇಲಾಖೆ ಯಾವ್ಯಾವ ಅಪಾರ್ಟ್‌ಮೆಂಟುಗಳಿಗೆ ನಕ್ಷೆ ಮಂಜೂರು ಮಾಡುತ್ತೋ, ಭಾಸ್ಕರ ಅರ್ಜಿ ಹಾಕಿ ಅವುಗಳ ನಕಲು ಪಡೆದುಕೊಳ್ಳುತ್ತಿದ್ದ. ಪಾಲಿಕೆಯ 'ಪ್ರಹರಿ' ವಾಹನದ ಸಿಬ್ಬಂದಿಗಳನ್ನು ಬೆದರಿಸಿ, ಅದೇ 'ಪ್ರಹರಿ' ಗಾಡಿಯಲ್ಲಿ ತನ್ನ ರೌಡಿ ಗ್ಯಾಂಗ್ ಕಟ್ಟಿಕೊಂಡು ನಿರ್ಮಾಣ ಹಂತದ ಕಟ್ಟಡಗಳ ಮೇಲೆ ದಾಳಿ ನಡೆಸುತ್ತಿದ್ದ. ಕೆಲವೆಡೆ ತಾನೇ


ಬೆಂಗಳೂರು ಮಹಾನಗರಪಾಲಿಕೆ

ಕಪ್ಪಣ್ಣನ ಸಾಂಸ್ಕೃತಿಕ ಸೋರಿಕೆ!

ರಂಗ ಸಂಘಟಕ ಕಪ್ಪಣ್ಣನವರ ರಂಗಾಸಕ್ತಿ ಯಾರ್‍ಯಾರಿಗೆ ಸಂಕಟ ಉಂಟು ಮಾಡಬಲ್ಲದೆಂಬುದಕ್ಕೆ ಇಲ್ಲೊಂದು ಉದಾಹರಣೆಯಿದೆ.

ಕೆಲವು ತಿಂಗಳ ಹಿಂದೆ ಅವರಿಗೆ ಒಂದು ಯುರೇಕಾ (ಐಡಿಯಾ) ಹೊಳೆಯಿತು. ಬೇರೆ ಬೇರೆ ರಾಜ್ಯಗಳ ಯೂನಿವರ್ಸಿಟಿಗಳಿಂದ ವಿದ್ಯಾರ್ಥಿ ನಾಟಕ ತಂಡಗಳನ್ನು ಕರೆಸಿ ಕನ್ನಡ ನಾಟಕಗಳನ್ನು ಅವರವರ ಭಾಷೆಗೆ ಅನುವಾದಿಸಿ ಶೋ ಮಾಡಿಸಿಬಿಡಬಹುದು ಎಂಬ ಮಹೋನ್ನತ ಐಡಿಯಾ ಅದು. ಸರಿ, ಪತ್ರ ವ್ಯವಹಾರ ಇತ್ಯಾದಿ ಎಲ್ಲಾ ಆಗಿ ಗುಜರಾತ್, ಅಸ್ಸಾಂ, ಜಾರ್ಖಂಡ್, ಆಂಧ್ರ, ತಮಿಳುನಾಡಿನಿಂದ ತಂಡಗಳು ಬಂದೂಬಿಟ್ಟವು. ಬೆಂಗಳೂರು ವಿ.ವಿ. ಈ ಕಾರ್ಯಕ್ರಮ ಪ್ರಾಯೋಜಿಸಲು ಒಪ್ಪಿಕೊಂಡಿತು. ಜೊತೆಗೆ ನಾಟಕ ಅಕಾಡೆಮಿಯ ಹಣವೂ ಸಾಕಷ್ಟು ಖರ್ಚಾಯಿತು. ಆದರೆ ಎನ್‌ಎಂಕೆಆರ್‌ವಿ ಕಾಲೇಜಿನ ಮಂಗಳ ಮಂಟಪದಲ್ಲಿ ನಡೆದ ಈ ನಾಟಕಗಳನ್ನು ನೋಡಲು ಜನರೇ ಇರಲಿಲ್ಲ. ಸರಿಯಾಗಿ ಪ್ರಚಾರ ಮಾಡದೆ ಆತುರಾತುರವಾಗಿ ಕಾರ್ಯಕ್ರಮ ನಡೆಸಿದ್ದು, ಮತ್ತು ಇದರ ಮಹತ್ವ ಏನೆಂಬುದು ಯಾರಿಗೂ ಗೊತ್ತಾಗದಿದ್ದದ್ದೇ ಈ ವೈಫಲ್ಯಕ್ಕೆ ಕಾರಣ. ತೆಲುಗರು ಆಡಿದ ನಾಟಕವನ್ನು ಗುಜರಾತಿ ತಂಡವೂ ಅಸ್ಸಾಮಿಗಳದ್ದನ್ನು ತಮಿಳು



ವಿದ್ಯಾರ್ಥಿಗಳೂ ನೋಡಿಕೊಂಡು ಪೆಚ್ಚಾಗಿ ವಾಪಸ್ ಹೋಗಿದ್ದಾರೆ.

ಒಟ್ಟಾರೆಯಾಗಿ ಎಲ್ಲರ ಶ್ರಮ, ಸಮಯ, ಹಣ ದಂಡ.

ಇದೊಂಥರ ಸಾಂಸ್ಕೃತಿಕ ಸೋರಿಕೆ. ನಾಟಕದ ಚಟವಿದ್ದರೆ ನಿಲಬಹುದಲ್ಲದೆ ನಾಟಕೀಯ ಚಟವಿದ್ದವರ ಬಳಿ ನಿಲಬಹುದೆ?

* * * * * *

ವ್ಯರ್ಥ ಕಾವ್ಯಾಲಾಪ

ಬಿಡಿ ಚಿತ್ರಗಳು


● ಪಾರ್ವತೀಶ ●

ಬೆಂಗಳೂರಿನ ಕೆಲ ಯುವ ಕವಿಗಳಿಗೆ ಹೊಸ ಗೀಳೊಂದು ಶುರುವಾಗಿಬಿಟ್ಟಿದೆ. ತಾವು ಹೊಸದಾಗಿ ಒಂದು ಪದ್ಯ ಬರೆದರೆ ಅಷ್ಟೇ ಅರ್ಜೆಂಟಾಗಿ ಇಂಗ್ಲಿಷ್‌ಗೆ ಅನುವಾದ ಮಾಡಿಸಿಬಿಡುವುದು. ಮೊನ್ನೆ ನಮ್ಮ ಕಚೇರಿಗೆ ಬಂದಿದ್ದ ವಿ.ಎಂ. ಮಂಜುನಾಥ್ ಎಂಬ ಯುವ ಕಲಾವಿದ-ಕವಿ ಮಿತ್ರ ಒಂದು ಆಶ್ಚರ್ಯಕಾರಿ ಸಮಾಚಾರ ಹೇಳಿದರು. ನನ್ನ ಇನ್ನೊಬ್ಬ ಮಿತ್ರ ನಾಗತಿಹಳ್ಳಿ ರಮೇಶ್ ವಿಚಾರ ಅದು.

ರಮೇಶ್‌ರ ಹೊಸ ಕವನ ಸಂಕಲನವೊಂದು ಸದ್ಯದಲ್ಲೇ ಬಿಡುಗಡೆ ಆಗಲಿದೆಯಂತೆ. ಜೊತೆಗೆ ಅದೇ ದಿನ ಅದರ ಇಂಗ್ಲಿಷ್ ಅನುವಾದದ ಪುಸ್ತಕವೂ ಬರಲಿದೆಯಂತೆ. ಅಷ್ಟೇ ಅಲ್ಲ, ಇದೊಂದು ಹೊಸ ದಾಖಲೆ ಎಂದರು ಮಂಜುನಾಥ್. ಬೆರಗಾದ ನಾನು, 'ನೀವೆಲ್ಲಾ ಈ ಥರ ಇಂಗ್ಲಿಷ್ ಅನುವಾದ ಯಾಕೆ ಮಾಡಿಸ್ತಿದ್ದೀರಾ, ಯಾರು ಓದ್ತಾರೆ?' ಅಂದೆ. ಯಾಕೆಂದರೆ ಬರೀ ನಾಗತಿಹಳ್ಳಿದು ಮಾತ್ರವಲ್ಲ, ಮಂಜುನಾಥ್ ಅವರ ಇನ್ನೊಬ್ಬ ಕವಿಮಿತ್ರ ಕಾರ್ಪೆಂಟರ್ ಎಂಬಾತನ ಪದ್ಯಗಳೂ ಈಗಾಗಲೇ ಇಂಗ್ಲಿಷ್‌ಗೆ ಅನುವಾದ ಆಗುತ್ತಿವೆ. ಅಂಕುರ್ ಬೆಟಗೇರಿಯೆಂಬ ಇಂಗ್ಲಿಷ್ ಬಲ್ಲ ಹುಡುಗನೇ factory ರೀತಿ ಈ ಅನುವಾದಗಳನ್ನು ಉತ್ಪಾದಿಸುತ್ತಿರುವಾತ.

ಕನ್ನಡದಲ್ಲಿ ಒಳ್ಳೇ ಕಾವ್ಯ ಬರೆದ ಬೇಂದ್ರೆ, ಕುವೆಂಪು, ಲಂಕೇಶ್, ಅಡಿಗರಿಗೆ ಈ ರೀತಿ ಇಂಗ್ಲಿಷ್‌ಗೆ ಅನುವಾದ ಮಾಡಿಸಬೇಕೆಂಬ ಗೀಳೇನೂ ಇರಲಿಲ್ಲ. ನಿಜಕ್ಕೂ ಅನ್ಯ ಭಾಷೆಗಳಿಗೆ ರಫ್ತಾಗಬೇಕಿದ್ದ ಕಾವ್ಯದ್ರವ್ಯಗಳವು. ಆದರೆ ಈ ಹುಡುಗರ ಪದ್ಯಗಳಲ್ಲಿ ಬಹುಪಾಲು ಹೆಣ್ಣು, ಕಾಮದ ಸುತ್ತಲೇ ಪಲ್ಟಿ ಹೊಡೆಯುತ್ತಿವೆ. ನಮ್ಮ ಸಮಕಾಲೀನ ಸಾಮಾಜಿಕ ಸಂದರ್ಭದಿಂದ ಇವರ ಕಾವ್ಯ ಏನನ್ನೂ ಹೀರಿಕೊಳ್ಳುತ್ತಿರುವಂತೆ ಕಾಣುತ್ತಿಲ್ಲ. ಈ ಉತ್ಸಾಹಿ ಕವಿಗಳ ಸೃಜನಶೀಲ ಸಾಧ್ಯತೆಗಳು ಪೋಲಾಗುತ್ತಿರುವ ರೀತಿ ನಿರುತ್ಸಾಹ ತರಿಸುವಂತಿದೆ. ಈ ಅಂಕುರ್ ಬೆಟಗೇರಿ ಜಾಣ, ಸೂಕ್ಷ್ಮಜ್ಞ ಎಂದು ಹೇಳುತ್ತಾರೆ. ಜೊತೆಗೆ ಈತ ಜರ್ಮನ್ ತತ್ವಜ್ಞಾನಿ ಹೆಗೆಲ್‌ನನ್ನು ಸಿಕ್ಕಾಪಟ್ಟೆ ಓದಿದ್ದಾನೆ ಎಂಬ ಪುಕಾರುಗಳೂ ಇವೆ. ನಾನೊಮ್ಮೆ ಈ ಹೆಗೆಲ್ ವಾದಿಯನ್ನು ಭೇಟಿಯಾದಾಗ ಹೆಗಲ ಮೇಲೆ ಕೂದಲು, ಬಗಲಲ್ಲಿ ಅನುವಾದದ ಕಾರ್ಖಾನೆಯ ಕೆಲ ಪ್ರಾಡಕ್ಟುಗಳಷ್ಟೇ ಕಂಡವು. ಸ್ವಂತದ್ದು ಅಚ್ಚಿಲ್ಲಿ ಅನ್ನಿಸುವಂಥ ಕೆಲಸವನ್ನಷ್ಟೇ ಮಾಡಬಾರದು ಎಂಬ ಹಿತವಚನ ಇವರಿಗೆ ಹೇಳಬಹುದಾ?


ಕವಿ ಕಾರ್ಪೆಂಟರ್


ವಿ. ಭಾಸ್ಕರ್

ಪಾಲಿಕೆಯ ಇಂಜಿನಿಯರ್ ಎಂದೇ ಫೋಜು ಕೊಟ್ಟ. ಕಟ್ಟಡಗಳ ಮಾಲೀಕರಿಂದ ಸಿಕ್ಕಾಪಟ್ಟೆ ದುಡ್ಡು ಕಿತ್ತ. ಈ ರೀತಿ ಬ್ಲಾಕ್‌ಮೇಲ್ ಮಾಡಿಯೇ ಹದಿನೈದು ಕೋಟಿಯಷ್ಟು ಆಸ್ತಿ ಗಳಿಸಿದ್ದಾನೆಂದರೆ ಈತನ ತಾಕತ್ತು ಇನ್ನೆಷ್ಟಿರಬೇಡ?

ಈ ಬಾರಿ ಇಡೀ ರಸ್ತೆಯ ಕಟ್ಟಡ ಮಾಲೀಕರನ್ನೆಲ್ಲ ಸಾರಾಸಗಟಾಗಿ ಬ್ಲಾಕ್‌ಮೇಲ್ ಮಾಡಿ ದೊಡ್ಡ ಮೊತ್ತವನ್ನೇ ಕೀಳಲು ಹೊಂಚು ಹಾಕಿದ್ದ ಭಾಸ್ಕರನಿಗೆ ಅಕ್ಟೋಬರ್ 8ರ ಬೆಳಿಗ್ಗೆ ನಸೀಬು ಕೆಟ್ಟಿದೆ. ಪಾಲಿಕೆಯ 'ಪ್ರಹರಿ' ಗಾಡಿಯಲ್ಲೇ ಬಂದು ಫೋಟೋ ತೆಗೆಯುತ್ತಿದ್ದ ಭಾಸ್ಕರನನ್ನು ಜೆ.ಪಿ. ನಗರದ ಸಿಲ್ವರ್‌ಓಕ್ ಸ್ಟ್ರೀಟ್‌ನ ಜನರೇ ಹಿಡಿದು ಬಡಿದಿದ್ದಾರೆ. ಯಾವತ್ತು ತನ್ನ ಸ್ಕೆಚ್ಚೇ ಉಲ್ಟಾ ಹೊಡೆಯಿತೋ ಭಾಸ್ಕರ ತಾನೇ ಕರೆತಂದಿದ್ದ ರೌಡಿಪಡೆಯನ್ನು ಬಿಟ್ಟು ಓಡಿಹೋಗಿದ್ದಾನೆ. ಸಿಕ್ಕಿಬಿದ್ದವನು ಆತನ ಬಲಗೈ ಬಂಟ ಮಹೇಶ ಮತ್ತು ಹುಡಿಪುಡಿ ಛೇಲಾಗಳು!

ಎಷ್ಟೆಂದರೂ ಪಾಪಿ ಚಿರಾಯು ತಾನೆ? ಸದ್ಯ ಭಾಸ್ಕರ ಜೈಲು ಪಾಲಾಗುವುದು ತಪ್ಪಿದೆ ನಿಜ. ಹಾಗಂತ ಪಾಲಿಕೆಗೆ ಪೀಡೆ ತಪ್ಪಿಲ್ಲವಲ್ಲ? ಹಿಂದಿದ್ದ ಕಮೀಷನರ್ ಜೈರಾಜ್‌ರೇ ಈತನನ್ನು ರೌಡಿಪಟ್ಟಿಗೆ ಸೇರಿಸುವಂತೆ ಪೊಲೀಸರಿಗೆ ದೂರು ಕೊಟ್ಟಾಗಲೂ ಜೆ.ಪಿ. ಇನ್ಸ್‌ಪೆಕ್ಟರ್ ಕೋನಪ್ಪರೆಡ್ಡಿ ಯಾಮಾರುತ್ತಾರೆಂದರೆ; ಅದು ಭಾಸ್ಕರನ ಲಕ್ಕಾ? ಪಾಲಿಕೆಯ ದುರಂತವಾ?

ನಿವಾರಣೆ ಭಾಸ್ಕರನನ್ನು ಪಾಲಿಕೆಯಿಂದ ನಿವಾರಣೆ ಮಾಡುವವರ್‍ಯಾರು? ■

ಮಹಿಳಾ ನೌಕರರ ಪಾಲಿಗೆ ಇವನೇ ಕೀಚಕ

ಕೆಲವೆಡೆ ತಾನು ಪತ್ರಕರ್ತನೆಂದು ಫೋಜು ಕೊಡುತ್ತಾನಾದರೂ ಅಸಲಿಗೆ ಈತ ಪತ್ರಕರ್ತನೇ ಅಲ್ಲ, ಏಕೆಂದರೆ ಈತನಿಗೆ ಬರೆಯಲಿಕ್ಕೆ ಬಾರದು. ಮೊದಮೊದಲು ಕೆಲ ದಿನಪತ್ರಿಕೆಗಳ ವರದಿಗಾರರಿಗೆ ಈತ ಪಾಲಿಕೆ ಅಧಿಕಾರಿಗಳ ಬಗ್ಗೆ ಮಾಹಿತಿ ಕೊಟ್ಟು ಬರೆಸುತ್ತಿದ್ದ. ಬರೆಸಿಕೊಂಡಾತ ಕಾಸು ಬಿಚ್ಚದ್ದೇ ಭಾಸ್ಕರ ತನ್ನ ಪ್ಲೇಟು ಬದಲಾಯಿಸಿ ವರದಿಗಾರರನ್ನು ದಿಕ್ಕು ತಪ್ಪಿಸುತ್ತಿದ್ದ.

ಯಾರೇ ವರದಿಗಾರನೊಬ್ಬ ಪಾಲಿಕೆ ಭ್ರಷ್ಟಾಚಾರಗಳ ವಿರುದ್ಧ ಹೆಚ್ಚು ಆಳಕ್ಕಿಳಿದನೆಂದರೆ ಭಾಸ್ಕರ ಅಂಥಹ ವರದಿಗಾರನ ವಿರುದ್ಧ ಆತನ ಸಂಪಾದಕರಿಗೆ ಪಾಲಿಕೆ ಅಧಿಕಾರಿ ಹೆಸರಲ್ಲಿ ಫೋನ್ ಮಾಡಿ ಚಾಡಿ ಚುಚ್ಚುತ್ತಾನೆ. ಏಕೆಂದರೆ ಪಾಲಿಕೆ ಹುಳುಕಗಳೆಲ್ಲ ಇನ್ನೊಬ್ಬ ವರದಿಗಾರನಿಗೆ ಗೊತ್ತಾದರೆ ತನ್ನ ಲೂಟಿಗೆ ಕಷ್ಟ ತಾನೆ?

ಯಾವುದೇ ಪತ್ರಿಕೆಯ ವರದಿಗಾರನೊಬ್ಬ ಒಂದು ವರ್ಷಕ್ಕೂ ಮೀರಿ ಪಾಲಿಕೆಯ ವರದಿಗೆ ಬಾರದಂತೆ ಫಿಟ್ಟಿಂಗ್ ಇಡುವುದು ಈತನ ತಂತ್ರ. ಇದಿಷ್ಟೇ ಅಲ್ಲ, ಪಾಲಿಕೆಯ ಮಹಿಳಾ ನೌಕರರಿಗೂ ಭಾಸ್ಕರ ಲೈಂಗಿಕ ಕಿರುಕುಳ ಕೊಟ್ಟಿದ್ದಾನೆ. ಪಾಲಿಕೆಯ ಮಹಿಳಾ ನೌಕರರು ಮರ್ಯಾದೆಗೆ ಅಂಜಿಯೇ ಭಾಸ್ಕರನ ಬ್ಲಾಕ್‌ಮೇಲ್‌ಗೆ ಬಲಿಯಾದ ಉದಾಹರಣೆಗಳಂತೂ ಲೆಕ್ಕವಿಲ್ಲ.


ಕಪಟ ಜ್ಯೋತಿಷಿಯ ಕುಚೇಷ್ಟೆ

ಕೋಮು ಸರ್ಪಗಳಿಗೆ ಅಧಿಕಾರ ತಪ್ಪಿಸಿದ ಕುಮಾರಸ್ವಾಮಿಯ ಕೀರ್ತಿಯನ್ನೆಲ್ಲ ಖದೀಮ ಜ್ಯೋತಿಷಿ ಸೋಮಯಾಜಿ ತಿಂದು ಹಾಕಿದ್ದಾನೆ!

ಯಡಿಯೂರಪ್ಪ ಜನ್ಮೇಪಿ ಮುಖ್ಯಮಂತ್ರಿಯಾಗೋಲ್ಲ, ಕುಮಾರಸ್ವಾಮಿಯೇ ಮುಂದಿನ ಮುಖ್ಯಮಂತ್ರಿಯಾಗ್ತಾರೆ, ಇನ್ನೂ ಐದು ವರ್ಷಗಳ ಕಾಲ ಅವರೇ ಕರ್ನಾಟಕವನ್ನಾಳುತ್ತಾರೆ. ಆನಂತರ ಅವರೇ ದೇಶಕ್ಕೆ ಪ್ರಧಾನ ಮಂತ್ರಿಯಾಗ್ತಾರಂತೆ!


ಹಾಗೆಂದು ಮೆಂಟಲ್ ಆಸ್ಪತ್ರೆಯಿಂದ ಆಗಷ್ಟೇ ತಪ್ಪಿಸಿಕೊಂಡು ಬಂದವನಂತೆ ದೈವಜ್ಞ ಸೋಮಯಾಜಿ ಡೈಲಾಗ್ ಹೊಡೆಯುತ್ತಿದ್ದರೆ, ಅದನ್ನು ಟೀವಿ ನೈನ್ ಎಂಬ ಚಾನೆಲ್ಲು ಕಣ್ಣಿಗೊತ್ತಿಕೊಂಡು ಬಿತ್ತರಿಸುತ್ತದೆ. ಹುಟ್ಟಾ ಚೆಡ್ಡಿಗಳ ತಿಕವಾಣಿಯಾದ ವಿ.ಕ. ಅದನ್ನೇ ದೈವವಾಣಿಯಂತೆ ಪ್ರಕಟಿಸುತ್ತದೆ. ಟೀವಿ ನೈನ್ ಮತ್ತು ವಿ.ಕ.ದ ಓದುಗರ ಕರ್ಮಕ್ಕೆ ಯಾರು ತಾನೇ ಏನು ಮಾಡಲು ಸಾಧ್ಯ?

ಅಷ್ಟಕ್ಕೂ ಈ ಕೆ.ಎನ್. ಸೋಮಯಾಜಿ ಉರ್ಫ್ ದೈವಜ್ಞ ಸೋಮಯಾಜಿ ಯಾರು? ಈತನಿಗೆ ನಿಜಕ್ಕೂ ಜ್ಯೋತಿಷ್ಯ ಗೊತ್ತೆ? ಜ್ಯೋತಿಷ್ಯ ಹಾಳಾಗಲಿ, ಈತ ಶಂಕರಮಠಕ್ಕೆ ವಕ್ಕರಿಸಿದ್ದಾದರೂ ಹೇಗೆ? ಇತ್ಯಾದಿಗಳದ್ದೇ ಇಂಟರೆಸ್ಟಿಂಗ್ ಸ್ಟೋರಿಯಾಗುತ್ತದೆ. ಯಾರಿಗೂ ಗೊತ್ತಿಲ್ಲದ ಸಂಗತಿಯೆಂದರೆ ಇದೇ ದೈವಜ್ಞ ಸೋಮಯಾಜಿಯ ಜ್ಯೋತಿಷ್ಯವನ್ನು ನಂಬಿಯೇ ವಿನಿವಿಂಕ್ ಶಾಸ್ತ್ರಿ ಡಬ್ಲಿಂಗ್ ದಂಧೆಗೆ ಕೈಯಿಟ್ಟ. ಇವತ್ತು ಜೈಲಿಂದ ಹೊರಬರುವುದಕ್ಕೂ


ಜ್ಯೋತಿಷಿ ಸೋಮಯಾಜಿ


ಜ್ಯೋತಿಷಿಯೊಂದಿಗೆ ದಳದ ನಾಯಕರು

ಶಾಸ್ತ್ರಿಯಿಂದಾಗುತ್ತಿಲ್ಲ. ಇದೇ ಸೋಮಯಾಜಿಯ ಮಾತು ಕೇಳಿದ ಇನ್‌ವೆಸ್ಟರ್ ಕೃಷ್ಣಮೂರ್ತಿ ಕೂಡ ಜೈಲು ಪಾಲಾಗಿದ್ದಾನೆ. ಇನ್ನು ಶಂಕರಮಠಕ್ಕೇ ಬಂದು ಸೋಮಯಾಜಿಯ ಕಾಲಿಗೆ ಬಿದ್ದು ಆತನ ತಲೆ ಹರಟೆಯನ್ನು ನಂಬಿದ ಕುಮಾರಸ್ವಾಮಿ ಚಲುವಾದಿಗಳ ಕತೆ ಇದಕ್ಕಿಂತಲೂ ಭಿನ್ನವಾಗಿರಲು ಸಾಧ್ಯವೆ?



ಅಸಲಿಗೆ ಈತ ಜ್ಯೋತಿಷಿಯೇ ಅಲ್ಲ, ಶೃಂಗೇರಿಮಠದ ಆಡಳಿತಾಧಿಕಾರಿ ಗೌರಿಶಂಕರನಿಗೆ ಬೆಣ್ಣೆ ತಿಕ್ಕಿಕೊಂಡಿದ್ದ ಈ ಕೆ.ಎನ್. ಸೋಮಯಾಜಿ ಓರ್ವ ಹುಟ್ಟಾ ವಂಚಕ. ವಿ.ವಿ.ಪುರಂನ ಕೋಮಟ ಶೆಟ್ಟಿಯೊಬ್ಬನಿಗೆ ನಿಧಿ ಸಿಗುವ ಹಾಗೇ ಮಾಡುತ್ತೇನೆಂದು ಹತ್ತು ಲಕ್ಷ ಕಿತ್ತಿದ್ದಾನೆ. ಚಿಕ್ಕಪೇಟೆಯ ಹವಾಲಾ ಖದೀಮ ಶಾಂತಿಲಾಲ್ ಜೈನ್‌ನಿಂದ ಐದು ಲಕ್ಷ ಕಿತ್ತು ಯಾವುದೋ ಲಾಟರಿ ಟಿಕೆಟ್ ಮಂತ್ರಿಸಿಕೊಟ್ಟು ಐದು ಕೋಟಿ ಬಂಪರ್ ಬರುವಂತೆ ಮಾಡುತ್ತೇನೆಂದು ಆತನ ಬಂಟರಿಂದ ಮುಖಾಮೂತಿ ಚಚ್ಚಿಸಿಕೊಂಡಿದ್ದ.

ಕಳೆದ ಚಾಮರಾಜಪೇಟೆ ಉಪ ಚುನಾವಣೆಯಲ್ಲಿ ಬ್ರಾಹ್ಮಣರ್‍ಯಾರೂ ಬಿಜೆಪಿಗೆ ಓಟೇ ಕೊಡದ ಹಾಗೇ ಮಾಡ್ತೀನಿ ಎಂದು ಕುಮಾರಣ್ಣನಿಂದ ದುಡ್ಡು ಕಿತ್ತಿದ್ದ ಸೋಮಯಾಜಿಗೆ ಜಮೀರ್ ಗೆದ್ದಿದ್ದು ಎಂಥಾ ಅನುಕೂಲವಾಯಿತೆಂದರೆ ತನ್ನಿಂದಲೇ ಮಾರ್ಕೆಟ್ ದೇವಿ ಸೋತನೆಂದು ದೇವೇಗೌಡರನ್ನು ನಂಬಿಸಿಬಿಟ್ಟ. ಜಮೀರ್ ಗೆಲ್ಲುವುದಕ್ಕೂ ಕಪಟ ಜ್ಯೋತಿಷಿ ಸೋಮಯಾಜಿಗೂ ಸಂಬಂಧವಿಲ್ಲವೆಂದು ದೇವೇಗೌಡರಿಗೂ ಕುಮಾರಣ್ಣನಿಗೂ ಗೊತ್ತಾಗುವುದೆಲ್ಲಿಂದ?

ಆವತ್ತಿನಿಂದ ಸೋಮಯಾಜಿಯ ಸ್ಟಾರೇ ಬದಲಾಯಿತು. ಅಲ್ಲಿಯತನಕ ಬಂಡಲ್ ವಾಸ್ತು ಹೇಳಿಕೊಂಡಿದ್ದ ಸೋಮಯಾಜಿಯೇ ದೇವೇಗೌಡರನ್ನು ತಮಿಳುನಾಡಿನ ಮಂತ್ರವಾದಿಗಳ ಬಳಿ ಕೊರೆದೊಯ್ಯತೊಡಗಿದ. ಕೇರಳಕ್ಕೂ ಕರೆದೊಯ್ದು ತಲೆ ಬೋಳಿಸಿದ. ಇಂಥಾ ಖದೀಮನನ್ನು ಕರೆತಂದು ವಿಜಯ ಕರ್ನಾಟಕಕ್ಕೆ ನಿತ್ಯ ಪಂಚಾಂಗ ಬರೆಯಲು ಹಚ್ಚಿದ್ದು ವೀಕದ ಸಂಪಾದಕ ವಿಶ್ವೇಶ್ವರ ಭಟ್ಟ!

ಅದೇನೋ ವಂಚಕ ಚಂಭಟ್ಟನಿಂದ ಹಿಡಿದು ಸೋಮಯಾಜಿಯಂಥ ಕಪಟ ಜ್ಯೋತಿಷಿಗಳ ತನಕ ಅನೇಕರಿಗೆ ವೀಕದ ಭಟ್ಟನೇ ಗಾಡ್‌ಫಾದರ್? ತಮಾಷೆಯೆಂದರೆ ವಿ.ಕ.ದಲ್ಲಿ ಪ್ರತೀವಾರ ಸೋಮಯಾಜಿಯೇ ವಾಸ್ತುಶಾಸ್ತ್ರದ ಸಮಸ್ಯೆಗಳಿಗೆ ಉತ್ತರಿಸುತ್ತಾನೆ. ಯಾರೇ ಪ್ರಶ್ನೆ ಕೇಳಿದರೂ ನಿಮ್ಮ ಮನೆಯ ಬಾಗಿಲು ಒಡೆಯಿರಿ, ಬೆಡ್‌ರೂಂ ಚೇಂಜ್ ಮಾಡಿ, ಚಪ್ಪಲಿ ಸ್ಟ್ಯಾಂಡ್ ಹೊರಗಿಡಿ, ಚಪ್ಪಲಿಯನ್ನು ಉತ್ತರಕ್ಕೆ ಬಿಡುವ ಬದಲು ದಕ್ಷಿಣಕ್ಕೆ ಬಿಡಿ, ಕೆಂಪು ಬಟ್ಟೆ ಹಾಕಬೇಡಿ; ಇತ್ಯಾದಿ ಕಳ್ಳ ಪರಿಹಾರಗಳನ್ನೇ ಬರೆಯುತ್ತಾನೆ.

ಇದನ್ನು ನಂಬಿದ ಯಾರೂ ಉದ್ಧಾರವಾದ ಸುದ್ದಿಗಳಿಲ್ಲ, Expect ವಿ.ಕ.!

ಇಂಥಾ ಖದೀಮನ ಮಾತು ನಂಬಿ ಮೋಸ ಹೋದ ಬ್ರಾಹ್ಮಣ ಮಹಾಸಭಾದ ಬಿಎಸ್‌ವಿ ಸುಬ್ರಹ್ಮಣ್ಯ, ಹಿರಿಯಣ್ಣ ಸ್ವಾಮಿ ಮತ್ತು ಎಂ.ವಿ.ಆರ್ ಪ್ರಸಾದ್ ಥರದವರೇ ಈಗ ಸೋಮಯಾಜಿಯ ವಿರುದ್ಧ ತಿರುಗಿಬಿದ್ದಿದ್ದಾರೆ. ಈತನನ್ನು ಶಂಕರಮಠದಿಂದ ಹೊರಗಟ್ಟುವಂತೆ ಚಂದ್ರಶೇಖರ ಭಾರತಿ ಸ್ವಾಮಿಗೆ ದೂರು ಕೊಟ್ಟಿದ್ದಾರೆ. ಆದರೆ ಸೋಮಯಾಜಿ ಎಂಥಾ ಪಾಖಂಡಿಯೆಂದರೆ ಶೃಂಗೇರಿ ಮಠದ ಆಡಳಿತಾಧಿಕಾರಿ ಗೌರಿಶಂಕರನನ್ನೇ ಯಾಮಾರಿಸಿ ಶಂಕರಮಠದ ಗ್ರಂಥಾಲಯವನ್ನೇ ತನ್ನ ಆಸ್ತಿಯನ್ನಾಗಿ ಬರೆಸಿಕೊಂಡಿದ್ದಾನೆ!


ವಿನಿವಿಂಕ್ ಶಾಸ್ತ್ರಿ

ಆತ ಸತ್ತ ನಂತರವಷ್ಟೇ ಮಠದ ಲೈಬ್ರರಿಗೆ ಮುಕ್ತಿಯಂತೆ. ಮಠದ ಗ್ರಂಥಾಲಯವನ್ನೇ ತನ್ನ ಆಸ್ತಿಯನ್ನಾಗಿ ಬರೆಸಿಕೊಂಡವನಿಗೆ ಶಂಕರಮಠದ ನೂರಾರು ಕೋಟಿ ಆಸ್ತಿ ಕಬಳಿಸುವುದು ಕಷ್ಟವೇನಲ್ಲ. ಅದರಲ್ಲೂ ದೇವೇಗೌಡರ ಕುಟುಂಬದ ಬೆಂಬಲ ಸಿಕ್ಕಿಬಿಟ್ಟರೆ ಶೃಂಗೇರಿ ಸಂಸ್ಥಾನವನ್ನೇ ನುಂಗುವ ಕಲೆಗಾರಿಕೆ ಈತನಿಗಿದೆ. ಅಂಥಾ ದೇವೇಗೌಡ ಕುಮಾರಣ್ಣನಂಥವರನ್ನೇ ತನ್ನ ಕಾಲಿಗೆ ಕೆಡವಿಕೊಂಡವನಿಗೆ ಶೃಂಗೇರಿ ಮಠ ಯಾವ ಲೆಕ್ಕ?

ಯಾವುದಕ್ಕೂ ಬ್ರಾಹ್ಮಣರು ಎಚ್ಚರಿಕೆಯಿಂದಿರುವುದು ಒಳಿತು.


-ರಾ. ಸೋ.

ಭಿಕಾರಿಗೆ ಬಂಗಾರದ ಗಣಪತಿ ಎಲ್ಲಿಂದ ಬರುತ್ತೆ?

ಹಿಂದೊಮ್ಮೆ ಲೋಕಲ್ ಸುದ್ದಿ ಚಾನಲ್ಲೊಂದು ಈ ಸೋಮಯಾಜಿಯ ಫೋನ್ ಇನ್ ಸಂದರ್ಶನ ಬಿತ್ತರಿಸುತ್ತಿತ್ತು, ನಿರುದ್ಯೋಗಿಯೊಬ್ಬ ತಾನು ಬೀದಿಗೆ ಬಿದ್ದಿದ್ದೇನೆಂದೂ, ತುತ್ತು ಅನ್ನಕ್ಕೂ ಗತಿಯಿಲ್ಲವೆಂದೂ, ಏನಾದರೂ ಪರಿಹಾರ ಸೂಚಿಸಬೇಕೆಂದೂ ಫೋನ್ ಮಾಡಿ ಗೋಗರೆಯುತ್ತಿದ್ದ. ಅದಕ್ಕೆ ಸೋಮಯಾಜಿ ಎಂಥಾ ಬ್ರಹ್ಮಾಂಡ ಪರಿಹಾರ ಸೂಚಿಸಿದನೆಂದರೆ; 'ಒಂದು ವಾರದ ಕಾಲ ನೀನು ಬಂಗಾರದ ಗಣಪತಿ ವಿಗ್ರಹವನ್ನು ಪೂಜಿಸು ನಿನ್ನ ಎಲ್ಲಾ ಕಷ್ಟ ಪರಿಹಾರವಾಗುತ್ತೆ' ಎಂದುಬಿಟ್ಟ.

ಅದಕ್ಕೆ ಫೋನ್ ಮಾಡಿದಾತ 'ಅಲ್ಲಯ್ಯಾ ನನಗೇ ಗತಿ ಇಲ್ಲ, ಇನ್ನು ಬಂಗಾರದ ಗಣಪತಿಯನ್ನು ಯಾವ ದೇವಸ್ಥಾನಕ್ಕೆ ಕನ್ನ ಹಾಕಿ ತರಲಿ?' ಎಂದು ಫೋನ್ ಕುಕ್ಕಿದ.

ಇಂಥಾ ತಲೆಕೆಟ್ಟ ಜ್ಯೋತಿಷಿಗಳ ಕತೆ ಹಾಳಾಗಲಿ, ಇಂಥವರನ್ನು ನಂಬುವ ಮುಠ್ಠಾಳರಿಗೆ ಏನೆನ್ನಬೇಕು?




ಹೆಡ್‌ಕಾನ್ಸ್‌ಟೇಬಲ್ ಮಾದಯ್ಯನ ದುರಂತ

ಇರಿದವಳು ಅಕ್ಕ, ಕೊಂದವನು ಎಸಿಪಿ



ನೆಲಕ್ಕೆ ಬಿದ್ದು ಹೊರಳಾಡುತ್ತಿದ್ದ ಪೇದೆ ಮಾದಯ್ಯನನ್ನು ತಕ್ಷಣವೇ ಜೀಪಿನಲ್ಲಿ ಕರೆದೊಯ್ದು ಬದುಕಿಸಬಹುದಿತ್ತು. ಆದರೆ ಎಸಿಪಿ ರಮೇಶ್‌ಬಾಬು ತನ್ನ ಅಕ್ಕನನ್ನು ಬಚಾವು ಮಾಡುವ ಚಿಂತೆಯಲ್ಲಿದ್ದರು. ಇರಿದ ಅಕ್ಕನಿಗೇನೋ ಬುದ್ಧಿ ಸರಿ ಇರಲಿಲ್ಲ ನಿಜ, ಆದರೆ ಓರ್ವ ಪೊಲೀಸ್ ಅಧಿಕಾರಿಯಾಗಿ ರಮೇಶ್‌ಬಾಬುಗೆ ಏನಾಗಿತ್ತು? ಇರಿದದ್ದು ಅಕ್ಕನೇ ಆಗಿದ್ದರೂ ಪೇದೆ ಮಾದಯ್ಯನ ಸಾವಿಗೆ ಎಸಿಪಿ ರಮೇಶ್‌ಬಾಬು ಕೂಡ ಕಾರಣರಲ್ಲವೆ?



ರಾ. ಸೋಮನಾಥ್

ಪೊಲೀಸ್ ಅಧಿಕಾರಿಯೊಬ್ಬ ಇಲಾಖೆಯ ಪೇದೆಯೊಬ್ಬ ಇರಿತಕ್ಕೀಡಾಗಿ ಸಾವುಬದುಕಿನ ಮಧ್ಯೆ ನರಳಾಡುವುದನ್ನು ಕಂಡೂ ಆತನನ್ನು ಆಸ್ಪತ್ರೆಗೆ ಸಾಗಿಸಿ ಬದುಕಿಸುವುದನ್ನು ಬಿಟ್ಟು ಆತನ ಆ ಸ್ಥಿತಿಗೆ ಕಾರಣಳಾದ ತನ್ನ ಅಕ್ಕನನ್ನು ಬಚಾವು ಮಾಡುವುದಕ್ಕೇ ಹೆಣಗುತ್ತಾನೆಂದರೆ; ಆತ ಹೇಗೆ ತಾನೇ ಮನುಷ್ಯನಾಗಿರಲು ಸಾಧ್ಯ?

ಅಷ್ಟಕ್ಕೂ ಬ್ಯಾಟರಾಯನಪುರದ ಎಸಿಪಿ ರಮೇಶ್‌ಬಾಬು ಬಳಿ ಇಲಾಖೆಯೇ ಕೊಟ್ಟಿದ್ದ ಜೀಪಿತ್ತು, ನೆಲಕ್ಕೆ ಬಿದ್ದು ಹೊರಳಾಡುತ್ತಿದ್ದ ಪೇದೆ ಮಾದಯ್ಯನನ್ನು ಬದುಕಿಸಬಹುದಿತ್ತು. ಆದರೆ ತನ್ನ ಅಕ್ಕನನ್ನು ಬಚಾವು ಮಾಡಬೇಕಲ್ಲ? ಪೇದೆಯ ಜೀವ ಯಾವ ಲೆಕ್ಕ?



ಬಲಿಯಾದ ಪೇದೆ ಮಾದಯ್ಯ

ಇದು ಎಸಿಪಿ ರಮೇಶ್‌ಬಾಬು ಎಂಬ ತಲೆತಿರುಕನ ಖಾಕಿ ಬುದ್ಧಿಗೆ ಸಣ್ಣ ಸ್ಯಾಂಪಲ್ ಮಾತ್ರ!

ಡ್ಯೂಟಿಗೆ ಸೇರಿದಾಗಿನಿಂದಲೂ ಯಾವ ಪೊಲೀಸ್ ಠಾಣೆಗೆ ಬಂದರೂ ರಮೇಶ್‌ಬಾಬು ಒಂದೊ ಸಸ್ಪೆಂಡಾಗುತ್ತಾನೆ ಅಥವಾ ಅದೇ ಠಾಣೆಯ ಪೊಲೀಸರಿಂದ ಒದೆ ತಿನ್ನುತ್ತಾನೆ. ಬಹುಶಃ ಹುಚ್ಚೆಂಬುದು ಅವನಿಗೆ ಅನುವಂಶೀಯವಾಗಿ ಬಂದ ಬಳುವಳಿಯೇ ಆಗಿರಬೇಕು. ಇಲ್ಲಿಗೆ ವಾರದ ಹಿಂದಷ್ಟೇ ಗಿರಿನಗರದಲ್ಲಿ ತಾನು ಕಟ್ಟಿಸುತ್ತಿದ್ದ ಬಂಗಲೆಗೆ ಬ್ಯಾಟರಾಯನಪುರದ ಹೊಯ್ಸಳ ಗಾಡಿಯ ತುಂಬ ಪೊಲೀಸರನ್ನು ಚಾಕರಿಗೆ ಕಳಿಸಿ


ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದ ರಮೇಶ್‌ಬಾಬು. ಈ ಬಗ್ಗೆ ಇಲಾಖಾ ವಿಚಾರಣೆಯಿನ್ನೂ ಶುರುವಾಗೇ ಇಲ್ಲ. ಆಗಲೇ ಎಸಿಪಿ ಸಾಹೇಬರ ಒಡಹುಟ್ಟಿದ ಅಕ್ಕ ಪೊಲೀಸ್ ಪೇದೆಯೊಬ್ಬನನ್ನೇ ಇರಿದು ಕೊಲ್ಲುತ್ತಾಳೆಂದರೆ ಅದನ್ನು ರಮೇಶ್‌ಬಾಬು ಗ್ರಹಚಾರವೆನ್ನಬೇಕೋ ಅಥವಾ ಪಾಪದ ಫಲವೆನ್ನಬೇಕೊ?


ಇದೇ ರಮೇಶ್‌ಬಾಬು ಪ್ರಾರಂಭದಲ್ಲಿ ಗಿರಿನಗರ ಪೊಲೀಸ್ ಠಾಣೆಯಲ್ಲಿ ಎಸ್ಸೈ ಆಗಿದ್ದಾಗ ವಿಚಿತ್ರ ಘಟನೆಯೊಂದಕ್ಕೆ ಕಾರಣನಾಗಿದ್ದು ಹಳೇ ಕತೆ. ಗಿರಿನಗರ ಪೊಲೀಸ್ ಠಾಣೆಗೆ ಫರ್ಲಾಂಗ್ ದೂರದಲ್ಲೇ ನಟ ಟೈಗರ್ ಪ್ರಭಾಕರ್ ಮನೆಯಿತ್ತು. ಆ ಮನೆಯಲ್ಲಿ ಅವರ ಮಡದಿಯೂ ಇದ್ದರು. ಕುಂಟು ನೆಪ ಮಾಡಿ ಪದೇಪದೇ ಪ್ರಭಾಕರ್ ಮನೆಗೆ ಬರುತ್ತಿದ್ದ ಎಸ್ಸೈ ರಮೇಶ್‌ಬಾಬು ಅದೊಮ್ಮೆ ಮನೆಯಲ್ಲಿ ಹೆಂಡತಿ ಒಬ್ಬರೇ ಇದ್ದದ್ದನ್ನು ಹೊಂಚು ಹಾಕಿ ಕಾಂಪೌಂಡ್ ಜಿಗಿದೇಬಿಟ್ಟ!

ಅದೇ ಹೊತ್ತಿಗೆ ಶೂಟಿಂಗ್ ಮುಗಿಸಿ ವಾಪಸ್ಸಾಗುತ್ತಿದ್ದ ಪ್ರಭಾಕರ್ ಕಣ್ಣಿಗೆ ಆ ದೃಶ್ಯ ಬಿದ್ದಿದ್ದೇ ತಡ, ಮನೆಗೆ ನುಗ್ಗಿ ಎಸ್ಸೈನನ್ನು ಹೊರಕ್ಕೆಳೆದದ್ದೇ ಮುಖಾಮೂತಿ ಚಚ್ಚಿಬಿಟ್ಟರು. ಆವತ್ತು ಪ್ರಭಾಕರ್ ಜೊತೆ ಇನ್ನೊಬ್ಬ ನಟ ಅರ್ಜುನ್ ಸರ್ಜಾ ಕೂಡ ರಮೇಶ್‌ಬಾಬುವಿನ ಭೂತ ಬಿಡಿಸಿದ್ದರು!

ಆ ಹೊತ್ತಿಗಾಗಲೇ ರಮೇಶ್‌ಬಾಬುವಿಗೆ ಮದುವೆಯಾಗಿ ಮಗುವೂ ಇತ್ತು, ಆದರೆ ಹುಟ್ಟುಗುಣ

ಅದು ಬನ್ನೀಪೇಟೆ ಶಾಸಕ ಸೋಮಣ್ಣ! ಮೊದಲಿನಿಂದಲೂ ಸೋಮಣ್ಣನ ಮಾತೆಂದರೆ ಕಮೀಷನರ್ ಆದೇಶಕ್ಕಿಂತಲೂ ಮಿಗಿಲೆಂಬುದು ರಮೇಶ್‌ಬಾಬು ಸಾಹೇಬರ ತರ್ಕ. ಹಿಂದೊಮ್ಮೆ ದೇವೇಗೌಡರು ಕನಕಪುರ ಲೋಕಸಭೆಗೆ ಸ್ಪರ್ಧಿಸಿದ್ದಾಗ ಕಾಂಗ್ರೆಸ್ಸಿನಲ್ಲಿದ್ದರೂ ತನ್ನ ಗೆಲುವಿಗೆ ಶ್ರಮಿಸಿದ ಋಣವಿತ್ತಲ್ಲ; ಅದಕ್ಕೆ ಪ್ರತಿಯಾಗಿ ದೇವೇಗೌಡರು ಮಾಡಿದ ಉಪಕಾರವೇ ಈ ರಮೇಶ್‌ಬಾಬುವನ್ನು ಬ್ಯಾಟರಾಯನಪುರಕ್ಕೆ ಎಸಿಪಿಯಾಗಿ ನೇಮಿಸಿದ್ದು!





ಅದರಲ್ಲೂ ಬ್ಯಾಟರಾಯನಪುರವೆಂದರೆ ಜ್ಞಾನಭಾರತಿ, ಕೆಂಗೇರಿ, ರಾಜರಾಜೇಶ್ವರಿನಗರದಂಥ ರಿಯಲ್ ಎಸ್ಟೇಟ್ ಠಾಣೆಗಳೇ ಇರುವ ಹುಲುಸಾದ ವಲಯ. ಬಂದುಬಂದದ್ದೇ ನಾಗೇಂದ್ರ, ಬ್ಲಾಕಿನ ಹಾಲು ಜೈರಾಮನಂಥ 'ಝುಂಡುಬಾಮ್' ಗಿರಾಕಿಯನ್ನೂ, ಲ್ಯಾಂಡ್ ಗ್ಯಾಬರ್‌ಗಳನ್ನೂ ತಮ್ಮ ಛೇಂಬರಿನಲ್ಲೇ ಪ್ರತಿಷ್ಠಾಪಿಸಿಕೊಂಡರು. ಒಂದೆಡೆ ರಿಯಲ್ ಎಸ್ಟೇಟ್ ದುಡ್ಡು ಮತ್ತೊಂದೆಡೆ ಕಾಲುಗೆಜ್ಜೆ ಸದ್ದು!

ಇಂಥಾದ್ದರಲ್ಲಿ ತನ್ನ ಅಕ್ಕನ ಮನೋವ್ಯಾಧಿಯನ್ನಾಗಲಿ ಆಕೆಗೆ ನೆಟ್ಟಗೊಂದು ಚಿಕಿತ್ಸೆಯನ್ನಾದರೂ ಕೊಡಿಸಬೇಕೆಂಬ ವಿವೇಕವಾಗಲಿ, ಎಲ್ಲಿ ಬಂದೀತು? ರಮೇಶ್‌ಬಾಬು ಅಕ್ಕ ಗೀತಾ ಇಬ್ಬರು ಮಕ್ಕಳ ತಾಯಿ. ಮೊದಮೊದಲು ಸಂಸಾರ ಚೆನ್ನಾಗೇ ಇತ್ತು, ಬರುಬರುತ್ತ ರಮೇಶ್‌ಬಾಬು ತನ್ನ ಅಕ್ಕನ ಗಂಡನ ಮೇಲೇ ಸವಾರಿ ಶುರು ಹಚ್ಚಿಕೊಂಡ. ಅಕ್ಕ ತಮ್ಮ ಸೇರಿಕೊಂಡು ಕೊಡುತ್ತಿದ್ದ ಕಾಟ ವಿಪರೀತವಾದಾಗ ಗಂಡ ಸದ್ದಿಲ್ಲದೇ ಕುವೈತ್‌ಗೆ ಹಾರಿಬಿಟ್ಟ. ಅದೇನೋ ಕೆಲವೊಮ್ಮೆ ರಮೇಶ್‌ಬಾಬು ಕೂಡ ತಲೆತಿರುಕನಂತೆ ಪೇದೆಗಳನ್ನು

ಬಡಬೇಕಲ್ಲ? ಗಿರಿನಗರ ಪೊಲೀಸ್ ಠಾಣೆಯ ಎದುರೇ ಇದ್ದ ಬ್ರಾಹ್ಮಣ ಪತ್ರಕರ್ತರೊಬ್ಬರ ಮಗಳು ಪ್ರತಿನಿತ್ಯ ಕಿಟಕಿಯೆದುರು ನಿಲ್ಲುವುದಕ್ಕೂ, ಎಸ್ಸೈ ಸಾಹೇಬರು ಅದೇ ಪೊಲೀಸ್ ಠಾಣೆಯ ಕಿಟಕಿಯಲ್ಲಿ ಪೋಜು ಕೊಡುವುದಕ್ಕೂ ಸರಿಹೋಯಿತು. ಕೆಲವೇ ದಿನಗಳಲ್ಲಿ ಎಸ್ಸೈ ಠಾಣೆ ಬಿಟ್ಟೇ ಪರಾರಿಯಾದರು. ಎದುರು ಮನೆಯ ಅದೇ ಬ್ರಾಹ್ಮಣರ ಹುಡುಗಿಯ ಜೊತೆ....!

ಹೀಗೆ ಮೊದಲ ಪತ್ನಿಗೆ ಕೈಕೊಟ್ಟು ಎರಡನೇ ಸಂಸಾರ ಶುರುಹಚ್ಚಿಕೊಂಡ ರಮೇಶ್‌ಬಾಬು ಹೆಣ್ಣಿನ ವಿಷಯದಲ್ಲಿ ಪದೇಪದೇ ಯಡವಟ್ಟಿಗೆ ಬಿದ್ದ. ಆಡುಗೋಡಿ, ಆನಂತರ ಬ್ಯಾಟರಾಯನಪುರಕ್ಕೆ ಇನ್ಸ್‌ಪೆಕ್ಟರಾದರೂ ಹೆಂಗಸರ ವಿಷಯದಲ್ಲಿ ಮಾತ್ರ ಹಳೇ ಚಾಳಿಗಳೇ ಪುನರಾವರ್ತನೆಗೊಂಡವು. ಬ್ಯಾಟರಾಯನಪುರದಲ್ಲಿದ್ದಾಗ ಲಾಕಪ್‌ಡೆತ್ ಒಂದಕ್ಕೂ ಕಾರಣನಾದ ರಮೇಶ್‌ಬಾಬು ಇನ್ನೆಲ್ಲಿ ತನ್ನನ್ನು ಸಸ್ಪೆಂಡ್ ಮಾಡುತ್ತಾರೋ ಎಂದಿದ್ದೇ ಹಾರ್ಟ್ ಅಟ್ಯಾಕ್ ಎಂದು ನಟಿಸಿ ಆಸ್ಪತ್ರೆಗೆ ಸೇರಿ ಕೊಂಡ. ದೊಡ್ಡ ಮಟ್ಟದ ಸುದ್ದಿಗೂ ಕಾರಣ ನಾದ.

ಪ್ರಶ್ನೆಯೆಂದರೆ; ಹೀಗೆ ಕಾಲಿಟ್ಟ ಠಾಣೆಗಳಲ್ಲೆಲ್ಲ ಒಂದಲ್ಲಾ ಒಂದು ಅನಾಹುತಗಳಿಗೆ ಕೈಯಿಟ್ಟು ಸಸ್ಪೆಂಡೋ ಎತ್ತಂಗಡಿಯೋ ಆಗುತ್ತಲೇ ಇದ್ದ ರಮೇಶ್‌ಬಾಬುವಿನ ಅದ್ಯಾವ ಯೋಗ್ಯತೆ ನೋಡಿ ಇಲಾಖೆ ಎಸಿಪಿ ದರ್ಜೆಗೇರಿಸಿತೊ? ಅದರಲ್ಲೂ ಬ್ಯಾಟರಾಯನಪುರದಂಥ ಫಲವತ್ತಾದ ವಲಯಕ್ಕೆ ಆತನನ್ನು ಎಸಿಪಿಯಾಗಿ ತರುವಲ್ಲಿ ದೊಡ್ಡ ಕೈಯೊಂದು ಇರಬೇಕಲ್ಲ-

ಓಡಿದು ಬಡಿಯುವುದು, ದೂರು ತಂದ ಹೆಂಗಸ ಜೊತೆ ಚಿತ್ರವಿಚಿತ್ರ ಚೇಷ್ಟೆಗಿಳಿಯುವುದು ಮಾಡುತ್ತಾ ಬಹುಶಃ ಸ್ಕೀಝೋಫ್ರೇನಿಕ್‌ಯಾ ರಕ್ತಗತವಾಗಿಯೇ ಬಂದಿರಬೇಕು.

ಕಳೆದ ನಾಲ್ಕು ವರ್ಷಗಳಿಂದ ಅಕ್ಕ ಗೀತಾಳ ತನ್ನ ಸಂಪಂಗಿರಾಮನಗರದ ಮನೆಯಲ್ಲೇ ತಂದಿಟ್ಟುಕೊಂ ರಮೇಶ್‌ಬಾಬು ಆಕೆಗೆ ಚಿಕಿತ್ಸೆ ಕೊಡಿಸುವ ಬ ಯಾಗಲಿ, ಸಂಸಾರ ತಾಪತ್ರಯ ಶಮನದ ಕುರಿತಾಗ ಯಾವತ್ತೂ ಯೋಚಿಸಲಿಲ್ಲ, ಅಕ್ಕನ ಯೋಗ ಕ್ಷೇಮಕ್ಕಿಂ ಗಿರಿನಗರದಲ್ಲಿ ಭಟ್ಟಿ ಎಂಬ ಖದೀಮನೊಬ್ಬನಿಂ ಗಿಟ್ಟಿಸಿದ್ದ ಸೈಟಿನಲ್ಲಿ ಭಾರೀ ಬಂಗಲೆ ಎಬ್ಬಿಸುವುದರಲ್ಲಿ ಬಿಜಿಯಾದ. ಬರುಬರುತ್ತ ಅಕ್ಕತಮ್ಮನ ಮಧ್ಯೆಯೇ ಜಗಳ ಶುರುವಾಗಿದೆ. ಹೊಗೆಯಾಡುತ್ತಿದ್ದ ಅಕ್ಕನ ಅಸಹ ಅಕ್ಟೋಬರ್ ಒಂಭತ್ತರ ರಾತ್ರಿ ವಿಕೋಪಕ್ಕೆ ಹೋಗಿದ ಒಂದು ಹಂತದಲ್ಲಿ ಕುಡಿಯುತ್ತಾ ಕೂತಿದ್ದ ತಮ್ಮನನ ಹೆದರಿಸಲು ತರಕಾರಿ ಹೆಚ್ಚುವ ಚಾಕು ಕೈಗೆತ್ತಿಕೊಂ ಗೀತಾ ತನ್ನ ಕೈ ಕುಯ್ದುಕೊಂಡು ಮನೆಯಿಂದ ಹೊರ ಓಡಿದ್ದಾಳೆ. ಬಂದಿದ್ದೇ ಸಂಪಂಗಿರಾಮನಗರದ ಒಂದನೆ ಮೇನ್‌ನ ಸೌದೆ ಡಿಪೋ ಪಕ್ಕದ ಕತ್ತಲಲ್ಲಿ ಕೂತ ವಾಚಾಮಗೋಚರ ಬಯ್ಯಲಾರಂಭಿಸಿದ್ದಾಳೆ.

ಪೊಲೀಸ್ ಅಧಿಕಾರಿಯೊಬ್ಬನ ಮನೆಯೇ ರೋಗಗ್ರ ವಾದಾಗ ಅದರ ಪರಿಣಾಮ ಹೀಗೆ ಇರಬೇಕೆಂದಿಲ್ಲವ ಆವತ್ತು ರಾತ್ರಿಗಸ್ತಿಗೆಂದು ಹೊರಟಿದ್ದ ಸಂಪಂಗಿರಾಮ ನಗರದ ಹೆಡ್‌ಕಾನ್ಸ್‌ಟೇಬಲ್ ಮಾದಯ್ಯ ಮತ್ತು ಪೇ ಪ್ರಕಾಶ್ ನಡುರಾತ್ರಿ ಹನ್ನೊಂದೂವರೆಯ ಹೊತ್ತಿ ನೈಟಿ ತೊಟ್ಟು ಕೂಗಾಡುತ್ತಿದ್ದ ಗೀತಾಳನ್ನು ಕಂಡಿದ್ದೆ ಏನು ಎತ್ತ ವಿಚಾರಿಸಿದ್ದಾರೆ. ಬಹುಶಃ ತನ್ನ ತಮ್ಮನೆ


ಕಳಿಸಿದ ಪೊಲೀಸರಿರಬೇಕೆಂದು ಭಾವಿಸಿದ ಗೀತಾ ಮನೆಯಿಂದ ತಂದಿದ್ದ ಚಾಕು ತೆಗೆದದ್ದೇ ಮಾದಯ್ಯ ಕುತ್ತಿಗೆಗೆ ಚುಚ್ಚಿಬಿಟ್ಟಳು. ರಾತ್ರಿ ಬೀಟಿನ ಪೊಲೀಸರಿಗಿದು ಅನಿರೀಕ್ಷಿತ ಆಘಾತವಾಗಿತ್ತು. ಚುಚ್ಚಿದ ಏಟಿಗೆ ಮಾದಯ್ಯ ನೆಲಕ್ಕೆ ಬಿದ್ದು ಒದ್ದಾಡುತ್ತಿರುವಾಗಲೇ ಈ ಸುದ್ದಿಯನ್ನು ವೈರ್‌ಲೆಸ್‌ನಲ್ಲಿ ಕೇಳಿಸಿಕೊಂಡ ಎಸಿಪಿ ರಮೇಶ್‌ಬಾಬು ತಮ್ಮ ಜೀಪನ್ನೇರಿ ಸೌದೆ ಡಿಪೋ ಬಳಿ ಬಂದಿದ್ದಾನೆ. ಮನುಷ್ಯತ್ವ ಇರುವ ಯಾರೇ ಆದರೂ ರಕ್ತ ಸುರಿಸುತ್ತಾ ನೆಲಕ್ಕೆ ಬಿದ್ದಿದ್ದ ಪೇದೆಯನ್ನು ಮೊದಲು ಆಸ್ಪತ್ರೆಗೆ ಸೇರಿಸಬೇಕು ತಾನೆ? ಅದರಲ್ಲೂ ರಮೇಶ್‌ಬಾಬು ಓರ್ವ ಪೊಲೀಸ್ ಅಧಿಕಾರಿ. ತಂದಿದ್ದ ಜೀಪು ಕೂಡ ಇಲಾಖೆಯದ್ದೇ. ಬಿದ್ದು ನರಳುತ್ತಿದ್ದವನು ಯಾರೋ ರೌಡಿಯೇನಲ್ಲ, ಅಷ್ಟಕ್ಕೂ ಆತನ ಆ ಸ್ಥಿತಿಗೆ ಕಾರಣಳಾದವಳು ತನ್ನ ಸ್ವಂತ ಅಕ್ಕ!

ಒಬ್ಬ ಪೊಲೀಸ್ ಅಧಿಕಾರಿಯಾಗಿ ಬೇಡ ಕನಿಷ್ಠ ತಲೆ ಸರಿ ಇರುವ ಮನುಷ್ಯನಾಗಿಯಾದರೂ ಮನಸ್ಸು ಮಾಡಿದ್ದರೆ ರಮೇಶ್‌ಬಾಬು ಪೇದೆ ಮಾದಯ್ಯನ ಜೀವ ಉಳಿಸಬಹುದಿತ್ತು. ಆದರೆ ರಮೇಶ್‌ಬಾಬು ತನ್ನ ಅಕ್ಕನನ್ನು ಜೀಪಿಗೆ ಹತ್ತಿಸಿಕೊಂಡಿದ್ದೇ ಸೀದಾ ತನ್ನ ಎಸಿಪಿ ಛೇಂಬರಿಗೆ ಬಂದಿದ್ದಾನೆ. ಅಲ್ಲಿ ಕೊಂಚ ಹೊತ್ತು ವಿರಮಿಸಿ ಅಕ್ಕನನ್ನು ನಾಯಂಡಹಳ್ಳಿಯ ಸ್ಪಂದನ ಆಸ್ಪತ್ರೆಗೆ ಸೇರಿಸಿದ್ದಾನೆ. ಇತ್ತ ಇರಿತಕ್ಕೀಡಾದ ಪೇದೆ ಮಾದಯ್ಯನ ಜೊತೆಗಿದ್ದ ಮತ್ತೊಬ್ಬ ಬೀಟ್ ಪೇದೆ ಪ್ರಕಾಶ್ ಆಟೋರಿಕ್ಷಾ ಒಂದರಲ್ಲಿ ಮಾದಯ್ಯನನ್ನು ಪಕ್ಕದಲ್ಲೇ



ಠಾಣೆಯೆದುರು ತಬ್ಬಲಿಗಳ ಕಣ್ಣೀರು

ಸಂಪಂಗಿರಾಮನಗರದ ಹೆಡ್‌ಕಾನ್ಸ್‌ಟೇಬಲ್ ಮಾದಯ್ಯ ಮೂಲತಃ ಕನಕಪುರ ತಾಲ್ಲೂಕು ದೊಡ್ಡದಿಂಬನಹಳ್ಳಿಯ ಬಡರೈತನ ಮಗ. ಸ್ವಭಾವತ ಸಜ್ಜನ ಮತ್ತು ಮಹಾನ್ ಕನ್ನಡದ ಅಭಿಮಾನಿ. 1981 ರಲ್ಲಿ ಪೊಲೀಸ್ ಪೇದೆಯಾಗಿ ಆಯ್ಕೆಗೊಂಡು ಶಂಕರಪುರಂ, ಹನುಮಂತಗನರ, ಇಂದಿರಾನಗರ, ಕಾಡುಗೊಂಡನಹಳ್ಳಿ ಮುಂತಾದ ಪೊಲೀಸ್ ಠಾಣೆಗಳಲ್ಲಿ ಸೇವೆ ಸಲ್ಲಿಸಿ ಬಡ್ತಿ ದೊರಕುವ ಹೊತ್ತಿಗೆ ಸಂಪಂಗಿರಾಮನಗರಕ್ಕೆ ಎತ್ತಂಗಡಿಯಾಗಿದ್ದರು.



ಪೊಲೀಸ್ ದರ್ಪದಲ್ಲಿ ಯಾವತ್ತೂ ಸಿಡುಕಿದವರಲ್ಲ, ಕುಡಿತ, ಸಿಗರೇಟು ಇತ್ಯಾದಿ ಯಾವುದೇ ಚಟಗಳಿರಲಿಲ್ಲ, ಆರೋಪಿಯೇ ಆಗಲಿ ದಾರಿ ಹೋಕನೇ ಇರಲಿ ಪ್ರೀತಿಯಿಂದಲೇ ಮಾತಾಡಿಸಿ ತನ್ನ ಕೈಲಾದ ಸಹಾಯ ಮಾಡುವ ಗೀಳು ಮಾದಯ್ಯನಿಗಿತ್ತು. ಬಹುಶಃ ಗೀತಾಳ ನೆರವಿಗೆ ಯತ್ನಿಸದೇ ಪೊಲೀಸ್ ಬುದ್ಧಿಯನ್ನೇ ಹುಷಾರಾಗಿ ನಿಭಾಯಿಸಿದ್ದರೆ ಮಾದಯ್ಯನಿಗೆ ಸಾವು ಬರುತ್ತಿರಲಿಲ್ಲ, ಆದರೆ ಮನುಷ್ಯತ್ವವಿತ್ತಲ್ಲ; ಅದೇ ಆತನನ್ನು ಬಲಿ ಹಾಕಿತು!

ಖುಷಿಯಾದಾಗಲೆಲ್ಲ ಓಹಿಲೇಶ್ವರನ ಚಿತ್ರದ 'ಈ ದೇಹದಿಂದ ದೂರವಾದೆ ಏಕೆ ಆತ್ಮನೆ....' ಹಾಡು ಗುನುಗುತ್ತಿದ್ದ. ತನ್ನ ಸಹಿಯಿಂದ ಹಿಡಿದು ಅರ್ಜಿಯತನಕ ಪ್ರತಿಯೊಂದನ್ನೂ ಕನ್ನಡದಲ್ಲೇ ಬರೆಯುತ್ತಿದ್ದ. ಮಾದಯ್ಯನ ಪತ್ನಿ ಮತ್ತು ಸಂಬಂಧಿಕರು ಸಂಪಂಗಿರಾಮನಗರ ಪೊಲೀಸ್ ಠಾಣೆಯೆದುರು ಬಿದ್ದು ಆಕ್ರಂದಿಸುತ್ತಿದ್ದ ದೃಶ್ಯ ಎಂಥವರಿಗೂ ಕಣ್ಣೀರು ತರಿಸುವಂತಿತ್ತು. ಜಾತಿಯಲ್ಲಿ ತಿಗಳರ ಮಾದ್ಯಯನ ಸಾವಿಗೆ ಕನ್ನಡ ಹೋರಾಟಗಾರರು ಪ್ರತಿಭಟಿಸಿದ್ದಾರೆ. ರಾಜಾಜಿನಗರದ ಶಾಸಕ ನೆ.ಲ. ನರೇಂದ್ರಬಾಬುವೇ ನಿಂತು ಪ್ರತಿಭಟನೆಯ ನೇತೃತ್ವ ವಹಿಸಿದ್ದಾರೆ. ಆತನ ಕುಟುಂಬಕ್ಕೆ ಐದು ಲಕ್ಷದ ಪರಿಹಾರ ಕೊಟ್ಟಿರಬಹುದು. ಆದರೆ ಇದಷ್ಟೇ ಆತನಿಗೆ ಸಂದ ಗೌರವವಾಗಬಾರದು. ಸರ್ಕಾರ ಮಾದಯ್ಯನ ಕೆಲಸವನ್ನು ಆತನ ಪತ್ನಿಗೆ ನೀಡಬೇಕು. ಈ ನಿಟ್ಟಿನಲ್ಲಿ ಕನ್ನಡಪರ ಸಂಘಟನೆಗಳು ಕಾರ್ಯಪ್ರವೃತ್ತರಾಗಬೇಕು.

'ಕನ್ನಡದ ಮಾದಯ್ಯ'ನೆಂಬ ಜನಾನುರಾಗಿ ಪೊಲೀಸಣ್ಣನಿಗಾಗಿ ಇಷ್ಟೂ ಮಾಡದಿದ್ದರೆ ಹೇಗೆ?

ಮಾದಯ್ಯನ ಕಡೆಯವರನ್ನು ಸಮಾಧಾನಿಸುತ್ತಿರುವ ನರೇಂದ್ರಬಾಬು



ಇದ್ದ ಮಲ್ಯ ಆಸ್ಪತ್ರೆಗೆ ತರುವ ಹೊತ್ತಿಗಾಗಲೇ ಅರ್ಧ ಗಂಟೆ ಕಳೆದಿತ್ತು. ಪರೀಕ್ಷಿಸಿದ ವೈದ್ಯರಿಗೆ ಆತ ಸತ್ತಿದ್ದಾನೆಂಬ ಬಗ್ಗೆ ಅನುಮಾನಗಳೇ ಇರಲಿಲ್ಲ!

ಇರಿದ ಆಕಸಿಗೇನೋ ಬುದ್ಧಿ ಸರಿ ಇರಲಿಲ್ಲ ನಿಜ. ಆದರೆ ಓರ್ವ ಪೊಲೀಸ್ ಅಧಿಕಾರಿಯಾಗಿ ರಮೇಶ್‌ಬಾಬುಗೆ ಏನಾಗಿತ್ತು? ಇರಿದದ್ದು ಆಕ್ಸೇ ಆಗಿದ್ದರೂ ಪೇದೆ ಮಾದಯ್ಯನ ಸಾವಿಗೆ ಎಸಿಪಿ ರಮೇಶ್‌ಬಾಬು ಕೂಡ ಕಾರಣರಲ್ಲವೆ?

ಇಷ್ಟಾದ ಮೇಲೂ ಎಸಿಪಿ ರಮೇಶ್‌ಬಾಬು ವಿರುದ್ಧ ಇಲಾಖೆ ಸಣ್ಣದೊಂದು ವಿಚಾರಣೆ ಕೂಡ ನಡೆಸಿಲ್ಲವೆಂದರೆ ಮಾಮೂಲಿ ಹೆಡ್‌ಕಾನ್ಸ್‌ಟೇಬಲ್ ಒಬ್ಬನ ಜೀವಕ್ಕೆ ಏನು ಬೆಲೆ ಬಂತು?

ಪೊಲೀಸರಿನ್ನು ಯಾವ ಪುರುಷಾರ್ಥಕ್ಕಾಗಿ ಹೆಣಗಬೇಕು? ■

ತಮ್ಮನ್ನು ಪಾಂಡವರಿಗೆ ಹೋಲಿಸಿಕೊಂಡ ಬಿಜೆಪಿಗಳು!

ಮಂತ್ರಿಯಾಗಲಿಲ್ಲವೆಂದು ಒಂದು ತಿಂಗಳು ಮೌನವ್ರತ ಮಾಡಿದ್ದ ಮಹಿಮಾ ಪಾಟೀಲ್ ಸತತವಾಗಿ ಒಂದು ತಿಂಗಳು ಒಂದೂ ಮಾತಾಡದೆ ಕುಳಿತ ಸುಸ್ತಿಗೆ 'ಅಮ್ಮಾ' ಎಂದು ಉದ್ಗಾರ ತೆಗೆದು ಸುದ್ದಿ ಮಾಡಿದ್ದರಲ್ಲವೆ, ಈಗ ಜೆಡಿಎಸ್‌ನ ವಚನಭ್ರಷ್ಟತೆಯನ್ನು ಪ್ರತಿಭಟಿಸಿ, ಬೇರೆ ಪಕ್ಷವನ್ನು ಸ್ಥಾಪಿಸಲಿದ್ದಾರಂತಲ್ಲಾ, ಮಹಿಮಾ ಪಾರ್ಟಿಯ ಅಪ್ರಕಟಿತ ಸಂವಿಧಾನದಂತೆ ಪಾರ್ಟಿಯಲ್ಲಿನ ಯಾರೂ ಕುಡಿಯುವಂತಿಲ್ಲ, ಅವರಿವರ ಬಳಿ ರಾಜಕಾರಣ ಮಾಡಲೋಸ್ಕರ ಕಾಸು ಕೇಳುವಂತಿಲ್ಲ, ಪಾರ್ಟಿಯ ಕಾರ್ಯಕರ್ತರು ಅವರವರ ಸಮಸ್ಯೆಯನ್ನು ಅವರೇ ಬಗೆಹರಿಸಿಕೊಳ್ಳಬೇಕೆ ಹೊರತು ನಾಯಕನಿಗೆ ತೊಂದರೆ ಕೊಡುವಂತಿಲ್ಲ, ಆಗಾಗ್ಗೆ ರವಿಶಂಕರ್ ಗುರೂಜಿ, ಪರೂಜಿ ಇಂತಹ ನಗೆಗಾರರನ್ನು ಸಂಧಿಸಿ, ಧ್ಯಾನ ಮಾಡಿಕೊಂಡು ಮನಸ್ಸನ್ನು ಪರಿಶುದ್ಧಗೊಳಿಸಿಕೊಳ್ಳಬೇಕು..... ಇಂತಹ ನಿಬಂಧನೆಗಳ ಫಲವಾಗಿ ಮಹಿಮಾ ಪಾರ್ಟಿಯಲ್ಲಿ ಅವರೊಬ್ಬರೇ ಇದ್ದು ಅವರೇ ಅಧ್ಯಕ್ಷರಾಗಿ ಕಡೆಯವರೆಗೂ ಮುಂದುವರಿಯಲಿದ್ದಾರಂತಲ್ಲಾ, ಥೂತ್ತೇರಿ!

* * * * * *

"ಸದ್ಯಕ್ಕೆ ನಾವೆಲ್ಲಾ ಪಾಂಡವರು. ನಮ್ಮ ಒಗ್ಗಟ್ಟನ್ನು ಮುರಿಯಲು ಯಾರಿಂದಲೂ ಸಾಧ್ಯವಿಲ್ಲ. ಮುರಿಸಿಕೊಳ್ಳಲೂ ಹೋಗಬಾರದು. ತುಂಬಾ ಎಚ್ಚರದಿಂದ ಪಾಂಡವರ ಸಾಧನೆಯನ್ನು ಮಾಡಬೇಕು" ಎಂದು ಬೆಂಗಳೂರು ದಕ್ಷಿಣದ ಬಜೆಪಿ ಹಲ್ಲುಗಿಸಗನೊಬ್ಬ ವ್ಯಾಖ್ಯಾನಿಸಿದ್ದಾನಂತಲ್ಲಾ. ಇಂತಹ ಅನಂತ ವ್ಯಾಖ್ಯಾನಕ್ಕೆ ಬೆಚ್ಚಿಬಿದ್ದ ಚೆಡ್ಡಿಗಳು "ಸದ್ಯ ವನವಾಸಾರ್ಥ ಬಂದಿರುವ ಈ ಮಹಾಮಹಿಮರನ್ನು ಪಾಂಡವರಿಗೆ ಹೋಲಿಸಿದ್ದಾರಲ್ಲ, ದ್ರೌಪತಿಯೇನೊ ಕರೆಕ್ಟಾಗಿ ತನ್ನ ಪಾತ್ರ ವಹಿಸಲು ತಯಾರಾಗಿದ್ದಾಳೆ, ಆದರೆ ಧರ್ಮರಾಯ ಅವಳಿಂದ ಪತಿನಿಷ್ಠೆ ಬೇಡುವವನಾಗಿದ್ದಾನೆ. ಇನ್ನುಳಿದಂತೆ ಭೀಮ, ಅರ್ಜುನ, ನಕುಲ, ಸಹದೇವರ ಪಾತ್ರಗಳಿಗೂ ಹಾಲಿ ಎಡೂರಪ್ಪನ ಅಕ್ಕಪಕ್ಕದಲ್ಲಿರುವ ಅರ್ಧರ್ಧ ಜನ ಚೆಡ್ಡಿಗಳ ರಕ್ಕಸ ಗುಣಗಳಿಗೂ ಹೊಂದಿಕೆಯಾಗುತ್ತಿಲ್ಲವಲ್ಲಾ ಏನು ಮಾಡುವುದು" ಎಂದು ತಲೆ ಕೆರೆದವಂತಲ್ಲಾ, ಥೂತ್ತೇರಿ!!



* * * * * *

ಚೆಡ್ಡಿಗಳ ಈ ಪೀಕಲಾಟಕ್ಕೆ ಉತ್ತರ ಕೊಡಲೆಂದು ತಯಾರಾದ ಚಿಕ್ಕಮಗಳೂರು ಕಡೆಯ ಹೊಸ ಚೆಡ್ಡಿಯೊಂದು "ಸದಾನಂದಗೌಡ ನಗುಬಿಟ್ಟು ಗಂಭೀರವಾದರೆ ಧರ್ಮರಾಯನ ಪಾತ್ರ ಒಪ್ಪುತ್ತದೆ. ಈಗ ಸುಭದ್ರೆ ಸಂಗದಲ್ಲಿರುವ ಎಡೂರಪ್ಪನೇ ಅರ್ಜುನ. ಸ್ವಂತ ಮೆದುಳಿನ ಕೊರತೆ ಎದುರಿಸುತ್ತಿರುವ ಈಶ್ವರಪ್ಪನೇ ಭೀಮ. ಆಯನೂರ್ ಮಂಜುನಾಥ್ ನಕುಲ. ಆರಗದ ಜ್ಞಾನೇಂದ್ರನೇ ಸಹದೇವ" ಎಂದು ಉತ್ತರಿಸಿದನಂತಲ್ಲಾ, ಅದಕ್ಕೆ ಒಪ್ಪದ ಚೆಡ್ಡಿಗಳು, "ಶಂಕರಮೂರ್ತಿಗೆ ಯಾವ ಪಾತ್ರ ಕೊಡುವುದು" ಎಂದು ತಲೆಕೆರೆದುಕೊಂಡವಂತಲ್ಲಾ,

"ಶಂಕರಮೂರ್ತಿ ಪುರಾಣ ಮತ್ತು ಐತಿಹಾಸಿಕ ಯಾವ ಪಾತ್ರಗಳಿಗೂ ಲಾಯಕ್ಕಲ್ಲದ ವ್ಯಕ್ತಿ. ಆದರೂ ಆತನನ್ನು ದಿವಂಗತ ಪಾಂಡುರಾಜನಿಗೆ ಹೋಲಿಸಿಕೊಂಡು ಸುಮ್ಮನಿರಬಹುದು" ಎಂದಾಗ, ಚೆಡ್ಡಿಗಳು ಒಕ್ಕೊರಲಿಂದ "ಆತನನ್ನು ಪಾಂಡು ಎನ್ನುವುದಾದರೆ ಹಾಲಿ ಜನಗಳು ಆತನ ಮಕ್ಕಳೆಂದಾಗುತ್ತದೆ" ಎಂದು ಅಬ್‌ಜಕ್ಷನ್ ಹಾಕಿದವಂತಲ್ಲಾ, "ಛೇಛೇ ಶಂಕರಮೂರ್ತಿ ಪಾಂಡು ಎನ್ನುವುದನ್ನ ಸಾಂಕೇತಿಕವಾಗಿ ತೆಗೆದುಕೊಳ್ಳಿ. ಸದಾ ಸತ್ತ ವ್ಯಕ್ತಿಯಂತೆ ಕಾಣುವ ಆತ ಪಾಂಡುಪಾತ್ರವೇ ಸೈ" ಎಂದಾಗ ಚೆಡ್ಡಿಗಳು ಲಾಟಿಯಂತೆ ಕೈ ಬೀಸಿ ನಕ್ಕವಂತಲ್ಲಾ, ಥೂತ್ತೇರಿ!!

* * * * * *

ಕಳೆದ ವರ್ಷ ಬಾಬಾಬುಡನ್‌ಗಿರಿಯಲ್ಲಿ ಬಟ್ಟೆ ಬಿಚ್ಚಿಕೊಂಡು ಕಷಾಯ ವಸ್ತ್ರಧಾರಿಯಾಗಿ, ಬಡ ಪುರೋಹಿತನಂತೆ ಕಂಗೊಳಿಸಿದ್ದ ಸದಾನಂದಗೌಡರು, ಈ ವರ್ಷ ಏನು ಮಾಡುತ್ತಾರೆಂಬ ಕುತೂಹಲವುಂಟಾಯಿತಲ್ಲಾ, ಅದಕ್ಕಿಂತಲೂ ಈ ಸಮಯದಲ್ಲಾದರೂ ಮಾತನಾಡಿಸುವುದು ನಮ್ಮ ಕರ್ತವ್ಯ ಎನ್ನಿಸಿ ಫೋನ್ ಮಾಡಿದಾಗ ಸಿಕ್ಕಿದರು.

ರಿಂಗ್ ಟೋನ್.....

"ನಮಸ್ತೆ ಸದಾ ವತ್ಸಲೇ ಮಾತೃಭೂಮಿ...."

"ಹಲೋ ಸಾರ್, ನಾನು ಪತ್ರಕರ್ತ."

"ನಿಮ್ಮ ಅಗತ್ಯ ತುಂಬಾ ಬೇಕಾಗಿದೆ ಈಗ."

"ಅದಕ್ಕೆ ಫೋನ್ ಮಾಡಿದೆ ಸಾರ್."

"ನೋಡಿ ಈ ಪ್ರಪಂಚದಲ್ಲಿ ಇಂತಹ ಅನ್ಯಾಯವು ನಡೆಯುವುದುಂಟಾ?"

"ನಡಿತಲ್ಲಾ ಸಾರ್, ನಿಮ್ಮ ಕಣ್ಣೆದುರೇ ನಡಿತು."

ಥೂತ್ತೇರಿ

ಯಾಹೂ

"ಹೌದೌದು, ಆದರೆ ದೇವೇಗೌಡರು ನಮ್ಮನ್ನು ಈ ರೀತಿ ನಡುಹೊಳೆಯಲ್ಲಿ ಕೈಬಿಡಬಾರದಿತ್ತು, ಅಲ್ಲವಾ?"

"ಅಲ್ಲ ಸಾರ್, ಅವುರು ನಡು ಹೊಳಿಲಿ ಬಿಡದೆ ನಿಮ್ಮನ್ನು ದಡ ಸಾಗಿಸಿದ್ರೆ ನೀವು ಅವರನ್ನೇ ಮತ್ತೆ ಹೊಳೆಗೆ ಬಿಸಾಕತಿದ್ರಂತಲ್ಲಾ?"

"ನಮ್ಮ ಬಜೆಪಿ ಧರ್ಮದಲ್ಲಿ ನಾವು ಇದುವರೆವಿಗೂ ಅಂತಹ ಹೇಯ ಕೆಲಸ ಮಾಡಿದ್ದಿಲ್ಲ. ನಮಗೆ ಅಧಿಕಾರ ಕೊಟ್ಟವರನ್ನು ಪೂಜಿಸುವುದುಂಟು."

"ಅದೇ ಸಾರ್, ಅವರಿಗೆ ಭಯ ಆಗಿದ್ದು, ಪೂಜಿಸಲ್ಪಡೋ ವ್ಯಕ್ತಿಗಳೆಲ್ಲಾ ದಿವಂಗತರಲ್ಲವೆ? ಒಂದು ವೇಳೆ ನೀವೇನಾದ್ರೂ ಇಪ್ಪತ್ತು ತಿಂಗಳೇ ಅಧಿಕಾರ ನಡೆಸೋದಾದ್ರೆ ದೇವೇಗೌಡ ಮತ್ತವರ ಮಕ್ಕಳು ರಾಜಕೀಯವಾಗಿ ದಿವಂಗತರಾಗೋದು ಗ್ಯಾರಂಟಿ ಅಂತ ಅವುರಿಗೆ ಗೊತ್ತಾಯ್ತು, ಅದಕ್ಕೆ ಕೈ ಕೊಟ್ರು."

"ಕೈ ಕೊಡುವುದರಲ್ಲಿ ಅವರು ನಿಸ್ಸೀಮರು ಬಿಡಿ, ಆದರೆ ನಮಗೆ ಕೈಕೊಡುವುದನ್ನು ನಾವು ನಿರೀಕ್ಷೆ ಮಾಡಿರಲಿಲ್ಲ, ಇದನ್ನ ನಂಬಿಕೆ ದ್ರೋಹ ಅಂತ ಹೇಳುವುದಾ, ಮೋಸ ಅಂತ ಹೇಳುವುದಾ ಎಲ್ಲಾ ಒಂದು ರೀತಿ ಅಯೋಮಯವಾಗಿದೆ."

"ಅಧಿಕಾರ ಹಸ್ತಾಂತರ ಮಾಡದೆ ಇರೋದಕ್ಕೆ ನೀವು ಕಾರಣ ಕೇಳಬೇಕಾಗಿತ್ತು ಸಾರ್."

"ಕಾರಣ ಅವರನ್ನು ಯಂತ ಕೇಳುವುದು? ಅಕ್ಟೋಬರ್ ಎರಡರಂದು ಅವರೇ ನಮ್ಮನ್ನು ಕರದು ಫಲತಾಂಬೂಲ ಕೊಟ್ಟು ಶಾಲು ಹೊದಿಸಿ....... ಯಾಕೆ ನಗ್ತಿರಲ್ಲ?"

"ದಕ್ಷಿಣೆ ನೆನಪಿಗೆ ಬಂತು, ಅದಕ್ಕೆ ನಕ್ಕೆ ಸಾರ್."

"ನಗುವುದಲ್ಲ, ಇದು ಗಂಭೀರವಾದ ವಿಷಯ. ಇವತ್ತು ಇಡೀ ಕರ್ನಾಟಕ ದೇವೇಗೌಡರ ಮನೆಯವರನ್ನು ನೋಡಿ ಆಡಿಕೊಂಡು ನಗ್ತವುಂಟು ಗೊತ್ತ?"

"ಅದವುರಿಗೆ ಗೊತ್ತಾಗಲ್ಲವಲ್ಲ ಸಾರ್?"

"ಗೊತ್ತಾಗುವ ಹಾಗೆ ನಾವು ಮಾಡ್ತವೆ. ನಾವು ಸುಮ್ಮನೆ ಕೂರುವುದಿಲ್ಲ. ಈಗಾಗಲೇ ಸಿದ್ಧಗಂಗೆ ಸ್ವಾಮಿಗಳ ಆಶೀರ್ವಾದ ಪಡೆದಿದ್ದೇವೆ, ಪೇಜಾವರ ಸ್ವಾಮಿಗಳಿಂದ ಶಾಪ ಕೊಡಿಸಿದ್ದೇವೆ..."

"ಏನಂತ ಸಾರ್?"

"ದೇವೇಗೌಡರ ಮಕ್ಕಳಿಗೆ ಇನ್ನೆಂದೂ ಅಧಿಕಾರ ಸಿಕ್ಕುವುದು ಬೇಡ ಅಂತ ಹೇಳಿ!"

"ಅವರೂ ಅದೇ ತರ ಮಾಡ್ತರೆ."

"ಮಾಡಲಿ, ಅವರ ಹೋಮ-ಯಜ್ಞ, ಮಾಟ-ಮಂತ್ರಗಳಿಗೆ ನಮ್ಮಲ್ಲೂ ಉತ್ತರವುಂಟು."

"ನಿಮ್ಮಿಬ್ಬರ ಜಗಳದಲ್ಲಿ ಇಡೀ ಕರ್ನಾಟಕ ವಾಮಾಚಾರಿಗಳ ಯುಗದಂಗೆ ಕಾಣ್ತಾಯಿದೆ ಸಾರ್."

"ಕಾಣಲಿ, ಅದ್ನಿಯಿಲ್ಲ, ಒಟ್ಟು ಮಾತಿಗೆ ತಪ್ಪಿದವರು, ವಚನ ಪಾಲಿಸದವರು, ಸರ್ವನಾಶವಾದರೆ ಸಾಕು!"

"ಥೂತ್ತೇರಿ!!!"

-ಯಾಹೂ




ಟಾಯ್ಲೆಟ್ ಪೇಪರ್ ವ್ಯಕ್ತಿತ್ವ

ಎಸ್. ನಾರಾಯಣ್‌ನಿಯ ಹಾಸ್ಯಪ್ರಜ್ಞೆ ಮಾತ್ರ ಟಾಯ್ಲೆಟ್ ಲೆವೆಲ್‌ನದ್ದಲ್ಲ, ಬದಲಾಗಿ ಆತನ ಇಡೀ ವ್ಯಕ್ತಿತ್ವವೇ ಟಾಯ್ಲೆಟ್ ಪೇಪರ್ ಸಿದ್ಧಾಂತದ್ದು. ಇಲ್ಲವೆಂದರೆ ಈತನಿಗೆ ಸಹಾಯ, ನೆರವು, ಬೆಂಬಲ ನೀಡಿದ್ದ ಜನರನ್ನೇ ಟಾಯ್ಲೆಟ್ ಪೇಪರ್‌ನಂತೆ ಉಪಯೋಗಿಸಿಕೊಂಡು ಬಿಸಾಡುತ್ತಿರಲಿಲ್ಲ. ಹಾಗೆ ಬಿಸಾಡಿಕೊಂಡವರಲ್ಲಿ ಈ ಪಿಶಾಚಿಯನ್ನು ಹೆತ್ತ ತಾಯಿ, ಒಡಹುಟ್ಟಿದ ಅಣ್ಣ-ತಮ್ಮ, ಚಿತ್ರರಂಗದಲ್ಲಿ ಇವನಿಗೆ ಬನಾದಿ ಹಾಕಿಕೊಟ್ಟ ಜನ ಸೇರಿದ್ದಾರೆ (ಈ ಪಟ್ಟಿಯನ್ನು ಎಲ್ಲಿಂದ ಪ್ರಾರಂಭಿಸುವುದು ಎಂಬುದೇ ಒಂದು ಸಮಸ್ಯೆಯಾಗಿದ್ದರೂ ಇಲ್ಲೊಂದು ಪ್ರಯತ್ನ ಮಾಡಲಾಗಿದೆ.

ಮೂಲತಃ ಭದ್ರಾವತಿಯವನಾದ ನಾರಾಯಣ್ ಬೆಂಗಳೂರಿಗೆ ಬರಿಗೈದಾಸನಾಗಿ ಬಂದಿದ್ದರೂ ಇವತ್ತು ಕೋಟ್ಯಾಧೀಪತಿಯಾಗಿದ್ದಾನೆ. ವಾಸಿಸಲು ಐಷಾರಾಮಿ ಬಂಗಲೆ, ಓಡಾಡಲು ಹತ್ತಾರು ಕಾರುಗಳು, ಎಲ್ಲವೂ ಇವೆ. ಆದರೆ ಇಂತಹ ಸಾಹುಕಾರನನ್ನು ಹೆತ್ತ ತಾಯಿಯೇ ಇವತ್ತಿಗೂ ಬೇರೆಯವರ ಮನೆಗಳಲ್ಲಿ ಮುಸುರೆ ತಿಕ್ಕುತ್ತಾ ಜೀವಿಸುತ್ತಿದ್ದಾಳೆ ಎಂದರೆ ನಂಬುತ್ತೀರಾ? ಆದರೆ ಅದು ನಿಜ. ಈತನ ತಾಯಿ ಕಮಲಮ್ಮನಿಗೆ ಈಗ 70 ವರ್ಷ ವಯಸ್ಸು. ಕೈಕಾಲು ಗಟ್ಟಿಯಾಗಿಲ್ಲ, ಆರೋಗ್ಯ ಅಷ್ಟು ಚೆನ್ನಾಗಿಲ್ಲ ಆದರೂ ಮುಸುರೆ ತಿಕ್ಕುವುದರಿಂದ ಬಿಡುಗಡೆ ಇಲ್ಲ.

ನಾರಾಯಣ್‌ನ ಅಣ್ಣ ಎಸ್. ವರದರಾಜುವಿನ ಕತೆ ಇದಕ್ಕಿಂತ ವಿಭಿನ್ನವಾಗಿಲ್ಲ. ಹಲವು ವರ್ಷಗಳ ಹಿಂದೆ ಸಂಭವಿಸಿದ ಅಪಘಾತದಿಂದ ವರದರಾಜು ತನ್ನ ಕೈಕಾಲುಗಳ ಮೇಲಿನ ನಿಯಂತ್ರಣವನ್ನೇ ಕಳೆದುಕೊಂಡಿದ್ದಾನೆ. ಚೇತನವಿಲ್ಲದ ದೇಹಕ್ಕೆ ಹಲವಾರು ಕಾಯಿಲೆಗಳು ಅಂಟಿಕೊಂಡಿವೆ. ಆದರೆ ನತದೃಷ್ಟ ತಾಯಿ ಕಮಲಮ್ಮಳೇ ದುಡಿದು ಈತನನ್ನು ನೋಡಿಕೊಳ್ಳಬೇಕಿದೆ.



ರಕ್ತ ಸಂಬಂಧಿಗಳಿಗೆ ನೆರವನ್ನು ನೀಡದ ನಾರಾಯಣ್ ಇನ್ನು ಇತರರನ್ನು ಹೇಗೆ ನೋಡಿಯಾನು? ಉತ್ತರ ತಿಳಿಯಲು ಈತನ ಗಾಡ್‌ಫಾದರ್‌ಗಳಾಗಿದ್ದ ನಂಜುಂಡಿ ಮತ್ತು ಡಾ. ಶರ್ಮಾರತ್ತ ನೋಡಬೇಕು. ಮೊದಲಿನಿಂದಲೂ ನಾರಾಯಣ್ ನಿರ್ದೇಶಿಸಿದ ಚಿತ್ರಗಳಿಗೆ ಮತ್ತು ಧಾರಾವಾಹಿಗಳಿಗೆ ಹಣ ನೀಡುತ್ತಾ ಬಂದವರೇ ಇವರಿಬ್ಬರು. ಆದರೆ ಯಾವಾಗ ನಾರಾಯಣ್ ಯಶಸ್ಸಿನ ಮೆಟ್ಟಿಲೇರಿದನೋ, ಆಗ ಇವರಿಬ್ಬರನ್ನು ಬೇಡವಾದ ಪಿಣಿಯಂತೆ ಒದ್ದ. ಅಷ್ಟೇ ಅಲ್ಲ, ನಂಜುಂಡಿ ಕೊಟ್ಟಿದ್ದ ಹಣಕ್ಕೂ ನಾರಾಯಣ್ ಕೈ ಎತ್ತಿದ. ಇದರಿಂದ ರೋಸಿ ಹೋದ ನಂಜುಂಡಿ ಇವನ ವಿರುದ್ಧ ಪೊಲೀಸ್ ಕಂಪ್ಲೇಂಟ್ ನೀಡಿದರು. ಈಗ ಅದು ನ್ಯಾಯಾಲಯದ ಮುಂದಿದೆ.

ನಾರಾಯಣ್ ಹೇಗೆ ಇವರಿಬ್ಬರನ್ನು ಉಪಯೋಗಿಸಿಕೊಂಡನೋ ಹಾಗೆಯೇ ತನ್ನ ಸ್ವಂತ ತಮ್ಮ ಗೋವಿಂದುವನ್ನೂ, ಹೆಂಡತಿ ಭಾಗ್ಯಳ ಅಣ್ಣ ಗಿರಿಯನ್ನು ಯೂಸ್ ಮಾಡಿಕೊಂಡಿದ್ದಾನೆ. ಹಿಂದೆ ಇವರಿಬ್ಬರೂ ನಾರಾಯಣ್‌ನ ಮನೆಯಲ್ಲೇ ವಾಸಿಸುತ್ತಾ ಆತನ ಚಿತ್ರಗಳಲ್ಲಿ, ಸೀರಿಯಲ್‌ಗಳಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಈಗ ಅವರಿಬ್ಬರನ್ನೂ ತನ್ನ ಮನೆಯಿಂದ ಹೊರದಬ್ಬಿದ್ದಾನೆ.

ಅದಕ್ಕೆ ಅಂದಿದ್ದು ನಾರಾಯಣ್‌ನದ್ದು ಟಾಯ್ಲೆಟ್ ಪೇಪರ್ ವ್ಯಕ್ತಿತ್ವ ಎಂದು!

'ಕಲಾ ಸಾಮ್ರಾಟ್' ಎಂಬ ಹಣೆಪಟ್ಟಿ ಕಟ್ಟಿಕೊಂಡಿರುವ ನಿರ್ದೇಶಕ ಎಸ್. ನಾರಾಯಣ್ ರೀಲ್‌ನಲ್ಲಿ ಅದ್ಭುತ ನಟನೇನಲ್ಲ, ಆದರೆ ರಿಯಲ್ ಲೈಫ್‌ನಲ್ಲಿ ಮಾತ್ರ ನಟ ಸಾಮ್ರಾಟ್! ಇದಕ್ಕೆ ಮೊನ್ನೆ ನೂರಾರು ಮಂದಿಯ ಮುಂದೆ ಈತ ಹೊಡೆದ ಡೈಲಾಗ್‌ಗಳು, ಪ್ರದರ್ಶಿಸಿದ ಮುಖಭಾವನೆ, ಎಲ್ಲವೂ ಸಾಕ್ಷಿ ಒದಗಿಸುವಂತಿದ್ದವು.

"ನಾನು ಶಿಸ್ತಿನ ಸಿಪಾಯಿ. ಆರಕ್ಕೆ ಚಿತ್ರೀಕರಣ ಶುರು ಆಗಬೇಕೆಂದರೆ ಐದು ನಿಮಿಷವೂ ತಡ ಮಾಡದೇ ಆರಕ್ಕೆ ಶುರುವಾಗಬೇಕು. ಆದರೆ ಅವನಿಂದ ನನ್ನ ಸೆಟ್‌ನಲ್ಲಿ ಆದ ಅಶಿಸ್ತನ್ನು ನೋಡಿ ಅಸಹ್ಯ ಆಯಿತು. ಇಂತಹ ಹೊಲಸು ವಾತಾವರಣದಲ್ಲಿ ನನ್ನಂಥವರು ಕೆಲಸ ಮಾಡಬೇಕಲ್ಲ ಎಂದು ತುಂಬಾ ನೋವಾಯಿತು...."

"ಯಶಸ್ಸು ಬಂತು ಅಂತ ಅಮಲು ಏರಬಾರದು. ಆದರೆ ಅವರಿಗೆ ಬಹುಬೇಗ ಯಶಸ್ಸಿನ ಅಮಲು ತಲೆಗೇರಿಬಿಟ್ಟಿದೆ. ದೊಡ್ಡೋರು, ಚಿಕ್ಕೋರು ಎಂದು ನೋಡದೇ ಅವಮಾನ ಮಾಡುತ್ತಾರೆ. ಇದರಿಂದ ನನಗೆ ತುಂಬಾ ನೋವಾಗಿದೆ..."

ಹೀಗೆ ಸಾಗಿತ್ತು ನಾರಾಯಣನ ಅಳಲಿನ ಪ್ರಲಾಪ. ಅದು 'ಚೆಲುವಿನ ಚಿತ್ತಾರ' ಎಂಬ ಚಿತ್ರದ ನೂರನೇ ದಿನದ ಸಂಭ್ರಮ. ಆ ಚಿತ್ರದ ಸಂಭ್ರಮಕ್ಕೂ ನಾರಾಯಣ ಹೊಡೆಯುತ್ತಿದ್ದ ದುಃಖಭರಿತ ಡೈಲಾಗ್‌ಗಳಿಗೂ ಸಂಬಂಧವೇ ಇರಲಿಲ್ಲ. ಆದರೆ ನಾರಾಯಣ್‌ಗೆ ಇಂತಹ ಸರಳ ತರ್ಕಗಳನ್ನು ಕಟ್ಟಿಕೊಂಡು ಏನಾಗಬೇಕಿದೆ. ಆತ ಆಡುವುದೆಲ್ಲ ಆಟ, ಹೇಳುವುದೆಲ್ಲ ಅಸತ್ಯ ಎಂದು ಅರಿಯದ ಜನ ಮಾತ್ರ ಈ ಸತ್ಯದ ಕೊಲೆ ಸಾಮ್ರಾಟನ ಖೋಟಾ ಮಾತುಗಳನ್ನು ಕೇಳಿ ಚಪ್ಪಾಳೆ ತಟ್ಟಿದ್ದೊ ತಟ್ಟಿದ್ದು.

ವಾಸ್ತವವಾಗಿ ಏನಾಗಿತ್ತೆಂದರೆ ನಾರಾಯಣ್ ನಿರ್ಮಿಸಿ, ನಿರ್ದೇಶಿಸುತ್ತಿರುವ 'ಚಂಡ' ಎಂಬ ಕಳ್ಳಭಟ್ಟಿ ಚಿತ್ರವನ್ನು ಗೋಲ್‌ಮಾಲ್ ಮಾಡಿ ಆದಷ್ಟು ಬೇಗನೆ ಬಿಡುಗಡೆ ಮಾಡಬೇಕೆಂಬ ಸಂಚು ಹಾಕಿದ್ದ. ಹಿಂದೆಲ್ಲಾ ಆತನ ಇಂತಹ ಸ್ಕೆಚ್‌ಗಳು ಯಾವ ಅಡೆತಡೆಯೂ ಇಲ್ಲದೆ ಸಕ್ಸಸ್ ಆಗಿದ್ದವು.

ಆದರೆ ಈಗ ಮಾತ್ರ ನಟನೊಬ್ಬ ನಾರಾಯಣನಿಗೇ ತಿರುಮಂತ್ರ ಹಾಕಿದ್ದ ಆದ್ದರಿಂದಲೇ ಆತನ ಮೇಲೆ ಆರೋಪಗಳನ್ನು ಹೇರುತ್ತಾ ನಾರಾಯಣ್ ಹೀಗೆ ತನ್ನ ಸೇಡು ತೀರಿಸಿಕೊಂಡಿದ್ದ!

ಆ ನಟನೇ 'ದುನಿಯಾ' ವಿಜಯ್!

ನಾರಾಯಣ್ ಎಂತಹ ಅವಕಾಶವಾದಿ ಗಿರಾಕಿ ಎಂದರೆ, 'ಮುಂಗಾರು ಮಳೆ' ಹಿಟ್ ಆಗುತ್ತಿದ್ದಂತೆ ಅದರ ಹೀರೋ ಗಣೇಶನ ಕಾಲ್‌ಶೀಟ್ ಕೇಳಿದ. ಆದರೆ ಗಣೇಶ್ ಆಗಲೇ ಹಲವು ಚಿತ್ರಗಳಿಗೆ ಸಹಿ ಹಾಕಿದ್ದರಿಂದ "ಸದ್ಯದಲ್ಲೇ ಡೇಟ್ಸ್ ಕೊಡಲು ಸಾಧ್ಯವಿಲ್ಲ" ಎಂದು ಹೇಳಿ ಕಳುಹಿಸಿದ. ಇಷ್ಟಕ್ಕೇ ನಾರಾಯಣ್ ಸುಮ್ಮನಾಗುವ ಆಸಾಮಿಯಲ್ಲ, ಅದ್ಯಾರಿಂದಲೋ ಗಣೇಶ್‌ಗೆ ಒಂದು ಸಂದೇಶ ಬಂತು. "ನಾರಾಯಣ್‌ಗೆ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಆಪ್ತರು. ಸಿಎಮ್ಮೆ ಹೇಳಿದ್ದಾರಂತೆ ಕಾಲ್‌ಶೀಟ್ ಕೊಡಬೇಕು ಎಂಬ 'ಸಲಹೆ' ಆದಾಗಿತ್ತು. ಇಂತಹ 'ಪ್ರಭಾವಿ'ಗಳ ವಿರೋಧ ಕಟ್ಟಿಕೊಳ್ಳುವುದೇಕೆ ಎಂದು ಚಿಂತಿಸಿದ ಗಣೇಶ ಅದು

ನಾರಾಯಣ್ ಎಂಬ ಮಹಾನ್ ಛಂಡ ನಿರ್ಮಿಸಿ, ನಿರ್ದೇಶಿಸುತ್ತಿರುವ 'ಚಂಡ' ಎಂಬ ಕಳ್ಳಭಟ್ಟಿ ಚಿತ್ರವನ್ನು ಗೋಲ್‌ಮಾಲ್ ಮಾಡಿ ಆದಷ್ಟು ಬೇಗನೆ ಬಿಡುಗಡೆ ಮಾಡಬೇಕೆಂದು ಸಂಚು ಹಾಕಿದ್ದ. ಹಿಂದೆಲ್ಲಾ ಆತನ ಇಂತಹ ಸ್ಕೆಚ್‌ಗಳು ಯಾವ ಅಡೆತಡೆಯೂ ಇಲ್ಲದೆ ಸಕ್ಸಸ್ ಆಗಿದ್ದವು. ಆದರೆ ಈಗ ಚಂಡ ವಿಜಯ್ ಮಾತ್ರ ನಾರಾಯಣನ ಫೋರ್‌ಟ್ವೆಂಟಿ ಐಡಿಯಾವನ್ನು ತಲೆಕೆಳಗುಮಾಡಿ ನಾರಾಯಣನ ಕೆಂಗಣ್ಣಿಗೆ ಗುರಿಯಾಗಿರುವ ಕತೆ ಇಲ್ಲಿದೆ....

ಹೇಗೋ 'ಚೆಲುವಿನ ಚಿತ್ತಾರ' ಎಂಬ ಚಿತ್ರಕ್ಕೆ ಡೇಟ್ ಹೊಂಚಿದರು.

ಹೇಳಿ ಕೇಳಿ 'ಚೆಲುವಿನ ಚಿತ್ತಾರ' ಒಂದು ರಿಮೇಕ್ ಚಿತ್ರ. ಅದಕ್ಕೆ ಚಿತ್ರಕಥೆ, ಡೈಲಾಗ್, ಹಾಡು, ಯಾವುದನ್ನೂ ಹೊಸದಾಗಿ ರಚಿಸುವ ಅಗತ್ಯವಿಲ್ಲವಲ್ಲ. 'ಕಾದಲ್' ಎಂಬ ತಮಿಳು ಚಿತ್ರದ ಸಿಡಿಯನ್ನು ಹಾಕಿಕೊಂಡು ಕೂತ 'ಶಿಸ್ತಿನ ಸಿಪಾಯಿ' ನಾರಾಯಣ್ ಒಂದೆರಡು ಗಂಟೆಗಳಲ್ಲಿ ಸಂಭಾಷಣೆ ಮತ್ತು ಹಾಡುಗಳನ್ನು ಅನುವಾದ ಮಾಡಿದ್ದ. ಆನಂತರ ಕ್ಯಾಮರಾ ಆಂಗಲ್‌ನಿಂದ ಹಿಡಿದು ದೃಶ್ಯ ಸಂಯೋಜನೆಯ ತನಕ ಎಲ್ಲವನ್ನೂ ಭಟ್ಟಿ ಇಳಿಸಿ, ಹಲವೇ ದಿನಗಳಲ್ಲಿ ಚಿತ್ರವನ್ನು ಮುಗಿಸೇಬಿಟ್ಟ. ಆಗತಾನೇ ಗಣೇಶ್ ನಟಿಸಿದ್ದ ಇನ್ನೊಂದು ಚಿತ್ರ 'ಹುಡುಗಾಟ' ತೆರೆಕಂಡಿತ್ತು. 'ಮುಂಗಾರುಮಳೆ'ಯ 'ಹವಾ'ದಿಂದಲೇ ಆ ಚಿತ್ರ ಒಂದಿಷ್ಟು ಯಶಸ್ಸು ಕಾಣುತ್ತಿತ್ತು. ಆದರೆ ಆ 'ಹವಾ' ತನ್ನ ಚಿತ್ರಕ್ಕೆ ಸಿಗಬೇಕೆಂದೂ, ಆ ಮೂಲಕ ತಾನೇ ಲಾಭ ಮಾಡಿಕೊಳ್ಳ ಬೇಕೆಂದೂ ಹಪಹಪಿಸಿದ ನಾರಾಯಣ್ 'ಹುಡುಗಾಟ' ಬಿಡುಗಡೆಯಾದ ಎರಡೇ ವಾರಗಳಲ್ಲಿ 'ಚೆಲುವಿನ ಚಿತ್ತಾರ'ವನ್ನೂ ಬಿಡುಗಡೆ ಮಾಡಿದ.

ಇದನ್ನು ಕಂಡು 'ಹುಡುಗಾಟ'ದ ನಿರ್ಮಾಪಕ ಮತ್ತು ನಾಯಕ ನಟ ಗಣೇಶ್ ದಂಗಾಗಿಹೋದರು. ಹೀಗೆ ಎರಡೇ ವಾರಗಳಲ್ಲಿ ತಮ್ಮ ಚಿತ್ರವನ್ನೂ ಬಿಡುಗಡೆ ಮಾಡುವ ಮೂಲಕ ಓರ್ವ ನಿರ್ಮಾಪಕ ಹೂಡಿದ ಹಣಕ್ಕೂ, ನಟನೊಬ್ಬನ ವೃತ್ತಿ ಜೀವನಕ್ಕೂ ಸಂಚಕಾರ ತುರುತ್ತೀರಿ ಎಂದು ಎಷ್ಟೇ ಬೇಡಿಕೊಂಡರೂ ನಾರಾಯಣ್ ತನ್ನ ದುರುದ್ದೇಶದ ಹಠ ಬಿಡಲಿಲ್ಲ. ಪರಿಣಾಮವಾಗಿ ಬಿ ಮತ್ತು ಸಿ ಸೆಂಟರ್‌ಗಳಲ್ಲಿ 'ಹುಡುಗಾಟ' ನೆಲಕಚ್ಚಿತ್ತು. ನಾರಾಯಣನ ತಿಜೋರಿಗೆ ಕನಿಷ್ಠ ಹತ್ತು ಕೋಟಿ ರೂಪಾಯಿಗಳು ಬಂದು ಸೇರಿತು.

ಇದೇ ತಂತ್ರವನ್ನು ನಟ ವಿಜಯ್ ಕುರಿತಂತೆಯೂ ನಾರಾಯಣ್ ಪ್ರಯೋಗಿಸಿದ್ದಾನೆ. 'ಮುಂಗಾರ





ಭೂಸಕ್ಕೆ ಆಸ್ಕರ್?

ಭೂಸಕ್ಕೆ ಮತ್ತೊಂದು ಹೆಸರಾದ ಎಸ್. ನಾರಾಯಣ್ 'ಪಕ್ಕ ಚುಕ್ಕ' ಎಂಬ ಥರ್ಡ್ ರೇಟ್ ಚಿತ್ರವೊಂದನ್ನು ಮಾಡಿದ್ದ. "ನಗು ಮನುಷ್ಯನ ಆಸ್ತಿ" ಎಂದು ಘೋಷಿಸಿದ್ದ ನಾರಾಯಣ್ ಈ ಚಿತ್ರ ಎಲ್ಲರನ್ನೂ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತದೆ; ನಿಜಕ್ಕೂ ಇದು ಆಸ್ಕರ್ ಪ್ರಶಸ್ತಿ ಪಡೆಯುವಷ್ಟು ಯೋಗ್ಯತೆ ಹೊಂದಿರುವ ಚಿತ್ರ ಎಂದೆಲ್ಲಾ ಹೇಳಿದ್ದ.

ಆದರೆ ಈ ಚಿತ್ರ ಎಷ್ಟು ಕಳಪೆ ಆಗಿತ್ತೆಂದರೆ ಜನ ನಗುವ ಬದಲು ಚಿತ್ರವನ್ನು ವೀಕ್ಷಿಸುವ ಯಾತನೆಯನ್ನು ಸಹಿಸಲಾಗದೇ ಕಣ್ಣೀರಿಟ್ಟಿದ್ದರು. ಆಗಲೇ ಹಲವು ಫ್ಲಾಪ್‌ಗಳನ್ನು ಕಂಡಿದ್ದ ನಾಯಕ ನಟ ರಮೇಶ್ ಅರವಿಂದ್ ಕೂಡ ತಾನೇಕೆ ಈ ಚಿತ್ರದಲ್ಲಿ ನಟಿಸಿದೆನೋ ಎಂದು ತಲೆತಲೆ ಚಚ್ಚಿಕೊಂಡಿದ್ದರು.

ಇದೆಲ್ಲದಕ್ಕಿಂತಲೂ ದುಃಖದ ಸಂಗತಿ ಯಾವುದೆಂದರೆ ಇದರಲ್ಲಿ ನಾರಾಯಣನ ಹೀರೋಯಿನ್ ಆಗಿ ನಟಿಸಿದ ಮಹಾಲಕ್ಷ್ಮಿ ಎಂಬ ಹುಡುಗಿಯ ಜೀವನದಲ್ಲಿ ಸಂಭವಿಸಿದ ದುರಂತಗಳು. ಮೂಲತಃ ಹಾಡುಗಾರ್ತಿಯಾಗಬೇಕೆಂಬ ಕನಸ್ಸನ್ನು ಹೊತ್ತಿದ್ದ ಮಹಾಲಕ್ಷ್ಮಿಯನ್ನು ಅದು ಹೇಗೋ ಪುಸಲಾಯಿಸಿದ ನಾರಾಯಣ್ "ಇದರಲ್ಲಿ ನಟಿಸಿದರೆ ಚಿತ್ರರಂಗದಲ್ಲಿ ನಿನಗೆ ಪ್ರವೇಶ ಸಿಗುತ್ತದೆ" ಎಂದೆಲ್ಲ ಕಿವಿ ಊದಿದ.

ಅವನನ್ನು ನಂಬಿದ ಮಹಾಲಕ್ಷ್ಮಿ ನಟಿಸಿದಳು. ನಾರಾಯಣನ ಅಸಭ್ಯ ಡೈಲಾಗ್‌ಗಳನ್ನು ಸಹಿಸಿಕೊಂಡಳು. ಕ್ಯಾಮೆರಾ ಮುಂದೆ ಆತನಿಂದ ತನ್ನ ಗಲ್ಲದ ಮೇಲೆ ಮುತ್ತನ್ನೂ ಕೊಡಿಸಿಕೊಂಡಳು. ಆದರೆ ಚಿತ್ರ ತೋಪಾಯಿತಲ್ಲದೆ, ಚಿತ್ರ ಬಿಡುಗಡೆಯಾಗುವ ಮುನ್ನ ಮಹಾಲಕ್ಷ್ಮಿಯೊಂದಿಗೆ ಮದುವೆ ನಿಶ್ಚಿತಾರ್ಥ ಮಾಡಿಕೊಂಡಿದ್ದ ಹುಡುಗ ಈ ಚಿತ್ರವನ್ನು ನೋಡಿ ಆಕೆಯನ್ನು ಮದುವೆಯಾಗುವುದಿಲ್ಲ ಎಂದು ಘೋಷಿಸಿದ. ಮಹಾಲಕ್ಷ್ಮಿಯ ಬದುಕು ನರಕವಾಯಿತು. ಇತ್ತ ಹಾಡುಗಾರ್ತಿಯಾಗಬೇಕೆಂಬ ಕನಸ್ಸಿಗೂ ಕಲ್ಲು, ಆತ ನೆಮ್ಮದಿಯ ದಾಂಪತ್ಯ ಜೀವನದ ಆಶಯಕ್ಕೂ ಚಪ್ಪಡಿ ಕಲ್ಲು. "ಇನ್ನೆಂದೂ ಚಿತ್ರರಂಗದ ಸಹವಾಸಕ್ಕೆ ಬರುವುದಿಲ್ಲ" ಎಂದು ಆಕೆ ಕಣ್ಣೀರಿಡುತ್ತಾ ಮಾಧ್ಯಮದವರ ಮುಂದೆ ತನ್ನ ದುಃಖವನ್ನು ತೋಡಿಕೊಂಡಿದ್ದಳು.

ಕೊನೆಗೊಮ್ಮೆ ಪಕ್ಕ-ಚುಕ್ಕದ ಫೈನಾನ್ಷಿಯರ್ ಕೆ.ಪಿ. ನಂಜುಂಡಿಯೊಂದಿಗೆ ಸಮಾರಂಭಕ್ಕೆ ತೆರಳಿದ್ದ ಸಂದರ್ಭದಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಮಹಾಲಕ್ಷ್ಮಿ ಪ್ರಾಣವನ್ನೇ ಕಳೆದುಕೊಂಡಳು.

ಒಂದು ಹುಡುಗಿಯ ಜೀವನದಲ್ಲಿ ಇಷ್ಟೆಲ್ಲಾ ರಾಡಿ ಎಬ್ಬಿಸಿದ ನಾರಾಯಣನಿಗೆ ಆಸ್ಕರ್ ಬೇರೆ ಕೊಡಬೇಕಂತೆ! ಆಸ್ಕರ್ ಅಂದರೆ ತನಗೆ ತಕ್ಕದಾದ ಭೂಸ ಅಂದುಕೊಂಡಿರಬೇಕು!

ದುನಿಯಾ'ದೊಂದಿಗೆ 'ದುನಿಯಾ' ಕೂಡಾ ಹಿಟ್ಟಾದಾಗ ನಾರಾಯಣ್ ವಿಜಯ್‌ನ ಕಾಲ್‌ಶೀಟ್ ಕೇಳಿದ. ಆದರೆ ಆಗಲೇ 'ಯುಗ' ಚಿತ್ರದ ಶೂಟಿಂಗ್ ಪ್ರಾರಂಭವಾಗಿ ಒಂದು ವಾರವಾಗಿತ್ತು.

ಅದಾದ ನಂತರ ಕವಿತಾ ಲಂಕೇಶ್ ನಿರ್ದೇಶನದ 'ಅವ್ವ' ಚಿತ್ರಕ್ಕೆ ಡೇಟ್ಸ್ ನಿಗದಿ ಮಾಡಲಾಗಿತ್ತು. ಅಷ್ಟೇ ಅಲ್ಲ 'ಅವ್ವ' ಮುಗಿದ ನಂತರ ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ ಚಿತ್ರಕ್ಕೆ ಕಾಲ್‌ಶೀಟ್ ನೀಡುವುದಾಗಿ ವಿಜಯ್ ಮಾತು ಕೊಟ್ಟಿದ್ದ. ಇಷ್ಟೆಲ್ಲ ಇದ್ದರೂ ಕೂಡಲೇ ತನಗೆ ಕಾಲ್‌ಶೀಟ್ ಬೇಕೆಂದು ನಾರಾಯಣ್ ಮತ್ತೆ ಹಠ ಹಿಡಿದ. ಮಾತ್ರವಲ್ಲದೆ ಮತ್ತದೇ 'ಕುಮಾರಸ್ವಾಮಿ' ಎಂಬ ಗುಮ್ಮ ತೋರಿಸಿದ. ವಿಜಯ್‌ಗೆ ರವಾನೆಯಾದ ಸಂದೇಶದ ಪ್ರಕಾರ "ನಾರಾಯಣ್ ಹೆಸರಿಗೆ ಮಾತ್ರ ನಿರ್ಮಾಪಕ. ಚಿತ್ರದ ಅಸಲಿ ನಿರ್ಮಾಪಕ ಮುಖ್ಯಮಂತ್ರಿ ಕುಮಾರಸ್ವಾಮಿ. ಅಂಥವರಿಗೂ ಡೇಟ್ಸ್ ಇಲ್ಲ ಅಂದರೆ ಹೇಗೆ. ಸುಮ್ಮನೆ ಒಪ್ಪಿಕೋ" ಎಂಬುವುದಾಗಿತ್ತು.

ಆದರೆ ಅಷ್ಟೊತ್ತಿಗಾಗಲೇ ನಾರಾಯಣನ ಕುತಂತ್ರದಿಂದಾಗಿ 'ಚೆಲುವಿನ ಚಿತ್ತಾರ'ಕ್ಕೆ, 'ಹುಡುಗಾಟ' ಬಲಿಯಾಗಿದ್ದು, ಅದರ ನಿರ್ಮಾಪಕ ಹೈರಾಣಾಗಿದ್ದು, 'ಯುಗ' ನಿರ್ಮಾಪಕ ಎ. ಆನಂದ್ ಮತ್ತು ನಾಯಕ ನಟ ವಿಜಯ್‌ಗೆ ಅರಿವಾಗಿತ್ತು.

ಆದ್ದರಿಂದ ಅವರಿಬ್ಬರೂ ಒಂದು ಷರತ್ತು ಹಾಕಿದರು. ಅದೇನೆಂದರೆ 'ಯುಗ' ಬಿಡುಗಡೆಯಾದ ಐವತ್ತು ದಿನಗಳ ನಂತರವೇ ನಾರಾಯಣ್ ತನ್ನ ನಿರ್ಮಾಣ-ನಿರ್ದೇಶನದ 'ಚಂಡ'ವನ್ನು ಬಿಡುಗಡೆ ಮಾಡಬೇಕೆಂಬ ಕರಾರು. ಇದಕ್ಕೆ ಒಪ್ಪಿದರೆ ಮಾತ್ರ ಡೇಟ್ಸ್ ನೀಡುವುದಾಗಿ ನಾರಾಯಣ್‌ಗೆ ಸ್ಪಷ್ಟವಾಗಿ ತಿಳಿಸಲಾಗಿತ್ತು. ಇದಕ್ಕೆ ನಾರಾಯಣ್ ಒಪ್ಪಿದ ಮೇಲೆಯೇ ವಿಜಯ್ ಅದು ಹೇಗೋ ಒಂದಿಷ್ಟು ದಿನಗಳನ್ನು ಬಿಡುವು ಮಾಡಿಕೊಂಡು 'ಚಂಡ'ದಲ್ಲಿ ನಟಿಸಿದ.

ಆದರೆ ನಾರಾಯಣ್‌ನ ಹುಟ್ಟುಗುಣ ಹೋಗಬೇಕಲ್ಲ?

'ಚಂಡ' ಕೂಡ ಮತ್ತದೇ ತಮಿಳು ಚಿತ್ರವಾದ 'ಕಾದಲ್ ಕೊಂಡೇನ್' ಚಿತ್ರದ ಜೆರಾಕ್ಸ್ ಕಾಪಿ. ಇದನ್ನು ಮಾಡುವುದಕ್ಕೆ ಸ್ವಯಂಘೋಷಿತ 'ಬರಹಗಾರ' ನಾರಾಯಣ್ ಯಾವುದೇ ಸೃಜನಶೀಲತೆ, ಹೊಸತನವನ್ನು ಪ್ರದರ್ಶಿಸಬೇಕಿರಲಿಲ್ಲ. ಆದ್ದರಿಂದ ಸೀದಿ ಹಾಕಿ ಕೂತ, ಸಂಭಾಷಣೆ ಗೀಚಿದ, ರೀಲು ಸುತ್ತಿದ, ಶೂಟಿಂಗ್‌ಅನ್ನು ರಾತ್ರೋ ರಾತ್ರಿ ಮುಗಿಸಿದ.

ಇತ್ತ 'ಯುಗ' ಕೂಡ ಭರದಲ್ಲಿ ಸಾಗಿತ್ತು. ಮಾತ್ರವಲ್ಲ ಇದೇ ಅಕ್ಟೋಬರ್ 26ರಂದು ಅದನ್ನು ಬಿಡುಗಡೆ ಮಾಡಲು ಎಲ್ಲ ಸಿದ್ಧತೆ ನಡೆದಿತ್ತು. ಅತ್ತ 'ಚಂಡ' ಕೂಡ ಸಂಪೂರ್ಣಗೊಳ್ಳುವ ಹಂತ ತಲುಪುತ್ತಿತ್ತು. ಮಾತ್ರವಲ್ಲ, 'ಯುಗ' ಬಿಡುಗಡೆಯಾದ ಐವತ್ತು ದಿನಗಳ ನಂತರವೇ 'ಚಂಡ'ವನ್ನು ಬಿಡುಗಡೆ ಮಾಡುವ ಒಪ್ಪಂದಕ್ಕೆ ಕಲ್ಲು ಹಾಕಲು ನಾರಾಯಣ್ ಸಂಚು ಹಾಕಿದ್ದ. ಯಾಕೆಂದರೆ 'ದುನಿಯಾ' ಯಶಸ್ಸಿನ 'ಹವಾ'ದಲ್ಲೇ ವಿಜಯ್‌ನ ಎರಡನೇ ಚಿತ್ರಕ್ಕೂ ಲಾಭ ಸಿಗುತ್ತದೆಂಬ ಕಾರಣಕ್ಕೆ.

ಇದನ್ನರಿತ ವಿಜಯ್ 'ಚಂಡ'ಕ್ಕೆ ಕೇವಲ ಎರಡು ದಿನ ಡಬ್ಬಿಂಗ್ ಮಾಡಿ 'ಯುಗ'ದ ಕೆಲಸದಲ್ಲಿ ತಲ್ಲೀನನಾದ. ಇದಕ್ಕೆ ಕಾರಣವೂ ಇತ್ತು. ಚೇಂಬರ್ ರೂಲ್ಸ್ ಪ್ರಕಾರ ನಟನ ಅನುಮತಿ ಇಲ್ಲದೆ ಬೇರೆಯವರಿಂದ ಆತನ ಪಾತ್ರಕ್ಕೆ ಡಬ್ ಮಾಡಿಸುವಂತಿಲ್ಲ. ಆದ್ದರಿಂದ ತಾನು ಡಬ್ ಮಾಡಿದರೆ ತಾನೇ ನಾರಾಯಣ್ ಚಿತ್ರ ಸಂಪೂರ್ಣಗೊಳ್ಳುವುದು ಎಂಬ ಲೆಕ್ಕ ವಿಜಯ್‌ದಾಗಿತ್ತು.

ಆದರೆ ರಂಗೋಲಿ ಕೆಳಗೆ ತೂರುವ ನಾರಾಯಣ್ ಇನ್ನೊಂದು ತಂತ್ರ ಹೂಡಿದ್ದ. ಅದೇನೆಂದರೆ ಸಾಮಾನ್ಯವಾಗಿ ಚಿತ್ರೋದ್ಯಮದಲ್ಲಿ ನಟರ ಸಂಭಾವನೆಯನ್ನು ಮೂರು ಕಂತುಗಳಲ್ಲಿ ಕೊಡುತ್ತಾರೆ. ಕಾಲ್‌ಶೀಟ್ ಪಡೆದಾಗ, ಚಿತ್ರೀಕರಣ ಪ್ರಾರಂಭವಾದಾಗ ಮತ್ತು ಡಬ್ಬಿಂಗ್‌ಗಿಂತ ಮುನ್ನ. ಇದ್ಯಾಕೆಂದರೆ ನಟ ಅಥವಾ ನಟಿಗೆ ಒಪ್ಪಂದದಂತೆ ಸಂಪೂರ್ಣ ಸಂಭಾವನೆ ನೀಡದಿದ್ದರೆ ಅವರು ಡಬ್ ಮಾಡುವುದಿಲ್ಲ. ಅವರ ಲಿಖಿತ ಅನುಮತಿ ಇಲ್ಲದೆ ಇತರರಿಂದ ಡಬ್ ಮಾಡಿಸಲು ಅನುಮತಿ ಇಲ್ಲ. ಆಗ ವಿಧಿ ಇಲ್ಲದೆ ನಿರ್ಮಾಪಕ ಅವರಿಗೆ ಹಣವನ್ನು ಸಂದಾಯ ಮಾಡಲೇಬೇಕಾಗುತ್ತದೆ. ಆದರೆ ನಾರಾಯಣ್ ಏನು ಮಾಡಿದ್ದಾನೆಂದರೆ ಡಬ್ಬಿಂಗ್‌ಗಿಂತ ಮುನ್ನವೇ ವಿಜಯ್‌ಗೆ ನೀಡಬೇಕಿರುವ ಸಂಭಾವನೆಯನ್ನೆಲ್ಲ ನೀಡಿದ್ದಾನೆ. ಹಾಗೇ ನೀಡಿರುವುದರಿಂದ ಡಬ್ಬಿಂಗ್ ಆರ್ಟಿಸ್ಟ್ ಮೂಲಕ ವಿಜಯ್‌ನ ಅನುಮತಿ ಇಲ್ಲದೆ ಡಬ್ ಮಾಡಿಸಿ ಚಿತ್ರವನ್ನು ಸಂಪೂರ್ಣಗೊಳಿಸಿದ್ದಾನೆ!

ನಾರಾಯಣ್‌ನ ಕುತಂತ್ರ ಬುದ್ಧಿ ಇಲ್ಲಿಗೇ ನಿಲ್ಲುವುದಿಲ್ಲ. ಹೀಗೆ ಚಿತ್ರವನ್ನು ಸಂಪೂರ್ಣಗೊಳಿಸಿ, ಬೆಂಗಳೂರು-ಕೋಲಾರ-ತುಮಕೂರು ಭಾಗದ ಹಂಚಿಕೆ ಹಕ್ಕನ್ನು ತಾನೇ ಇಟ್ಟುಕೊಂಡು ಮಿಕ್ಕ ವಲಯಗಳ ಹಂಚಿಕೆ ಹಕ್ಕುಗಳನ್ನು ಮಾರಿದ್ದಾನಲ್ಲದೇ, 'ಯುಗ' ಬಿಡುಗಡೆಗೆ ಒಂದು ವಾರ ಮುನ್ನವೇ-ಅಂದರೆ ಅಕ್ಟೋಬರ್ 19ಕ್ಕೆ- ತನ್ನ ಚಿತ್ರ ಬಿಡುಗಡೆ ಮಾಡಲು ಸೈಲೆಂಟಾಗಿ ತಯಾರಿ ನಡೆಸಿದ್ದಾನೆ.

ಇದರ ಸುಳಿವನ್ನರಿತ ನಿರ್ಮಾಪಕ ಎ. ಆನಂದ್ ಮತ್ತು ನಟ ವಿಜಯ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕೊಟ್ಟ ಮಾತಿಗೆ ತಕ್ಕಂತೆ ಐವತ್ತು ದಿನಗಳ ನಂತರ 'ಚಂಡ'ವನ್ನು ಬಿಡುಗಡೆ ಮಾಡು ಎಂಬ ಸಂದೇಶ ಕಳುಹಿಸಿದ್ದಾರೆ.

ಆದರೆ ಕುಮಾರಸ್ವಾಮಿಯ ಆಪ್ತ ಭಂಟನಲ್ಲದೇ ನಾರಾಯಣ. ಕುಮಾರಸ್ವಾಮಿಯಂತೆ ಈತನಿಗೂ ಕೊಟ್ಟ ಮಾತು ಎಂದರೆ ಅಲರ್ಜಿ! ಸದ್ಯ "ನನ್ನ ಲಾಭಕ್ಕೆ ನಾನು ವಚನಭ್ರಷ್ಟನಾದರೂ ಪರವಾಗಿಲ್ಲ" ಎಂದು ನಾರಾಯಣ್ ಇಲ್ಲಿಯವರೆಗೂ ಬಹಿರಂಗವಾಗಿ ಘೋಷಿಸಿಲ್ಲ!

ನಾರಾಯಣನ ಪ್ರಭಾವ ಮತ್ತು ಭಾರ ಎರಡಕ್ಕೂ ಹೆದರಿದ್ದ 'ಹುಡುಗಾಟ'ದ ನಿರ್ಮಾಪಕ ಮತ್ತು ಗಣೇಶ್ ಅಂದು ಸುಮ್ಮನಾಗಿದ್ದರು. ಆದರೆ ಎ. ಆನಂದ್ ಮತ್ತು ವಿಜಯ್ ಆ ಜಾಯಮಾನದವರಲ್ಲ. ವಿಜಯ್ ಹೇಳುವ ಪ್ರಕಾರ "ನನ್ನ ವೃತ್ತಿಯಷ್ಟೇ ನಿರ್ಮಾಪಕರ ಆರ್ಥಿಕ ಯೋಗಕ್ಷೇಮವೂ ಮುಖ್ಯ. ಎಲ್ಲರೂ ಮೊದಲೇ ಒಪ್ಪಿಕೊಂಡಂತೆ 'ಯುಗ' ನಂತರ 'ಚಂಡ' ಬಿಡುಗಡೆಯಾದರೆ ಎಲ್ಲರಿಗೂ ಒಳ್ಳೆಯದು. ಅನುಭವಿ ನಿರ್ಮಾಪಕ ಮತ್ತು ಹಿರಿಯ ನಿರ್ದೇಶಕರಾದ ನಾರಾಯಣ್‌ರವರಿಗೆ ಇದು ಗೊತ್ತಿಲ್ಲವೆಂದೇನಲ್ಲ. ಹಾಗಿದ್ದೂ ನನ್ನ ವಿರುದ್ಧ ಸಾರ್ವಜನಿಕವಾಗಿ ಸಮರ ನಡೆಸಿದರೆ ನಾನೇನು ಮಾಡಕಾಗುತ್ತೆ? ನನ್ನ ನಡತೆ ಸರಿ ಇಲ್ಲ ಅನ್ನಿಸಿದ್ದರೆ, ನಾನು ಶಿಸ್ತನ್ನು ಪಾಲಿಸುತ್ತಿಲ್ಲ ಎಂದರೆ ಅವತ್ತೇ ಅವರು ಹೇಳಬೇಕಿತ್ತು. ನಾನು ತಿದ್ದಿಕೊಳ್ಳದಿದ್ದರೆ ನನ್ನ ವಿರುದ್ಧ ಚೇಂಬರ್‌ಗೇ ದೂರಬಹುದಿತ್ತು. ಅಂದು ಇಲ್ಲದ ದೂರುಗಳನ್ನು ಇವತ್ತು ಎತ್ತುತ್ತಿರುವುದರ ಹಿಂದಿನ ಉದ್ದೇಶ ಎಲ್ಲರಿಗೂ ಗೊತ್ತು."

ನಿನ್ನೆ ಚಿತ್ರರಂಗಕ್ಕೆ ಬಂದ ಈ ಹುಡುಗನಿಗಿರುವಷ್ಟು ಬುದ್ಧಿಯೂ ನಾರಾಯಣನಿಗೆ ಇಲ್ಲ ಎಂದರೆ ಈತನನ್ನು ಭಂಡ ಅನ್ನದೇ ಬೇರೆ ಪದವಿದೆಯೇ?

■ ವರದಿಗಾರ

ಭಂಡ





ಪ್ರತಿಭೆ ಕಂಡರೆ ಅಸೂಯೆ!



ಕೊಚ್ಚೆ ಯಾರು?



"ನಾನು ಅದೆಷ್ಟೋ ಹಿರಿ ನಟರೊಂದಿಗೆ ಕೆಲಸ ಮಾಡಿದ್ದೇನೆ. ಆದರೆ ಅವರ್ಯಾರೂ ಈ ನವನಟ ನನಗೆ ಕೊಟ್ಟಷ್ಟು ಕಾಟ ಕೊಟ್ಟಿರಲಿಲ್ಲ. ಈತನೊಂದಿಗೆ ಕೆಲಸ ಮಾಡುವುದು ಕೊಚ್ಚೆಯಲ್ಲಿ ಕಾಲಿಟ್ಟಂತಿತ್ತು" ಎಂದೆಲ್ಲ ಮೊನ್ನಿನ ಸಮಾರಂಭದಲ್ಲಿ ನಾರಾಯಣ್ ರೋದಿಸಿದ್ದಾನೆ. ಆದರೆ ಈ ಮಾತು ಎಷ್ಟು ಸತ್ಯ?



ನಿಜ ಹೇಳಬೇಕೆಂದರೆ 'ಗಲಾಟೆ ಅಳಿಯಂದಿರು' ಚಿತ್ರದ ಸಮಯದಲ್ಲಿ ನಾರಾಯಣನ ಕುಟಿಲ ಬುದ್ಧಿಯಿಂದಾಗಿ ಶಿವರಾಜ್‌ಕುಮಾರ್ ಎಷ್ಟು ಕೋಪಗೊಂಡಿದ್ದರೆಂದರೆ "ಇನ್ನು ಮುಂದೆ ಎಂದಿಗೂ ಈತನೊಂದಿಗೆ ಕೆಲಸ ಮಾಡುವುದಿಲ್ಲ" ಎಂದು ಕಿಡಿಕಾರಿದ್ದರು.

ಇಂತಹದ್ದೇ ಪುರಾಣ ವಿಷ್ಣುವರ್ಧನ್‌ರವರೊಂದಿಗೂ ಪುನರಾವರ್ತನೆಗೊಂಡಿತ್ತು. ಅಂದು ವಿಷ್ಣು ಕೂಡ ಈತನಿಗೆ ಬುದ್ಧಿ ಕಲಿಸಲು ತಮ್ಮ ಪಾತ್ರಕ್ಕೆ ಡಬ್ ಮಾಡಲ್ಲ ಎಂದು ಹಠ ಹಿಡಿದಿದ್ದರು. ಉದ್ಯಮದ ಇತರರು ಮಧ್ಯೆ ಪ್ರವೇಶಿಸಿದ ನಂತರವೇ ಆ ಜಗಳ ಅಂತ್ಯಗೊಂಡಿತ್ತು.




ಇನ್ನು ಡಾ. ರಾಜ್‌ಕುಮಾರರವರಿಗೆ ಈ ನಾರಾಯಣ್ ಮಾಡಿದ ದ್ರೋಹ ಅಂತಿಂತಹದ್ದಲ್ಲ. ಹಲವಾರು ದಶಕಗಳಿಂದ ಕನ್ನಡಿಗರ ಭಾಷಾಭಿಮಾನದ ಪ್ರತೀಕದಂತಿದ್ದ, ಎಲ್ಲಾ ವಯೋಮಾನದವರ ಪ್ರೀತಿ ಗಳಿಸಿದ್ದ, ವಿಭಿನ್ನ ರೀತಿಯ ಪಾತ್ರಗಳಲ್ಲಿ ಮತ್ತು ಚಿತ್ರಗಳಲ್ಲಿ ನಟಿಸಿ ಅಭಿಮಾನಿಗಳ ಸಾಮ್ರಾಜ್ಯವನ್ನೇ ಸ್ಥಾಪಿಸಿದ್ದ ರಾಜ್‌ಕುಮಾರ್‌ರವರ ಕೊನೆ ಸಿನಿಮಾವಾಗಿ 'ಶಬ್ದವೇದಿ' ಎಂತಹ ಕಳಪೆ ಚಿತ್ರವನ್ನು ಮಾಡಿದ ಅಪಕೀರ್ತಿ ಈ ನಾರಾಯಣನದ್ದು.

ಸ್ವತಃ ರಾಜ್‌ಕುಮಾರ್‌ರವರೇ ಇದರ ಬಗ್ಗೆ ತಮ್ಮ ಮನೆಯವರ ಮುಂದೆ ದುಃಖ ತೋಡಿಕೊಂಡಿದ್ದುಂಟು. "ನಾನು ಈ ಚಿತ್ರದಲ್ಲಿ ನಟಿಸಬಾರದಿತ್ತು, ಈ ಕಳಂಕವನ್ನು ಹೋಗಲಾಡಿಸಲೆಂದು ನಾನು 'ಭಕ್ತ ಅಂಬರೀಷ' ಚಿತ್ರದಲ್ಲಿ ನಟಿಸಬೇಕು" ಎಂದು ಅದೆಷ್ಟೋ ಬಾರಿ ಹೇಳಿದ್ದರಂತೆ. ಆದರೆ ಅನಾರೋಗ್ಯ ಮತ್ತು ವಿಧಿ ನಾರಾಯಣ್ ಹಚ್ಚಿದ್ದ ಕಪ್ಪುಚುಕ್ಕೆಯನ್ನು ಅಳಿಸಲು ಬಿಡಲೇ ಇಲ್ಲ.

ಇನ್ನಷ್ಟು ಸಾಕಲ್ಲವೆ, ನಿಜವಾಗಲೂ ಕೊಚ್ಚೆ ಯಾರೆಂಬುದನ್ನು ನಿರ್ಧರಿಸಲು?!

ಪೋಲಿ ಜೋಕ್‌ಗಳ ಸಾಮ್ರಾಟ




"ನಗು ಮನುಷ್ಯನ ಆಸ್ತಿ, ಜನರನ್ನು ಯಾವಾಗಲೂ ನಗಿಸಬೇಕು" ಎಂದೆಲ್ಲ ಬೊಗಳೆ ಬಿಡುವ ನಾರಾಯಣ್‌ನ ಹಾಸ್ಯಪ್ರಜ್ಞೆ ಮಾತ್ರ ಇವತ್ತಿಗೂ ಕಕ್ಕಸು, ಟಾಯ್ಲೆಟ್ಟು ಇತ್ಯಾದಿಗಳನ್ನು ಲೆವಲ್ಲಿನಲ್ಲೇ ಇದೆ. ಈತನ ಇಂತಹ ಚೀಪ್ ಜೋಕುಗಳನ್ನು ಕೇಳಿ ಜನ ಇನ್ನೊಂದು ತುದಿಯಿಂದ ನಗುತ್ತಿದ್ದಾರಷ್ಟೇ.


ದುರಂತವೆಂದರೆ ನಾರಾಯಣ್‌ನ ಈ ಮಟ್ಟದ ಹಾಸ್ಯಪ್ರಜ್ಞೆ ಕೇವಲ ಬೆಳ್ಳಿತೆರೆಗೆ ಸೀಮಿತವಾಗಿಲ್ಲದಿರುವುದು. ಶೂಟಿಂಗ್ ಸಮಯದಲ್ಲಿ ಈತ ಬೇಕೆಂತಲೇ ನಟಿಯರ ಮುಂದೆ ಅಶ್ಲೀಲ ಜೋಕುಗಳನ್ನು ಹಾರಿಸುವ ಚಟವನ್ನೂ ಮೈಗೂಡಿಸಿಕೊಂಡಿದ್ದಾನೆ.

ಈತನ ಈ ಚಟದಿಂದಾಗಿ ಶೃತಿ, ಪ್ರೇಮಾ ತರಹದ ಸಭ್ಯ ನಟಿಯರೂ ಅಪಾರ ಮುಜುಗರವನ್ನು ಅನುಭವಿಸಿದ್ದಾರೆ. ಆದರೆ ಪುರುಷ ಪ್ರಧಾನವಾದ ಸಿನಿಮಾರಂಗದಲ್ಲಿ, ಅದರಲ್ಲೂ ಹಲವಾರು ಪ್ರಭಾವಿಗಳ ನಂಟನ್ನೂ ಹೊಂದಿರುವ ನಾರಾಯಣ್‌ನ ವಿರುದ್ಧ ದೂರು ನೀಡಲಾಗದೆ ಈತನ ಅಸಭ್ಯ ವರ್ತನೆಯನ್ನು ಸಹಿಸಿಕೊಂಡು ಸುಮ್ಮನಿದ್ದಾರೆ.

ಆದರೆ ನಾರಾಯಣ್ ಮಾತ್ರ ತಾನು ಶಿಸ್ತಿನ ಸಿಪಾಯಿ ಎಂದೆಲ್ಲ ಬೊಗಳಿಕೊಂಡು ಮೆರೆಯುತ್ತಿದ್ದಾನೆ. ಮಹಿಳೆಯರ ಮುಂದೆ ಪೋಲಿ ಜೋಕ್‌ಗಳನ್ನು ಹೇಳುವುದು ಅದೆಂತಹ ಶಿಸ್ತು!



ಕಾಂಗ್ರೆಸ್‌ಗೆ ಕಂಟಕವಾಗಿರುವ ಕರಟಕ-ದಮನಕ



ಪೂಜಾರಿ-ಮೊಯ್ಲಿ ಎಂಬ ಕರಟಕ-ದಮನಕರುಗಳ ಹಸ್ತಕ್ಷೇಪದಿಂದ ಆದ ಅವಾಂತರಗಳೇ ಕಾಂಗ್ರೆಸ್ ಸೋಲಿಗೆ ಪೀಠಿಕೆಯಿಟ್ಟದ್ದಂತೂ ಹೌದು. ಪಕ್ಷದ ಸ್ಥಳೀಯ ಕಾರ್ಯಕರ್ತರಿಗೆ ಮನ್ನಣೆ ಕೊಡದೇ, ಸ್ಥಳೀಯ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ ನೀಡದೇ ತಮ್ಮ ಭಟ್ಟಂಗಿಗಳಿಗೆ ಮತ್ತು ಜಾತಿ ಬಂಧುಗಳಿಗೆ ಟಿಕೆಟ್ ಸಿಗುವಂತೆ ನೋಡಿಕೊಂಡ ಮೊಯ್ಲಿ-ಪೂಜಾರಿಯವರ ಸರ್ವಾಧಿಕಾರಿ ಧೋರಣೆಯೇ ಕಾಂಗ್ರೆಸ್ ಸೋಲಿಗೆ ಅಂಕಿ-ಅಂಶಗಳನ್ನು ಒದಗಿಸುತ್ತಿವೆ.

ಮಂಗಳೂರು ಪೌರಾಡಳಿತದ ಇತಿಹಾಸದಲ್ಲಿ ಪುರಸಭೆಯಿಂದ ತೊಡಗಿ ಮ.ನ.ಪಾ. ತನಕ ಕಾಂಗ್ರೆಸ್ಸಿನದ್ದೇ ಸಾರ್ವಭೌಮತೆಯಿತ್ತು. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಅಲ್ಪ ಅಂತರದಲ್ಲಾದರೂ ಅಧಿಕಾರ ಹಿಡಿದೇ ತೀರುತ್ತದೆ ಎಂದೇ ಎಲ್ಲರೂ ನಂಬಿದ್ದರು. ಕಳೆದ ಬಾರಿ 60 ಸ್ಥಾನಗಳ ಪೈಕಿ ಕಾಂಗ್ರೆಸ್ 42 ಸ್ಥಾನಗಳನ್ನು ಬಾಚಿ ಸ್ಪಷ್ಟ ಬಹುಮತ ಪಡೆದಿದ್ದರೆ ಬಿಜೆಪಿ 16 ಸ್ಥಾನಗಳನ್ನು ಪಡೆಯಲಷ್ಟೇ ಶಕ್ತವಾಗಿತ್ತು. ಎರಡು ಸ್ಥಾನಗಳು ಪಕ್ಷೇತರ ಪಾಲಾಗಿದ್ದವು.

ಕಳೆದ ಐದು ವರ್ಷದಲ್ಲಿ ಮ.ನ.ಪಾ.ದಲ್ಲಿ ಬಿಜೆಪಿ, ಕಾಂಗ್ರೆಸ್ಸಿಗರು ಭ್ರಷ್ಟಾಚಾರದ ವಿಚಾರದಲ್ಲಿ ಕಾಮನ್ ಅಂಡರ್‌ಸ್ಟಾಂಡಿಂಗ್‌ನಲ್ಲಿ ನಡೆದುಕೊಂಡದ್ದು, ಬಿಜೆಪಿ ಒಂದು ವಿರೋಧ ಪಕ್ಷವಾಗಿ ಕಾಣಿಸಿಕೊಳ್ಳದೇ ಹೋದದ್ದು ಈ ಬಾರಿ ಮತ್ತೆ ಹಳೇ ಗಂಡನ ಪಾದವೇ ಗತಿ ಎನ್ನುವ ರೀತಿಯಲ್ಲಿ ಕಾಂಗ್ರೆಸ್ಸೇ ಅಧಿಕಾರ ಹಿಡಿಯುವುದು ಎಂಬುದು ರಾಜಕೀಯ ಲೆಕ್ಕಾಚಾರವಿತ್ತು. ಸಾಕಷ್ಟು ಪೂರ್ವ ತಯಾರಿಗೆ ಅವಕಾಶವಿಲ್ಲದೇ ದುತ್ತನೇ ಬಂದೆರಗಿದ ಚುನಾವಣೆ, ಮಳೆಯ ಅಡಚಣೆ, ರಮ್ಜಾನ್ ಉಪವಾಸದ ದಿನಗಳು, ಇವೆಲ್ಲಾ ಅಡೆ-ತಡೆಗಳ ನಡುವೆ ನಡೆದುಹೋದ ಚುನಾವಣೆಯಲ್ಲಿನ ಫಲಿತಾಂಶದಲ್ಲಿ ಎಲ್ಲರ ಲೆಕ್ಕಾಚಾರವನ್ನೂ ತಲೆಕೆಳಗು ಮಾಡಿ ಮಂಗಳೂರಲ್ಲಿ ಹೊಸ ಇತಿಹಾಸ ನಿರ್ಮಾಣವಾಗಿತ್ತು.

ಪ್ರಥಮ ಬಾರಿ ಬಿಜೆಪಿ ಸ್ಪಷ್ಟ ಬಹುಮತ ಪಡೆದು ಅಧಿಕಾರ ಹಿಡಿಯಿತು. ತನ್ನ ಸ್ಥಾನಗಳಲ್ಲಿ 34 ಬಿಜೆಪಿ ಏರಿಸಿಕೊಂಡರೆ 20 ಸ್ಥಾನಗಳಿಗೆ ಕಾಂಗ್ರೆಸ್ ತೃಪ್ತಿಪಡಬೇಕಾಯಿತು. ಸಿಪಿಎಂ ಒಂದು ಸ್ಥಾನ ಪಡೆದು ಖಾತೆ ತೆರೆಯಿತು. ಐದು ಮಂದಿ ಪಕ್ಷೇತರ ಅಭ್ಯರ್ಥಿಗಳು ಗೆದ್ದು ಬಂದರು. ಈ ಪೈಕಿ ಇಬ್ಬರು ಕಾಂಗ್ರೆಸ್ ಬಂಡುಕೋರ ಅಭ್ಯರ್ಥಿಗಳು ಎನ್ನುವುದು ಗಮನಾರ್ಹ ವಿಷಯ.

ಬಂಡಾಯದ ಬಿಸಿ

ಕಾಂಗ್ರೆಸ್‌ನಲ್ಲಿ ಸೋತ ಅಭ್ಯರ್ಥಿಗಳ ಅಂತರ ಬರೀ ಹತ್ತಿಪ್ಪತ್ತು ಮತಗಳಷ್ಟೇ ಆಗಿದ್ದು, ಪಕ್ಷೇತರ ಅಭ್ಯರ್ಥಿಗಳಾಗಿ ಕಾಂಗ್ರೆಸ್ ಬಂಡುಕೋರ ಅಭ್ಯರ್ಥಿಗಳು ಸ್ಪರ್ಧಿಸಿದ ಕಡೆಗಳಲ್ಲೆಲ್ಲಾ ಕಾಂಗ್ರೆಸ್ ಮಣ್ಣು ಮುಕ್ಕಿತು. ಟಿಕೆಟ್ ಹಂಚಿಕೆಯ ಸಂದರ್ಭದಲ್ಲಿ ಪೂಜಾರಿ, ಮೊಯ್ಲಿ ಬಣಗಳ ನಡುವೆ ಅಂತಹ ಪೈಪೋಟಿ ನಡೆಯದಿದ್ದರೂ, ಇವರಿಬ್ಬರು ನಾಯಕರುಗಳ ಹಸ್ತಕ್ಷೇಪದಿಂದ ಆದ ಅವಾಂತರಗಳೇ ಕಾಂಗ್ರೆಸ್ ಸೋಲಿಗೆ ಪೀಠಿಕೆಯಿಟ್ಟದ್ದಂತೂ ಹೌದು. ಪಕ್ಷದ ಸ್ಥಳೀಯ ಕಾರ್ಯಕರ್ತರಿಗೆ ಮನ್ನಣೆ ಕೊಡದೇ, ಸ್ಥಳೀಯ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ ನೀಡದೇ ತಮ್ಮ ಭಟ್ಟಂಗಿಗಳಿಗೆ ಮತ್ತು ಜಾತಿ ಬಂಧುಗಳಿಗೆ ಟಿಕೆಟ್ ಸಿಗುವಂತೆ ನೋಡಿಕೊಂಡ ಮೊಯ್ಲಿ-ಪೂಜಾರಿಯವರ ಸರ್ವಾಧಿಕಾರಿ ಧೋರಣೆಯೇ ಕಾಂಗ್ರೆಸ್ ಸೋಲಿಗೆ ಅಂಕಿ-ಅಂಶಗಳನ್ನು ಒದಗಿಸುತ್ತಿವೆ.

ಪೂಜಾರಿಯ ಮಲ್ಲಿಗೆ ಹಂಚುವ ಗಿಮಿಕ್ಕು ಈ ಸಲ ಬರೀ ಒಣ ರೋಡ್‌ಶೋ ಅಷ್ಟೇ ಆಗಿದ್ದು ಯಾವ ಪರಿಣಾಮವೂ ಮತಗಟ್ಟೆಯ ಮೇಲೆ ಬೀರಲಿಲ್ಲ. ಪೂಜಾರಿಯ ಜಾತಿಪ್ರೇಮ 15 ಬಿಲ್ಲವ ಕ್ಯಾಂಡಿಡೇಟುಗಳಿಗೆ ಟಿಕೆಟ್ ಸಿಕ್ಕದ್ದರಲ್ಲಿ ಸಾಬೀತಾಯಿತು. ಅವರ ಪೈಕಿ ಗೆದ್ದು ಬಂದದ್ದು ಮಾತ್ರ ಮೂರು ಮಂದಿ. ಜನಾರ್ದನ್ ಪೂಜಾರಿಯವರ ಪ್ರಭಾವ ಮಂಗಳೂರು ಮ.ನ.ಪಾ.ದಲ್ಲಿ ಎಷ್ಟರಮಟ್ಟಿಗೆ ಉಳಿದಿದೆ ಎನ್ನುವುದನ್ನು ಇನ್ನೂ ಸ್ಪಷ್ಟವಾಗಿ ಉದಾಹರಿಸುವುದಾದರೆ ಸುರತ್ಕಲ್ ಕ್ಷೇತ್ರದ ಪಣಂಬೂರು ವಾರ್ಡ್‌ನ ಫಲಿತಾಂಶವನ್ನು ವಿಶ್ಲೇಷಿಸಿದರೆ ಸಾಕು.

ಅಲ್ಲಿ ಸುರತ್ಕಲ್ ಬ್ಲಾಕ್ ಕಾಂಗ್ರೆಸ್‌ನ ಮತ್ತು ಕಾರ್ಯಕರ್ತರ ಒಮ್ಮತದ ಅಭಿಪ್ರಾಯದಂತೆ ಸಂತೋಷ್‌ಕುಮಾರ್ ಕಾಂಗ್ರೆಸ್ ಅಭ್ಯರ್ಥಿಯಾಗಬೇಕಿತ್ತು. ಹುಟ್ಟು ಕಾಂಗ್ರೆಸ್ಸಿಗನಾಗಿದ್ದು, ಸ್ಥಳೀಯರೂ ಆದ ಸಂತೋಷ್‌ಕುಮಾರ್ ಎಂಬ ಮೊಗವೀರ ಯುವಕ ಅಭ್ಯರ್ಥಿಯಾಗಿದ್ದರೆ, ಈತನ ಪ್ರಭಾವದಿಂದ ಅಕ್ಕ-ಪಕ್ಕ ಇನ್ನೂ ಮುರ್‍ನಾಲ್ಕು ಸೀಟುಗಳು ಕಾಂಗ್ರೆಸ್‌ಗೆ ಅಯಾಚಿತವಾಗಿ ಲಭಿಸುವ ಸಾಧ್ಯತೆಯೂ ಇತ್ತು. ಆದರೆ ಕಾರ್ಯಕರ್ತರಿರಲಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಜಯಕುಮಾರ್ ಶೆಟ್ಟಿಯ ಮಾತಿಗೂ ಮಣೆ ಹಾಕದ ಜನಾರ್ದನ್ ಪೂಜಾರಿ ಅಲ್ಲಿ ಕಮಲಾಕ್ಷ ಸಾಲ್ಯಾನ್‌ಗೆ ಟಿಕೆಟ್ ಕೊಟ್ಟರು.

ಈ ಕಮಲಾಕ್ಷ ಸಾಲ್ಯಾನ್ ಈ ಹಿಂದೆ ಬೋಳಾರದಿಂದ ಚುನಾಯಿತನಾಗಿದ್ದ ಮಾಜಿ ಕಾರ್ಪೋರೇಟರ್, ಭ್ರಷ್ಟಾಚಾರದ ಆರೋಪದಲ್ಲಿ ನಂಬರ್ ಒನ್ ಎನಿಸಿರುವ ಈತನ ಒಂದೇ ಒಂದು ಅರ್ಹತೆಯೇನೆಂದರೆ ಪೂಜಾರಿಯ ಭಟ್ಟಂಗಿತನ. ಬೋಳಾರದಲ್ಲಿ ಮೀಸಲಾತಿಯಿಂದ ಟಿಕೆಟ್ ತಪ್ಪಿದನಂತರ ಕಳ್ಳಿಗೆ ತಾರನಾಥ ಶೆಟ್ಟಿಯೆಂಬ ಕಂತ್ರಿಯ ಮೂಲಕ 'ಪೂಜಾರಿ'ಯ ಕಿವಿಯೂದಿಸಿ ಪಣಂಬೂರಿನಲ್ಲಿ ಈತ ಟಿಕೆಟ್ ಗಿಟ್ಟಿಸಿದಾಗಲೇ ಇಡೀ ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನೆಲಕಚ್ಚುವುದು ನಿರ್ಧಾರವಾಗಿತ್ತು. ಪೂಜಾರಿಯ ಮೇಲೆ ಆಕ್ರೋಶಿತರಾದ ಮೊಗವೀರರು ಮಲ್ಲಿಗೆ ಹಂಚಲು ಬಂದ ಜನಾರ್ದನ್ ಪೂಜಾರಿಯನ್ನು ಒದ್ದೋಡಿಸಿದಾಗಲೇ ಅಲ್ಲಿಯ ರಿಸಲ್ಟ್ ಏನೆಂಬುದು ಗೊತ್ತಾಗಿ ಬಿಟ್ಟಿತ್ತು.

ಮಂಗಳೂರು

ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಸಂತೋಷ್ ಕುಮಾರ್ ಅಲ್ಲಿ ಗೆದ್ದದ್ದರಲ್ಲಿ ಮತದಾರರ ಅನುಕಂಪ ಮತ್ತು ಮೊಗವೀರರ ಪಕ್ಷಾತೀತ ಬೆಂಬಲ ಕೆಲಸ ಮಾಡಿತ್ತು. ಜನಾರ್ದನ ಪೂಜಾರಿಯ ನೆಚ್ಚಿನ ಭಟ್ಟಂಗಿ ಕಮಲಾಕ್ಷ ಸಾಲ್ಯಾನ್ 300 ಮತಗಳನ್ನು ಪಡೆದು ಠೇವಣಿ ಕಳೆದುಕೊಳ್ಳಬೇಕಾಯಿತು.

ಬಿಜೆಪಿಗೆ ಈ ಬಾರಿಯ ಬಹುಮತಗಳನ್ನು ತಂದುಕೊಟ್ಟಿರುವುದರಲ್ಲಿ ಸಿಂಹಪಾಲೇನಿದ್ದರೂ ಸುರತ್ಕಲ್ ಕ್ಷೇತ್ರದ್ದು, ಆದರಲ್ಲೂ ಅಲ್ಲಿನ ಶಾಸಕ ಕೃಷ್ಣ ಪಾಲೇಮಾರ್‌ರವರ ವರ್ಚಸ್ಸು ಕೂಡಾ ಕಾರಣವಾಗಿತ್ತು. ಒಟ್ಟು 28 ವಾರ್ಡ್‌ಗಳ ಪೈಕಿ ಈ ಹಿಂದೆ ಏಳು ಸ್ಥಾನಗಳನ್ನಷ್ಟೇ ಪಡೆದಿದ್ದ ಬಿಜೆಪಿ ಈ ಬಾರಿ 17 ಕ್ಕೆ ತನ್ನ ಸ್ಥಾನವನ್ನು ಏರಿಸಿಕೊಂಡಿದೆ. ಅಂದರೆ ಒಟ್ಟು 34 ರಲ್ಲಿ 50% ಸ್ಥಾನಗಳು ಸುರತ್ಕಲ್ ಕ್ಷೇತ್ರದಿಂದಲೇ ಬಿಜೆಪಿ ಪಡೆದಿದೆ.

ಪೂಜಾರಿಯವರ ಜಾತಿಪ್ರೇಮಕ್ಕೆ ಇದೊಂದು ಉದಾಹರಣೆಯಾದರೆ ಮೊಯ್ಲಿ ತಾನೇನು ಕಮ್ಮಿಯಿಲ್ಲ ಎಂಬುದನ್ನು ತೋರಿಸಲು ತನ್ನ ಜಾತಿಯವರಿಗೆ ಮೂರು ಟಿಕೆಟ್‌ಗಳನ್ನು ಕಲ್ಪಿಸಿದರು. ಮೊಯ್ಲಿಯ ಜಾತಿಪ್ರೇಮದ ದೆಸೆಯಿಂದ ಕಂಬಳ ವಾರ್ಡ್‌ನಲ್ಲಿ ಸ್ಪರ್ಧಿಸಿದ - ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯರೂ ಅಲ್ಲದ - ದೇವದಾಸ್ ಠೇವಣಿ ಕಳೆದುಕೊಂಡು ಹೀನಾಯವಾಗಿ ಸೋಲುಂಡರು. ಮತದಾರರೇನೂ ದಡ್ಡರಲ್ಲ ಎನ್ನುವುದನ್ನು ಈ ಫಲಿತಾಂಶ ತೋರಿಸಿಕೊಟ್ಟಿತು.

ರಮಾನಾಥ್ ರೈ ಡಿಸಿಸಿ ಅಧ್ಯಕ್ಷರಾದ ಬೆನ್ನಿಗೇ ನಡೆದ ಈ ಚುನಾವಣೆ ಒಂದು ರೀತಿಯಲ್ಲಿ ರೈ ಸತ್ವ ಪರೀಕ್ಷೆಯೂ ಆಗಿತ್ತು. ಆದರೆ ಸಾಕಷ್ಟು ಹಗ್ಗ ಜಗ್ಗಾಟದ ನಡುವೆ ಕೊನೆಗೂ ಡಿಸಿಸಿ ಅಧ್ಯಕ್ಷ ಎನಿಸಿಕೊಂಡ ರಮಾನಾಥ್ ರೈ, ಪೂಜಾರಿಯ ರಬ್ಬರ್ ಸ್ಟಾಂಪ್ ಅಷ್ಟೇ ಆಗಿದ್ದರು. ಮಂಗಳೂರಿನ ಪುರಸಭಾ ಸದಸ್ಯನಾಗಿ ರಾಜಕೀಯ ಜೀವನ ಆರಂಭಿಸಿದ್ದ ಬ್ಲೇಸಿ ತಾವು ಎಂಎಲ್‌ಸಿ ಆಗುವತನಕ ನಾಲ್ಕು ಮ.ನ.ಪಾ. ಎಲೆಕ್ಷನ್‌ನ ಉಸ್ತುವಾರಿ ವಹಿಸಿಕೊಂಡು ಮುನ್ನಡೆಸಿದ್ದರು. ಆದರೆ ಸ್ಥಳೀಯ ಲಿಕ್ಕರ್ ಆದ್ಮಿಯೋರ್ವನ ಫ್ಲಾಟ್‌ನಲ್ಲಿ ಪೂಜಾರಿ, ಮೊಯ್ಲಿ, ರಮಾನಾಥ್ ರೈ, ವಿಜಯಕುಮಾರ್ ಶೆಟ್ಟಿ ಮತ್ತು ಯು.ಟಿ. ಖಾದರ್ ಗುಪ್ತವಾಗಿ ಸೇರಿ ಟಿಕೆಟ್ ಹಂಚಿಕೆ ನಡೆಸಿದರು. ಹಿರಿಯ ಕಾಂಗ್ರೆಸ್ಸಿಗನಾಗಿ ಮಂಗಳೂರಿನ ನಾಡಿಮಿಡಿತ ಬಲ್ಲ ಬ್ಲೇಸಿಯನ್ನು ಸೌಜನ್ಯಕ್ಕಾದರೂ ಒಂದು ಮಾತು ಕೇಳಲು ಇವರ್‍ಯಾರೂ ಮನಸ್ಸು ಮಾಡಲಿಲ್ಲ. ಕಳಂಕ ಹೊತ್ತವರಿಗೆ, ಭ್ರಷ್ಟರಿಗೆ ಈ ಬಾರಿ ಟಿಕೆಟ್ ಇಲ್ಲ ಎಂದು ಹೇಳಿದ ಮಾಜಿ ಮೇಯರ್ ದಿವಾಕರ್ ಮತ್ತು ಪುರಂದರದಾಸ್ ಕೂಳೂರು, ಕಾಂಗ್ರೆಸ್‌ಗೊಂದು ಘನತೆ ತಂದುಕೊಡುತ್ತಿದ್ದ ವಿಶ್ವನಾಥ್ ಮತ್ತು ಪದ್ಮನಾಭ ಅಮೀನ್‌ನಂತಹವರಿಗೆ ಟಿಕೆಟ್ ತಪ್ಪಿಸಿದರು. ಅದೇ ಹೊತ್ತಿಗೆ ತಮ್ಮ ಭಟ್ಟಂಗಿಗಳಾದ ಮಾತ್ರಕ್ಕೆ ಭ್ರಷ್ಟಾಚಾರಿಗಳಾದ ಮಾಜಿ ಮೇಯರ್ ಅಶ್ರಫ್, ಶಶಿಧರ್ ಹೆಗ್ಡೆ, ಕಮಲಾಕ್ಷ ಸಲ್ಯಾನ್‌ನಂಥವರಿಗೆ ಟಿಕೇಟ್ ಕೊಟ್ಟರು.

ವಿಶ್ವನಾಥರಿಗೆ ಟಿಕೆಟ್ ಕೊಡದ್ದಕ್ಕೆ ಕಂಕನಾಡಿ, ಬಚಾಲ್, ಅಳಪೆ ಮೂರು ಸೀಟು ಬಿಜೆಪಿ ಪಾಲಾಯಿತು. ಪ್ರಭಾಕರ ಯೆಯ್ಯಾಡಿ ಎಂಬ ಜುಜುಬಿ ಕಂಟ್ರಾಕ್ಟರ್‌ನ ಹಿತಾಸಕ್ತಿಯಿಂದ ಉಮೇಶ್ ಎಂಬಾತನಿಗೆ ಟಿಕೆಟ್ ಕೊಟ್ಟದ್ದು, ಚಿಂತಾ ಬೊರೊಮಿಯಾ ಎಂಬಾಕೆಗೆ ಪೇಮೆಂಟ್ ಸೀಟು, ಒಂದಷ್ಟು ಧೈರ್ಯದಿಂದ ಮಾತಾಡಿ ಗಮನ ಸೆಳೆಯುತ್ತಿದ್ದ ಮಹಾಬಲಮಾರ್ಲರನ್ನು ಸೋಲಿಸಲೆಂದೇ ಶಂಕರಭಟ್ಟರನ್ನು ಅವರ ಎದುರು ಕಣಕ್ಕಿಳಿಸಿದ್ದು, ರಾಜ್ಯ ವೀಕ್ಷಕರಾದ ಪುಟ್ಟೇಗೌಡ ಮತ್ತು ಡಿ.ಟಿ. ಜಯಚಂದ್ರರು ಬಂದ ದಾರಿಗೆ ಸುಂಕವಿಲ್ಲದಂತೆ ಅರ್ಧದಾರಿಯಲ್ಲೇ ವಾಪಸ್ಸಾದರು. ಈ ಎಲ್ಲ ಅಪರಾತಪರಾಗಳ ನಡುವೆ ಪೂಜಾರಿ-ಮೊಯ್ಲಿರವರ ದರಬಾರಿನಲ್ಲಿ ಟಿಕೆಟ್ ಹಂಚಿಕೆ ಎನ್ನುವುದು ಬೇಕಾಬಿಟ್ಟಿ ನಡೆದಿತ್ತು. ಪರಿಣಾಮ 14 ಮಂದಿ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯರಲ್ಲದವರೂ ಅಭ್ಯರ್ಥಿಗಳಾದರೆ ಕಾಂಗ್ರೆಸ್‌ಗೆ ಮುಳುಗು ನೀರು ತರಲು 24 ಮಂದಿ ಕಾಂಗ್ರೆಸ್ ಬಂಡುಕೋರರು ಸ್ಪರ್ಧಿಸಿದ್ದರು.

ಈ ನಡುವೆ ಮೆಚ್ಚಬೇಕಾದ ಒಂದು ಸಂಗತಿಯೇನೆಂದರೆ ಸಾಮಾನ್ಯ ಸೀಟಿನಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ದಲಿತ ಮಹಿಳೆಯರಾದ ವಿಜಯಲಕ್ಷ್ಮೀ ಮತ್ತು ಅಪ್ಪಿಯನ್ನು ಮತದಾರರು ಆಶೀರ್ವದಿಸಿ ಗೆಲ್ಲಿಸಿದ್ದು. ಇದು ಕಾಂಗ್ರೆಸ್‌ನ ಮಹಾನ್ ನಾಯಕರಿಗೆ ಇನ್ನು ಮುಂದಾದರೂ ಜಾತಿ ರಾಜಕೀಯ ಮಾಡಬೇಡಿ ಎಂಬ ಎಚ್ಚರಿಕೆಯ ಕರೆಗಂಟೆಯಂತಿದೆ.


ಕೊನೆ ಕಿಡಿ

ಮತಯಾಚನೆ ಹೆಸರಲ್ಲಿ ಮಲ್ಲಿಗೆ ಹಂಚುವುದಕ್ಕೆ ಮೊದಲು ಜನಾರ್ದನ್ ಪೂಜಾರಿ ಕಾರ್ಯಕರ್ತರ ಸಭೆಗಳಲ್ಲಿ ರಸಪ್ರಶ್ನೆಗಳನ್ನು ಕೇಳಿ ಸರಿಯುತ್ತರ ನೀಡಿದವರಿಗೆ ತಕ್ಷಣವೇ ನಗದು ಬಹುಮಾನ ನೀಡುವ ಡ್ರಾಮಾ ನಡೆಸುತ್ತಿದ್ದರು. ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷ ಯಾವುದು? ಇಂದಿರಾ ಗಾಂಧಿಯ ಅಪ್ಪ ಯಾರು? ಅಂತೆಲ್ಲಾ ಬಾಲಿಶ ಪ್ರಶ್ನೆಗಳನ್ನು ಕೇಳಿ ಜೋಕರ್ ಆಗುತ್ತಿದ್ದ ಪೂಜಾರಿ ಮತ್ತದೇ ರಸಪ್ರಶ್ನೆ ಕಾರ್ಯಕ್ರಮಕ್ಕೆ ಇಳಿದು "ಮಂಗಳೂರಿನಲ್ಲಿ ಕಾಂಗ್ರೆಸ್ ಸೋಲಲು ಕಾರಣ ಯಾರು?" ಎಂದು ಕೇಳಿದ್ದೇ ಆದರೆ ಪೂಜಾರಿ-ಮೊಯ್ಲಿ ಎಂಬ ಕರಟಕ-ದಮನಕರು ಎಂಬ ಉತ್ತರ ಪ್ರೇಕ್ಷಕರ ಗ್ಯಾಲರಿಯಿಂದ ಥಟ್ಟನೆ ಬರುವುದರಲ್ಲಿ ಈಗ ಅನುಮಾನವೇ ಉಳಿದಿಲ್ಲ!

■ ಪ್ರಕಾಶ್ ಪಿಂಟೋ

ರೈಗಿದು ಮುಖಭಂಗ 1

ಮಂಗಳೂರು ಮ.ನ.ಪಾ.ದ ಸೋಲು ಡಿಸಿಸಿ ಸಾರಥ್ಯ ವಹಿಸಿದ ರಮಾನಾಥ್ ರೈಗೆ ಹೇಗೆ ಮುಖಭಂಗ ತಂದೊಡ್ಡಿದೆಯೋ ಜಿ.ಪಂ.ನಲ್ಲಿ ಜೆಡಿಎಸ್‌ನ ಸುಚರಿತಾ ಶೆಟ್ಟಿ ಅಧ್ಯಕ್ಷರಾದ ರೀತಿ ಕೂಡಾ ಕಸಿವಿಸಿಗೆ ಕಾರಣ ಮಾಡಿದೆ. ಈ ಹಿಂದೆ ಜೆಡಿಎಸ್‌ನ ಬೆಂಬಲದೊಂದಿಗೆ ಕಾಂಗ್ರೆಸ್‌ನ ಮಮತಾ ಗಟ್ಟಿ ಅಧ್ಯಕ್ಷೆಯಾಗಿದ್ದಾಗ ಗಟ್ಟಿ ವಿರುದ್ಧ ಬಂಡೆದ್ದು ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳುವಲ್ಲಿ ಪ್ರಧಾನ ಪಾತ್ರ ವಹಿಸಿದ್ದು ಜೆಡಿಎಸ್‌ನ ಅಜೀಜ್ ಮಲಾರ್. ಅನಂತರ ಬಿಜೆಪಿ, ಜೆಡಿಎಸ್ ಮೈತ್ರಿಯಾಗಿ ಜೆಡಿಎಸ್‌ನ ರಾಜಶ್ರೀ ಹೆಗ್ಡೆ ಉಪಾಧ್ಯಕ್ಷೆಯಾದದ್ದು ಹಳೆಯ ಮಾತು. ಇದೀಗ ಮತ್ತೆ ಅಜೀಜ್ ಮಲಾರ್ ಕಾಂಗ್ರೆಸ್‌ನ ಬೆಂಬಲದಿಂದ ಅಧ್ಯಕ್ಷನಾಗಿ ಜಿ.ಪಂ. ಅನ್ನು ಕಾಂಗ್ರೆಸ್ ತೆಕ್ಕೆಗೆ ಸೆಳೆಯುವ ಹುನ್ನಾರ ನಡೆದಿತ್ತು. ಆದರೆ ಹಿಂದೊಮ್ಮೆ ಪಕ್ಷಕ್ಕೆ ದೋಖಾ ಮಾಡಿದ ಮಲಾರ್‌ನನ್ನು ಕಾಂಗ್ರೆಸ್‌ನ ಕೆಲ ಸದಸ್ಯರು ಒಪ್ಪಿಕೊಳ್ಳಲು ತಯಾರಿರಲಿಲ್ಲ. ಕಾಂಗ್ರೆಸ್‌ನಿಂದ ಚಂದ್ರಶೇಖರ್ ಕಾಮತ್ ಅಧಿಕೃತ ಅಭ್ಯರ್ಥಿಯಾಗಿದ್ದರು. ಆದರೆ ಅವರನ್ನು ಕೈಬಿಟ್ಟು ಪಕ್ಷದ ಹೈಕಮಾಂಡ್ ಅಜೀಜ್ ಮಲಾರ್ ಕಡೆ ವಾಲಿಸಿದ್ದು ಕಾಂಗ್ರೆಸ್‌ನ ಸಂತೋಷ್ ಭಂಡಾರಿ. ಆದೂ ರಮಾನಾಥ್ ರೈಯ ಬಂಟ್ವಾಳದ ಜಿ.ಪಂ. ಸದಸ್ಯ. ಜೆಡಿಎಸ್‌ನ ಸುಚರಿತ ಶೆಟ್ಟಿಗೆ ಬೆಂಬಲ ನೀಡಿ ಕಿಂಗ್‌ಮೇಕರ್ ಆದದ್ದು ರಮಾನಾಥ್ ರೈ ಸಹಿಸಿಕೊಳ್ಳುವ ವಿಚಾರವಲ್ಲ. ಆದರೀಗ ರೈಯ ವರ್ಚಸ್ಸಿಗೆ ಕಪ್ಪುಚುಕ್ಕೆಯಂತೆ, ರೈ ಮಂತ್ರಿಯಾಗಿದ್ದಾಗ ಅವರಿಗೆ ಅಂಟಿಕೊಂಡೇ ಇರುತ್ತಿದ್ದ ಗುರುಪುರದ ಮಜೀದ್ ಎಂಬ ನಾಲಾಯಕ್ ಆದ್ಮಿ ಬಿಜೆಪಿಯವರ ಬೆಂಬಲ ಪಡೆದು ಪಂಚಾಯತ್ ಅಧ್ಯಕ್ಷನಾದದ್ದು ರೈಗೆ ನುಂಗಲಾರದ ಬಿಸಿ ತುಪ್ಪವೇ ಸರಿ!



ಶಾಸಕ ದೊಡ್ಡನಗೌಡ-ತಹಶೀಲ್ದಾರ್ ಸಿದ್ದಪ್ಪ


ಹುನಗುಂದದ ಖದೀಮ ಕಳ್ಳರು

ಬಾಗಲಕೋಟೆ

ಒಬ್ಬ ಶಾಸಕ, ಇನ್ನೊಬ್ಬ ತಹಶೀಲ್ದಾರ್. ಇಬ್ಬರೂ ಕೂಡೇ ಹಗಲು ದರೋಡೆಯ ಜಂಟಿ ಕಾರ್ಯಾಚರಣೆ ಚಾಲೂ ಮಾಡಿಬಿಟ್ಟರೆ ಜನರನ್ನು ಬಚಾವು ಮಾಡುವ ದೇವರು ಯಾರು?

ಹುನಗುಂದದಲ್ಲಿ ಈಗ ನಡೆದಿರುವುದು ಇದೇನೆ!

ಹಾಲಿ ಬಿಜೆಪಿ ಶಾಸಕ ದೊಡ್ಡನಗೌಡ ಪಾಟೀಲ ಮತ್ತವನ ಚೇಲಾ ತಹಶೀಲ್ದಾರ್ ಕೆ.ಸಿ. ಸಿದ್ದಪ್ಪ ಈಗ ಫುಲ್‌ಟೈಂ ದಾಬರಿ ಕೆಲಸ ನಡೆಸುತ್ತಾ ಹುನಗುಂದದ ಜನರ ಪಾಲಿಗೆ ಮಾರೀಚ-ಸುಬಾಹು ಆಗಿಹೋಗಿದ್ದಾರೆ. ಇವರಿಬ್ಬರ ಬಕಾಸುರ ಹಸಿವೆಗೆ ತಾಲ್ಲೂಕಿನ ಗ್ರಾನೈಟ್, ಮರಳು, ವರ್ಗಾ ದಂಧೆಗಳೆಲ್ಲಾ ಬಳಕೆಯಾಗುತ್ತಿವೆ. ಅಷ್ಟೇ ಅಲ್ಲ, ಈ ಸಿದ್ದಪ್ಪ ಎಂತಹ ತಿಂಡಿಪೋತನೆಂದರೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅವರ ಗ್ರಾಮ ವಾಸ್ತವ್ಯಕ್ಕೆಂದು ಹತ್ತಿರತ್ತಿರ 50 ಲಕ್ಷ ರೂಪಾಯಿ ವಸೂಲಿ ಮಾಡಿ ಜೇಬು ತುಂಬಿಸಿಕೊಂಡಿದ್ದಾನೆ. ಹೀಗೆ ಕೈಯಲ್ಲಿ ಕಾಸು ಓಡಾಡುತ್ತಿದ್ದರೆ ಸ್ವಲ್ಪ ಶೋಕೀನೂ ಮಾಡದಿದ್ದರೆ ಹೇಗೆ? ಹಾಗಾಗಿ ಸಿದ್ದಪ್ಪನು ಇಳಕಲ್‌ನ ವಿಧವೆ ಸ್ತ್ರೀಯೊಬ್ಬಳನ್ನು ವಿಶೇಷವಾಗಿ ಸಲಹುತ್ತಾ ಆನಂದದಿಂದ ಕಾಲಹರಣ ಮಾಡುತ್ತಿದ್ದಾನೆ. ಸಿದ್ದಪ್ಪನಿಗೆ ಈಕೆಯ ಪರಿಚಯ ಮಾಡಿಸಿ ಪುಣ್ಯ ಕಟ್ಟಿಕೊಂಡಿರುವುದು ಪಿ.ಎಂ. ಮಠಪತಿ ಎಂಬ ಉಡಾಳ. ಇವನ ಕೆಲಸ ಕರಡಿ ಗ್ರಾಮದ ಸರ್ಕಲ್ಲೇ ಆದರೂ ಇರುವುದು ಮಾತ್ರ ಇಳಕಲ್‌ನ ಸರ್ಕಾರಿ ಬಿಲ್ಡಿಂಗ್‌ನಲ್ಲಿ. ತಹಶೀಲ್ದಾರ್ ಸಿದ್ದಪ್ಪನಿಗೆ ಈ ಮಠಪತಿ ಚೇಲಾ ಆಗಿದ್ದರೆ ಶಾಸಕ ದೊಡ್ಡನಗೌಡ ಪಾಟೀಲನಿಗೆ ಮಹಾಂತೇಶ ಅರುಣಶಿ ಎಂಬ ಇನ್ನೊಬ್ಬ ಚೇಲಾ ಇದ್ದಾನೆ. ಸರ್ಕಾರಿ ಶಾಲಾ ಶಿಕ್ಷಕನಾಗಿರುವ ಈ ಮಹಾಂತೇಶ ಈಗ ಎಷ್ಟು ತಾಕತ್ತು ಬೆಳೆಸಿಕೊಂಡಿದ್ದಾನೆಂದರೆ ಅವನ ಮಾತಿಗೆ ತಲೆಬಾಗದವರನ್ನೆಲ್ಲಾ ನೀರು ನೆರಳಿಲ್ಲದ ಜಾಗಕ್ಕೆ ವರ್ಗಾ ಮಾಡಿಸುತ್ತಿದ್ದಾನೆ.



ದೊಡ್ಡನಗೌಡ ಪಾಟೀಲ್

ಈ ಶಾಸಕ-ತಹಶೀಲ್ದಾರ್‌ಗಳೆಂಬ ಖದೀಮ ಕಳ್ಳರು ಮತ್ತವರ ಚೇಲಾಗಳಾದ ಮಹಾಂತೇಶ-ಮಠಪತಿಗಳೆಂಬ ಕಳ್ಳ-ಮಳ್ಳರಿಂದ ಇಡೀ ಹುನಗುಂದ ಗಬ್ಬೆದ್ದು ಹೋಗಿದೆ.

ಬಕಾಸುರ ಬಿಜೆಪಿ ದೊಡ್ಡನಗೌಡ

ಕಾಶಪ್ಪನವರ್‌ನ ಉಡಾಫೆ, ನಡವಳಿಕೆಗಳಿಂದ ಬೇಸತ್ತಿದ್ದ ಹುನಗುಂದದ ಜನ 2004 ರ ಎಲೆಕ್ಷನ್‌ನಲ್ಲಿ ಬಿಜೆಪಿಯ ದೊಡ್ಡನಗೌಡ ಪಾಟೀಲನಿಗೆ ಓಟು ಹಾಕಿ ಗೆಲ್ಲಿಸಿದರು. ಅಕ್ರಮ ಗಣಿಗಾರಿಕೆ, ಗ್ರಾನೈಟ್ ದಂಧೆಗಳಲ್ಲಿ ಕೋಟಿಗಟ್ಟಲೆ ಲೂಟಿ ಹೊಡೆಯುತ್ತಿದ್ದ ದೊಡ್ಡನಗೌಡನ ಪ್ರತಿಭೆ ಹಾಗೂ ದೇಶಭಕ್ತಿಯನ್ನು ಗಮನಿಸಿಯೇ ಬಿಜೆಪಿಯ ಅನಂತ್‌ಕುಮಾರ್ ಇವನಿಗೆ ಟಿಕೆಟ್ ಕೊಡಿಸಿದ್ದರು. ಕಾಶಪ್ಪನವರ್ ವಿರೋಧಿ ಅಲೆಯಲ್ಲಿ ಹೇಗೋ ಗೆದ್ದು ದಡ ಸೇರಿದ ದೊಡ್ಡನಗೌಡ ತಾನು ಶಾಸಕನಾದ ಕೂಡಲೇ ತೋಳು ಮಡಚಿಕೊಂಡು ವಸೂಲಿ ಭೋಜನಕ್ಕೆ ಕುಳಿತುಬಿಟ್ಟ. ಆಯಕಟ್ಟಿನ ಜಾಗಗಳಿಗೆಲ್ಲಾ ತನ್ನ ಚೇಲಾಗಳನ್ನು ಕರೆತಂದು ಕೂರಿಸಿಬಿಟ್ಟ. ಚೆಡ್ಡಿಗಳೆಲ್ಲಾ ದೇಶಸೇವೆ, ಹಿಂದೂಧರ್ಮ ವನ್ನೆಲ್ಲಾ ಬದಿಗಿಟ್ಟು, ರಾತ್ರೋರಾತ್ರಿ ಕಂಟ್ರಾಕ್ಟರ್‌ಗಳಾಗಿ ಬದಲಾದರು. ದೊಡ್ಡನಗೌಡನ ಅಳಿಯಂದಿರು, ಸಂಬಂಧಿಕರು ಟ್ರಾನ್ಸ್‌ಫರ್ ದಂಧೆಗಿಳಿದರು. ಈ ಪಟಾಲಂ ನಡುವೆಯೇ ಬೆಂಗಳೂರಿನಲ್ಲಿ ಬಿದ್ದಿದ್ದ ಸಿದ್ದಪ್ಪ ತಹಶೀಲ್ದಾರ್ ಆಗಿ ಹುನಗುಂದಕ್ಕೆ ಬಂದು ವಕ್ಕರಿಸಿಕೊಂಡಿದ್ದು, ಈ ಸಿದ್ದಪ್ಪನ ಮೂಲಕ ಶಾಸಕ ಮತ್ತವನ ಭಂಟರು ತಮ್ಮೆಲ್ಲಾ ಅಕ್ರಮ ಕೆಲಸಗಳಿಗೂ ಕಾನೂನಿನ ಮುದ್ರೆ ಒತ್ತಿಸಿಕೊಳ್ಳುತ್ತಿದ್ದಾರೆ. ಶಾಸಕನ ಚೇಲಾ ಸಿದ್ದು ಬಂಡಿಯ ಅಕ್ರಮ ಗಣಿಗಾರಿಕೆ ಈಗ ಸಲೀಸಾಗಿರುವುದು ಇದಕ್ಕೊಂದು ಸ್ಯಾಂಪಲ್ ಮಾತ್ರ. ದೊಡ್ಡನಗೌಡನ ಅಳಿಯ ಉಮೇಶ್ ಪಾಟೀಲ ಸಹ ಹಫ್ತಾ ವಸೂಲಿ, ಲಂಚ ತಿನ್ನು ಕೆಲಸ ಕೊಡಿಸು ಎಂಬ 420 ದಂಧೆಗಳನ್ನು ಸೀರು ಕುಡಿದಷ್ಟು ಸಲೀಸಾಗಿ ನಡೆಸುತ್ತಿದ್ದಾನೆ.

ಶಾಸಕನ ಚೇಲಾ ಮಹಾಂತೇಶ ಅರುಣಾಶಿ ಇವನಿಗೆ ಮಾರ್ಗದರ್ಶಕನಾಗಿದ್ದಾನೆ. ಲಿಂಗಸೂರು ತಾಲ್ಲೂಕಿನ ಲಕ್ಕಹಾಳದಲ್ಲಿ ಕನ್ನಡ ಶಾಲಾ ಶಿಕ್ಷಕನಾಗಿರುವ ಮಹಾಂತೇಶ ಶಾಲೆಗೆ ಹೋಗಿ ಪಾಠ ಮಾಡಿದ್ದನ್ನು ಯಾರೂ ನೋಡಿಲ್ಲ. ದಿನ ಬೆಳಗಾದರೆ ತಾನು ಶಾಸಕರ ಪಿ.ಎ. ಎಂದು ಹೇಳಿಕೊಂಡು ಸರ್ಕಾರಿ ಅಧಿಕಾರಿಗಳ ಹತ್ತಿರ ಹಫ್ತಾ ವಸೂಲಿಗೆ ಹೊರಡುವುದೇ ಮಹಾಂತೇಶನ ಕೆಲಸ.

ಈ ಮಹಾಂತೇಶ ಲಂಚದ ಹಡಬೆ ದುಡ್ಡು ತಿಂದು ಎಷ್ಟು ಕೊಬ್ಬಿದ್ದಾನೆಂದರೆ ತನಗೆ ಎದುರಾಡಿದರೆಂದು ಆರು ಶಿಕ್ಷಕ ರನ್ನು ಕಾರವಾರದ ಜೊಯಿಡಾಗೆ ವರ್ಗಾ ಮಾಡಿಸಿದ್ದಾನೆ. ಕೆಎಸ್‌ಆರ್‌ಟಿಸಿಯ ಕಂಡಕ್ಟರ್- ಡ್ರೈವರ್ ಗಳಾದ ಹುಲ್ಲಳ್ಳಿ ಕುಟುಂಬದವರನ್ನು ಹಾವೇರಿ, ಶಿವಮೊಗ್ಗೆಗೆ ಎತ್ತಂಗಡಿ ಮಾಡಿಸಿದ್ದಾನೆ. ಇಷ್ಟು ಸಾಲದೆಂಬಂತೆ ಏಳು ಪೊಲೀಸರ ಮೇಲೂ ನಾನಾ ರೀತಿಯ ಆರೋಪ ಮಾಡಿ ಕಿರುಕುಳ ಕೊಡುತ್ತಿದ್ದಾನೆ. ಇವರೆಲ್ಲಾ ಪಂಚಮಸಾಲಿ ಲಿಂಗಾಯತರಾಗಿದ್ದು ಮಾಜಿ ಶಾಸಕ ಕಾಶಪ್ಪನವರ್‌ಗೆ ಹತ್ತಿರದವರೆಂದು ಹೀಗೆ ಕಿರುಕುಳ ನೀಡಲಾಗುತ್ತಿದೆ.

ಈ ಉಮೇಶ್ ಪಾಟೀಲ ಹಾಗೂ ಮಹಾಂತೇಶ್ ಸೇರಿಕೊಂಡು ಅಂಗನವಾಡಿ ಶಿಕ್ಷಕಿಯರ ನೇಮಕಾತಿಯಲ್ಲಿ ತಲೆ ಹಾಕಿ ತಲಾ 50 ರಿಂದ 75 ಸಾವಿರ ಲಂಚ ಕೊಟ್ಟವರಿಗೆ ಕೆಲಸ ಕೊಡಿಸಿದ್ದಾರೆ. ಇವರ ಲೂಟಿಯನ್ನು ಪ್ರತಿಭಟಿಸಿದ ಬಡ ಅಂಗವಿಕಲೆ ಸಾವಿತ್ರಿ ಹಳ್ಳ ಎಂಬಾಕೆ ಕೆಲಸ ಸಿಗದೆ ಕೊನೆಗೆ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಳು. ನಂತರ ಜಿಲ್ಲಾ ಅಂಗವಿಕಲ ಸಂಘದವರು ಪ್ರತಿಭಟನೆ ಶುರು ಮಾಡಿದಾಗ ಶಾಸಕ ದೊಡ್ಡನಗೌಡ ಅತ್ತ ತಿರುಗಿಯೂ ನೋಡಲಿಲ್ಲ. ಈ ಉಮೇಶ್ ಪಾಟೀಲ ಕಂಟ್ರಾಕ್ಟರ್ ಕೂಡ. ಶಾಸಕನ ಅನುದಾನವೆಲ್ಲಾ ಉಮೇಶನ ಕೈ ಮೂಲಕವೇ ಹಂಚಿಕೆಯಾಗುತ್ತಾ ಇದೆ. ಇವನು ಒಂದೋ ತಾನೇ ಕಳಪೆ ಕಾಮಗಾರಿ ಮಾಡಿಸಿ ದುಡ್ಡು ನುಂಗುತ್ತಾನೆ ಇಲ್ಲಾ ಬಿಜೆಪಿಗಳಿಗೆ ಗುತ್ತಿಗೆ ಕೊಡಿಸಿ ಪರ್ಸೆಂಟೇಜ್ ನುಂಗುತ್ತಾನೆ.



ಮಠಪತಿ

ಮುಂದಿನ ಎಲೆಕ್ಷನ್ ಖರ್ಚಿಗೆ ದೊಡ್ಡನಗೌಡ ಈಗಿನಿಂದಲೇ ಹಣ ಒಟ್ಟು ಮಾಡಿಕೊಳ್ಳುತ್ತಿರುವ ವಿಧಾನ ಇದು.

ಹುನಗುಂದ ಕ್ಷೇತ್ರದ ಜನ ಡಕಾಯಿತನೊಬ್ಬನನ್ನು ಊರಿನ ತಿಜೋರಿ ಕಾಯಲು ತಂದು ನೇಮಿಸಿಕೊಂಡಂತಾಯ್ತಲ್ಲಾ ಎಂದು ಈಗ ಮರುಗುತ್ತಿದ್ದಾರೆ.


ಕಳ್ಳ ಕಸುಬಿನ ಸಿದ್ದಪ್ಪ

ಬೆಂಗಳೂರಿನ ಮಲ್ಟಿ ಸ್ಟೋರಿಡ್ ಬಿಲ್ಡಿಂಗ್‌ನ ರೆವಿನ್ಯೂ ಆಫೀಸ್ ಒಂದರಲ್ಲಿ ಕ್ಲರ್ಕ್ ಆಗಿದ್ದ ಸಿದ್ದಪ್ಪ KAS ಪಾಸು ಮಾಡಿಕೊಂಡು ತಹಶೀಲ್ದಾರ್ ಆಗಿ ಹುನಗುಂದಕ್ಕೆ ಬಂದವನು. ಎಷ್ಟು ಕಾಸು ಕೊಟ್ಟು ತಹಶೀಲ್ದಾರ್ ಹುದ್ದೆ ಖರೀದಿಸಿದ್ದಾನೋ ಏನೋ ಆಫೀಸಿಗೆ ಬಂದು ಕೂತ ದಿನದಿಂದಲೇ ಎರಡೂ ಕೈಗಳಿಂದ ಬಾಚಿ ತಿನ್ನಲು ಶುರು ಮಾಡಿದ್ದಾನೆ.

ಕಲ್ಲು ಗಣಿಗಾರಿಕೆ, ಮೈನ್ಸ್ ದಂಧೆ, ಭೂಪರಿವರ್ತನೆ ದೀಲುಗಳೇ ಇವನ ನಿತ್ಯ ಭೋಜನ. ಅಮೀನಗಡದಲ್ಲೂ ಮೈನ್ಸ್ ಲಂಚದ ರುಚಿ ನೋಡಿರುವ ಸಿದ್ದಪ್ಪ ಈಗ ಬೆಂಗಳೂರನ್ನು, ಅಲ್ಲಿರುವ ತನ್ನ ಮನೆಯನ್ನೂ ಮರೆತೇಬಿಟ್ಟಿದ್ದಾನೆ.


ಶಾಸಕ ದೊಡ್ಡನಗೌಡನ ಚೇಲಾ ಸಿದ್ದು ಬಂಡಿಯ ಗ್ರಾನೈಟ್ ಕ್ವಾರಿ ಇಳಕಲ್-ಹಿರೆಕೊಡಗಲಿ ನ್ಯಾಷನಲ್ ಹೈವೆ ಬಳಿ ಇದೆ. ಅಲ್ಲೇ ಶಾಲೆ-ಕಾಲೇಜುಗಳಿವೆ. ಅಂತಲ್ಲಿ ಸಿಡಿಮದ್ದು ಸ್ಫೋಟಿಸಿ ಗಣಿಗಾರಿಕೆ ನಡೆಸಲು ನಿಷೇಧವಿದೆ ಯಾದರೂ ಸಿದ್ದಪ್ಪ ಈ ಗಣಿಗಾರಿಕೆ ಹೆದ್ದಾರಿಯಿಂದ ಒಂದೂವರೆ ಕಿಲೋಮೀಟರ್ ದೂರದಲ್ಲಿದೆ ಎಂದು ನಕಲಿ ದಾಖಲೆ ಸೃಷ್ಟಿಸಿಕೊಟ್ಟಿದ್ದಾನೆ. ತನಗೆ ಡೀಲು ತಂದುಕೊಡುವ ತಲಾಟಿ ಗ್ರಾಮ ಲೆಕ್ಕಿಗರನ್ನೆಲ್ಲಾ ಹುನಗುಂದ ಸುತ್ತ ಮುತ್ತಲೇ ಇರಿಸಿಕೊಂಡಿದ್ದಾನೆ.

ಪಿ.ಎಂ. ಮಠಪತಿ ಇವರಲ್ಲಿ ಪ್ರಮುಖ. ಒಂದು 'ಡ' ವಿಚಾರಣೆಗೆ 500 ರೂ. ವಾರಸಾಕ್ಕೆ 1500, ಪುಡಿ (ಆಸ್ತಿ ವಿಭಾಗಕ್ಕೆ 2500, ಒಂದು ಎಕರೆ ಭೂಪರಿವರ್ತನೆಗೆ 10 ರಿಂದ 20 ಸಾವಿರ ಲಂಚದ ರೇಟುಗಳನ್ನು ಈ ಮಠಪತಿ ಫಿಕ್ಸ್ ಮಾಡಿಬಿಟ್ಟಿದ್ದಾನೆ. ಸಿದ್ದಪ್ಪ ತಹಶೀಲ್ದಾರ್ ಆಗಿಬಂದ ನಂತರ ಸರಿಸುಮಾರು 200 ಎಕರೆ ಭೂಪರಿವರ್ತನೆ ಮಾಡಿಸಿಕೊಟ್ಟಿದ್ದಾನೆಂದರೆ ಎಷ್ಟು ಲಂಚದ ದುಡ್ಡಾಯಿತೋ ಲೆಕ್ಕ ಹಾಕಿ!



ಅಕ್ರಮ ದಂಧೆಯ ಒಂದು ದೃಶ್ಯ

ಈ ಸಿದ್ದಪ್ಪ ಎಂಥ ಐನಾತಿ ಕಿಲಾಡಿ ಖದೀಮನೆಂದರೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಗ್ರಾಮ ವಾಸ್ತವ್ಯಕ್ಕೆಂದು ಬಂದಾಗ 50 ಲಕ್ಷದವರೆಗೂ ವಂತಿಗೆ ಎತ್ತಿ ನುಂಗಿದ್ದಾನೆ. ಸಿಎಂ ಸಾಹೇಬ್ರಿಗೆ, ಅವರ ಟೀಂಗೆ ಅಡುಗೆ ಮಾಡಿಸಬೇಕು ಎಂದು ಹೇಳಿ ಅವರಿಗೆ ಗೊತ್ತಾಗದಂತೆ ಇವರ ಹತ್ತಿರ, ಇವರಿಗೆ ತಿಳಿಯದಂತೆ ಇನ್ನೊಬ್ಬರ ಹತ್ತಿರ ಹಣ ಎತ್ತಿದ್ದ. ಕೊನೆಗೆ ಊಟದ ವ್ಯವಸ್ಥೆಯನ್ನು ಸತೀಶ್ ಶೆಟ್ಟಿಯ ಪಿಂಕ್ ಪ್ಯಾಲೇಸ್ ಹೋಟೆಲ್‌ನವರಿಗೆ ಒಪ್ಪಿಸಿ ಬಿಲ್ ಹಣ 75 ಸಾವಿರ ಬಂದಾಗ ನಯಾಪೈಸೆ ಕೊಡದೆ ಅಲ್ಲೂ ನಾಮ ಹಾಕಿದ್ದಾನೆ. ಚೀಟರ್ ಸಿದ್ದಪ್ಪ ಈಗ ಮದರಿ ಹಾಗೂ ಗೌಡರ್ ಎಂಬ ಇನ್ನಿಬ್ಬರು ವಸೂಲಿ ವೀರರನ್ನು ಅಕ್ಕಪಕ್ಕ ಇರಿಸಿಕೊಂಡು ಮಠಪತಿಯನ್ನು ದೂರವಿಟ್ಟಿದ್ದಾನೆ. ವಸೂಲಾದ ಹಣದ ಹಂಚಿಕೆಯಲ್ಲಿ ಜಗಳ ಬಂದಿರುವುದೇ ಇದಕ್ಕೆ ಕಾರಣ. ಸದ್ಯದಲ್ಲೇ ಸಿದ್ದಪ್ಪನಿಗೆ ಗೂಸಾ ಕೊಟ್ಟು ಓಡಿಸಲು ಹುನಗುಂದರ ಜನ ರೆಡಿಯಾಗುತ್ತಿದ್ದಾರೆ.



ಸಿದ್ದಪ್ಪ


-ಮೇಘರಾಜ್



■ ಕನ್ನಡಕ್ಕೆ: ಸುಕನ್ಯಾ ಕನಾರಳ್ಳಿ

ಇತಿಹಾಸ ಮತ್ತು ನಂಬಿಕೆ: ಸಾಧ್ಯವಿಲ್ಲದ ಬೆಸುಗೆ

■ ಇಂಗ್ಲಿಷ್ ಮೂಲ: ರೊಮಿಲಾ ಥಾಪರ್



ಮತ್ತೊಮ್ಮೆ ನಂಬಿಕೆ ಮತ್ತು ಇತಿಹಾಸವನ್ನು ಸಂಘರ್ಷಕ್ಕೊಡ್ಡಿ ಅವೆರಡೂ ಒಂದೆಯೋ ಎಂದು ಬಿಂಬಿಸುವ ಪ್ರಯತ್ನಗಳು ನಡೆಯುತ್ತಿವೆ. ಅವೆರಡರ ಸ್ವರೂಪ ಮೌಲ್ಯ ತೀರಾ ಬೇರೆಬೇರೆ ಎಂದು ಅರ್ಥ ಮಾಡಿಕೊಂಡಾಗ ಈ ಸಂಘರ್ಷದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವೆರಡಕ್ಕೂ ಪರಸ್ಪರ ಸಂಬಂಧವೇ ಇಲ್ಲ. ಅವುಗಳ ನೆಲೆಗಟ್ಟು, ಮಾನದಂಡಗಳು, ಅರ್ಥೈಸುವಿಕೆ, ಶೋಧನೆಯ ಹಾದಿಗಳೇ ಬೇರೆ. ಹಾಗಾಗಿ ಅವೆರಡನ್ನು ತಳುಕು ಹಾಕುವ ಪ್ರಯತ್ನವನ್ನು ಕೈಬಿಟ್ಟು, ಅವುಗಳ ನಡುವಿನ ವ್ಯತ್ಯಾಸವನ್ನು ಗೌರವಿಸಿ, ಅಂತರವನ್ನು ಕಾಪಾಡಿಕೊಳ್ಳುವುದು ಲೇಸು.

ಒಬ್ಬ ವ್ಯಕ್ತಿಯ, ಸ್ಥಳದ, ಕಾಲದ ಮತ್ತು ಘಟನೆಯ ಚಾರಿತ್ರಿಕತೆಯ ಬಗ್ಗೆ ಇತಿಹಾಸಕಾರರು ಮಾತನಾಡುವಾಗ ಪುರಾವೆಗಳನ್ನು ಒದಗಿಸುವ ಅಗತ್ಯವಿರುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ಬರುವ ಎರಡು ಪ್ರಮುಖ ಸ್ಥಳಗಳೆಂದರೆ ಅಯೋಧ್ಯೆ ಮತ್ತು ಲಂಕೆ. ಆದರೆ ಅದರ ಬಗ್ಗೆಯೇ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

ಲಂಕೆ ಎಲ್ಲಿದೆ ಎನ್ನುವುದರ ಬಗ್ಗೆ ಹಿಂದಿನ ಶತಮಾನದ ಭಾರತೀಯ ವಿದ್ವಾಂಸರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ ಮತ್ತು ಅದರ ಬಗ್ಗೆ ನಿಶ್ಚಿತ ನಿರ್ಧಾರಕ್ಕೆ ಇನ್ನೂ ಬರಲಾಗಿಲ್ಲ. ಕೆಲವರು ವಿಂಧ್ಯೆಯಲ್ಲಿದೆ ಎಂದರೆ, ಹಲವರು ಅಮರಕಂಟಕದಲ್ಲಿದೆ ಎನ್ನುತ್ತಾರೆ. ಇನ್ನೂ ಕೆಲವರು

ಚ ' ೂ ೀ ಟ ಾ

ಮನುಷ್ಯ ವ್ಯಾಪಾರಗಳೆಲ್ಲವೂ ಚಾರಿತ್ರಿಕ ನೆಲೆಯಿಂದ ಹುಟ್ಟಿರುತ್ತವೆ. ಅವುಗಳು ಚಾರಿತ್ರಿಕ ಶೋಧನೆಗೆ ತೆರೆದುಕೊಂಡಿರಬೇಕು. ಆದರೆ ರಾಮಸೇತು ವಿವಾದ ಹಾಗಲ್ಲ. ಧರ್ಮದ ಹೆಸರಿನಲ್ಲಿ ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳುವವರ ಹುನ್ನಾರಕ್ಕೆ ಮತ್ತು ಅಂತಹ ರಾಜಕೀಯ ಸಂಘಟನೆಗೆ ಪ್ರತಿಕ್ರಿಯಿಸುವವರಿಗೆ ರಾಮಸೇತು ಒಂದು ಆಟಿಕೆಯಾಗಿ ಒದಗಿ ಬರುತ್ತಿದೆ. ಇತಿಹಾಸಕ್ಕೆ ಪುರಾವೆಗಳು ಬೇಕು. ಆದರೆ ನಂಬಿಕೆಗೆ ಅದರ ಅಗತ್ಯವಿರುವುದಿಲ್ಲ. ಚಾರಿತ್ರಿಕತೆಯ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸುವುದು ಧರ್ಮದ್ರೋಹವಲ್ಲ. ಹಾಗೆಯೇ ಇತಿಹಾಸದೊಂದಿಗೆ ನಂಬಿಕೆಯನ್ನು ಬೆಸೆಯುವುದು ಎಂದೆಂದಿಗೂ ಅಸಾಧ್ಯ.


ನಾಗಪುರದಲ್ಲಿದೆ ಎಂದು ವಾದಿಸಿದರೆ, ಹಲವರು ಮಹಾನದಿ ಪಾತ್ರದಲ್ಲಿದೆ ಎಂದೂ ಹೇಳಿದ್ದುಂಟು. ಇಂದಿನ ಶ್ರೀಲಂಕಾ ಅಂದಿನ ಲಂಕೆ ಎಂದು ಹೇಳುವುದರಲ್ಲಿ ಹಲವಾರು ಸಮಸ್ಯೆಗಳಿವೆ. ಮೌರ್ಯ ಮತ್ತು ಮೌರ್ಯರ ನಂತರದ ಕಾಲದ ಬಗ್ಗೆ ಇರುವ ಭಾರತೀಯ, ಗ್ರೀಕ್ ಮತ್ತು ಲ್ಯಾಟಿನ್ ಉಲ್ಲೇಖಗಳ ನೆರವಿನಿಂದ ಹೇಳುವುದಾದರೆ ಸಿಲೋನಿಗೆ ಇದ್ದ ಮೊದಲ ಹೆಸರು ತಾಮ್ರಪರ್ಣಿ ಎಂದು. (ಗ್ರೀಕ್‌ನಲ್ಲಿ ತಾಪ್ರೋಬೇನ್). ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ಅಶೋಕ ಬರೆಸಿರುವ ಒಂದು ಶಾಸನದಲ್ಲಿ ತಾಮ್ರಪರ್ಣಿ ತನ್ನ ಪ್ರಾಂತ್ಯದ ಗಡಿಯಲ್ಲಿದೆ ಎಂದು ಉಲ್ಲೇಖಿಸಲಾಗಿದೆ. ನಂತರ ಸಾಮಾನ್ಯವಾಗಿ ಬಳಸುತ್ತಿದ್ದ ಹೆಸರೆಂದರೆ ಸಿಂಹಳ, ಸಿಂಹಳ ದ್ವೀಪ (ಗ್ರೀಕ್‌ನಲ್ಲಿ ಸೀಲಮ್ ಅಥವಾ ಸೀಲೆದಿಬ್). ಲಂಕೆ ಎಂದು ಬಳಕೆಗೆ ಬಂದಿದ್ದು ಕ್ರಿಸ್ತಶಕದ ನಂತರದ ವರುಷಗಳಲ್ಲಿ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಇತಿಹಾಸಕಾರನಿಗೆ ಇದರಿಂದ ಗೊಂದಲವಾಗುವುದು ಸಹಜ. ವಾಲ್ಮೀಕಿ ಸಿಲೋನನ್ನು ಲಂಕೆ ಎಂದು ಸೂಚಿಸುತ್ತಿದ್ದ ಎನ್ನುವುದಾದರೆ ಅವನು ರಾಮಾಯಣವನ್ನು ಬರೆದ ಕಾಲದಲ್ಲಿ ಬಳಕೆಯಲ್ಲಿದ್ದ ತಾಮ್ರಪರ್ಣಿ ಅಥವಾ ಸಿಂಹಳ ಎಂದೇಕೆ ಕರೆಯಲಿಲ್ಲ? ಅವನು ಬಳಸುವ ಲಂಕಾ ಎಂಬ ಪದ ಈಗಿನ ಸಿಲೋನನ್ನು ಸೂಚಿಸುವುದಿಲ್ಲ ಎನ್ನುವುದಾದರೆ ಲಂಕೆ ಇನ್ನೆಲ್ಲೋ ಇದ್ದಿರಬೇಕು. ರಾಮಸೇತು ಎಲ್ಲಿದೆ ಎಂಬ ಪ್ರಶ್ನೆಯನ್ನು ಪರಿಷ್ಕರಿಸುವ ಅಗತ್ಯವಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಸೇತು ಅವರ ಪ್ರಕಾರ ಮಧ್ಯಭಾರತದ ಒಂದು ಸಣ್ಣ ನೀರಿನ ವಿಸ್ತಾರದಲ್ಲಿ ಇದ್ದಿರಬೇಕೇ ಹೊರತು ಪಾಕ್ ಕೊಲ್ಲಿಯಲ್ಲಿ ಅಲ್ಲ. ಹಾಗೆಯೇ ರಾಮಾಯಣದ ಎಲ್ಲ ಆವೃತ್ತಿಗಳಲ್ಲಿ ಸೇತುವಿನ ಪ್ರಸ್ತಾಪ ಬಂದಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ವಾಲ್ಮೀಕಿ ಪ್ರಸ್ತಾಪಿಸುವ ಲಂಕೆ ಈಗಿನ ಸಿಲೋನ್ ಆದಲ್ಲಿ ವಾಲ್ಮೀಕಿ ರಾಮಾಯಣ ಬರೆದದ್ದೇ ಬೇರೆ ಕಾಲವಿರ ಬಹುದು. ಯಾವ ಕಾಲದಲ್ಲಿ ಸಿಲೋನನ್ನು ಲಂಕಾ ಎಂದು ಕರೆಯಲಾರಂಭಿಸಿದರೋ ಆ ಕಾಲದಲ್ಲಿ ಇರಬೇಕು ಎನ್ನುವುದು ತರ್ಕಬದ್ಧ ನಿಲುವು. ಅಂದರೆ ವಾಲ್ಮೀಕಿ ರಾಮಾಯಣವನ್ನು ಕ್ರಿಸ್ತಶಕದ ವರ್ಷಗಳಲ್ಲಿ ಬರೆದಿರಬೇಕು ಎಂದಾಗುತ್ತದೆ. ಅದು ಹಾಗಾಗಲು ಸಾಧ್ಯವೇ ಇಲ್ಲ. ಈ ಎಲ್ಲಾ ಗೊಂದಲಗಳನ್ನು ಒತ್ತಟ್ಟಿಗೆ ಇಟ್ಟರೂ ಕ್ರಿಸ್ತಪೂರ್ವದ ಶತಮಾನಗಳಲ್ಲಿ ಸಮುದ್ರದ ಮಧ್ಯೆಯಲ್ಲಿ ಸೇತುವೆಯನ್ನು ಕಟ್ಟಿರಬಹುದಾದ ತಾಂತ್ರಿಕ ಸಾಧ್ಯತೆ ಎಂದಾದರೂ ಇರಲು ಸಾಧ್ಯವೆ ಎನ್ನುವುದು ಇನ್ನೊಂದು ಅತಿಮುಖ್ಯ ಪ್ರಶ್ನೆ.



■ ವಿ.ಎಸ್. ಶ್ರೀಧರ

ಹಾಗೇ ಸಿಕ್ಕಿದ ಹಾಯ್ಕುಗಳು



ಕಾಲ ಎಂದರೆ

ಕಾಲ ಎಂದರೇನು? ಲೆಕ್ಕಾಚಾರ? ಅವಕಾಶ? ಅವಸ್ಥೆ? ಅಥವಾ ಅಧಿಕಾರ ಹಸ್ತಾಂತರ!?

ಕಾಲ ಎನ್ನುವುದು ಇಷ್ಟೇ ಅಲ್ಲ, ಕಾಲ ಎಂದರೆ ಅರಿವು, ಒಂದು ಮನಸ್ಥಿತಿ, ಪರಿಜ್ಞಾನ, ನೆನಪು, ಆಸೆ.... ಎಲ್ಲಾ ಇದೆ ಅದರಲ್ಲಿ! ಆದರೆ ಕಾಲದ ಸಿದ್ಧಾಂತಕ್ಕಿಂತಲೂ ಅರಿವು ದೊಡ್ಡದು, ಈ ಅನುಭವವೂ ಹೀಗೆ ಬಂದು ಹಾಗೆ ಹೋಗುವ ಕ್ಷಣವಾದರೂ ಅದರ ವೈವಿಧ್ಯ ಪರಿಣಾಮ ಮಾತ್ರ ಅಪಾರ.

ತಮ್ಮ ಚಿತ್ರ brush strokes ನಂತಿರುವ ಸಾಲುಗಳ ಮೂಲಕ ಹಾಯ್ಕು ಪದ್ಯಗಳು ಕಾಲದ ಸ್ಪರ್ಶಮಾಡಿಸಬಲ್ಲವು ಎಂದೋ ಆಗಿಹೋದ ಅನುಭವ ಮತ್ತೆ ಆದಂತೆ, ಅರ್ಥವಾಗದಿದ್ದರೂ ನಮ್ಮೊಳಗೇ ಇದ್ದ ಭಾವನೆಗಳಂತೆ, ಬೃಹತ್ ವೃಕ್ಷವೊಂದನ್ನು ನೆಟಪಿಸುವ ಚೋಟ್ಟಾಯಿ ಗಿಡದಂತೆ, ಈ ಸಾಲುಗಳು ನಮ್ಮನ್ನು ಒಂದು ಕ್ಷಣ ನಿಲ್ಲಿಸಿ, ಮತ್ತೆ ಮುಂದೆ ಸಾಗುತ್ತವೆ. `Best poetry communicates even before it is understood' ಎಂಬಂತೆ ಇವು ಥಟ್ಟನೆ ಮನಸ್ಸಿನೊಳಗೆ ಸಂವಹಿಸಿಸಬಲ್ಲವು. ಆದರೆ ಓದಿದಾಗ ಸಿಕ್ಕ ಅರ್ಥವಷ್ಟೇ ಇಲ್ಲ ಇದರೊಳಗೆ. ನೀವು ಇದನ್ನು ಅಪಾರ್ಥ ಮಾಡಿಕೊಂಡಷ್ಟೂ ಒಳ್ಳೆಯದೇ!

ಕಾಲ ಎಂದರೆ....
ಕಡೆಗೂ ನಾನು ತುಳಿಯುವುದು ಇದೇ ದಾರಿ
ಎಂದು ನನಗೆ ಯಾವಾಗಲೂ ತಿಳಿದಿತ್ತು....
ಆದರೆ ನೆನ್ನೆ ಅದು ಇವತ್ತೇ
ಎಂದು ಗೊತ್ತಿರಲಿಲ್ಲ.

. . . .

ಕಾಲವನ್ನು ಹಿಂದಿರುಗಿಸಬೇಕಾದರೆ
ಯಾಕೋ,
ಯಾರೋ, ದೋಚಿದ ಹಾಗೆ ಅನಿಸುತ್ತೆ.

. . . .

ಏನೋ ಕಳೆದುಹೋಯಿತು.
ಪೊಲೀಸರು ಬಂದು ಅದರ ಎಲ್ಲ ವಿವರ
ಪಡೆದುಕೊಂಡರು.
ಅದರ ಬಗ್ಗೆ ಗೊತ್ತಿರದಿದ್ದೆಲ್ಲಾ ಅರಿವಿಗೆ ಬಂದಿದ್ದೇ
ಲಾಭ!

. . . .

ಊಟ ಬೇಕಾದರೆ
ಬಾವಿ ತೋಡುವವನು ಮೇಲೆ
ಹೆಂಚು ಹೊದಿಸುವವನು ಕೆಳಗೆ
ಬರಲೇಬೇಕು.

. . . .

ತಂತಿ ಮೀಟುವುದು ನಿಲ್ಲಿಸಿ
ಸೌದೆ ತರಲು ಹೋದ ಹಾಗೆ

. . . .

ಮನೆ ತೊರೆದು ಬರುವಾಗ
ಬರೆದಿಟ್ಟ ಚೀಟಿ
ಬೆಳಗ್ಗೆ ಯಾರಿಗಾದರೂ
ಕಾಣುತ್ತೋ, ಇಲ್ಲವೋ!

ಧ್ಯಾನದಲ್ಲಿ ಕುಳಿತಾಗ
ಸೊಳ್ಳೆಯ ಗುಂಗುನಾದ.
ಛೇ, ಆಮೇಲೆ ಬರಬಾರದಾಗಿತ್ತೇ?

. . . .

ಮತ್ತೆ ನಿನ್ನ ಹಲ್ಲು
ಹೊರತೆಗೆಯಬೇಡ
ಎಂದು
ಮೊಮ್ಮಗು ಕೇಳಿಕೊಂಡಂತೆ.

. . . .

ಹೊಸ ವರ್ಷದ
ಮಧ್ಯರಾತ್ರಿ
ಯಾವುದೋ ಶವಯಾತ್ರೆ

. . . .


ಮೊದಲನೇ ರಾತ್ರಿ
ಯಾವತ್ತೋ ನೋಡಿದ ಪೋಲಿ ಸಿನಿಮಾ
ನೆನಪಿಗೆ ಬಂದು
ತುಂಬಾ ನಾಚಿಕೆಯಾಯಿತು.

. . . .

ಒಂದು ಕಾಲದಲ್ಲಿ
ಅವರಿಬ್ಬರೂ ಬಹಳ ಪ್ರೀತಿಸುತ್ತಿದ್ದರು
ಈಗ ಆಕಳಿಸುತ್ತಿದ್ದಾರೆ!

. . . .

ಡೈವೋರ್ಸ್ ಆದ ಮಾರನೇ ದಿನ
ದಿನವೂ ಇಟ್ಟಲ್ಲೇ ಇಡುತ್ತಿದ್ದ
ವಸ್ತುವಿಗೆ
ಮನೆಯೆಲ್ಲಾ ಹುಡುಕಾಟ!



ವಿಶೇಷ ಲೇಖನ

ರಾಮಸೇತು ನೈಸರ್ಗಿಕವಾಗಿ ರೂಪಿತಗೊಂಡಿದ್ದೇ ಆಗಿದ್ದರೂ ಸಹ, ಮನುಷ್ಯ-ನಿರ್ಮಿತವಲ್ಲದಿದ್ದರೂ ಸಹ, ನಮ್ಮ ಸಾಂಸ್ಕೃತಿಕ ಸ್ಮಾರಕವಾಗಿರುವುದರಿಂದ ಅದನ್ನು ಮುಟ್ಟಲಾಗದು ಎಂಬ ವಾದವನ್ನು ಹೂಡಲಾಗುತ್ತಿದೆ. ಅಂದರೆ ಕಲ್ಪನೆಯನ್ನೇ ಸ್ಮಾರಕದ ಸ್ಥಾನಕ್ಕೆ ಏರಿಸಲಾಗಿದೆ! ಅಸ್ತಿತ್ವದಲ್ಲಿ ಇಲ್ಲದ ಮನುಷ್ಯ-ನಿರ್ಮಿತ ರಚನೆಯನ್ನು ಹುಡುಕುವ ಪ್ರಯತ್ನವೇ ಕಲ್ಪನಾಶಕ್ತಿಯ ಪ್ರಚಂಡ ಚೇತನವನ್ನು ನಿರಾಕರಿಸಿ ಜಾನಪದಕ್ಕಿರುವ ಅದ್ಭುತ ಕಲಾಸೃಷ್ಟಿಸ್ಫೂರ್ತಿಯನ್ನು ಅಲ್ಲಗಳೆದಂತೆ. ಹಾಗೆ ಮಾಡುವುದರ ಬದಲು ಪಾಕ್ ಕೊಲ್ಲಿಯಲ್ಲಿ ಸಮುದ್ರದ ತಳಗಿರುವ ರಚನೆಗಳನ್ನು ನೈಸರ್ಗಿಕ ಬೆಳವಣಿಗೆಗಳೆಂದು ಪರಿಗಣಿಸಿ ಅವುಗಳನ್ನು ಕಾಪಾಡುವತ್ತ ಕ್ರಮ ಕೈಗೊಳ್ಳುವುದು ಅರ್ಥಪೂರ್ಣವಾಗಬಲ್ಲುದು. ಸಮುದ್ರದ ಮೇಲಿರುವ ನಿಸರ್ಗದ ರಚನೆಗಳಂತೆಯೇ ತಳದಲ್ಲಿರುವ ಜಲೋದ್ಯಾನವನಗಳು ನಮ್ಮ ನಿಸರ್ಗದ ಸಮತೋಲನಕ್ಕೆ ಅತ್ಯವಶ್ಯಕ ಎಂಬ ಅಂಶವನ್ನೇ ನಾವು ಮರೆಯುತ್ತೇವೆ. ರಾಮಾಯಣದ ಹಲವಾರು ಆವೃತ್ತಿಗಳಲ್ಲಿ ರಾಮನೇ ಕೇಂದ್ರಪಾತ್ರ ಎಂಬ ಅಂಶ ಅದಕ್ಕೆ ಚಾರಿತ್ರಿಕ ಸಮರ್ಥನೆಯನ್ನು ಒದಗಿಸುವುದಿಲ್ಲ. ಹಲವಾರು ಆವೃತ್ತಿಗಳು ಪರಸ್ಪರ ವ್ಯತಿರಿಕ್ತ ಅಂಶಗಳನ್ನೊಳಗೊಂಡಿವೆ ಎನ್ನುವ ಸತ್ಯ ಅದರ ಒಂದೇ ಆವೃತ್ತಿಯನ್ನು ಮಾತ್ರ ಸತ್ಯವೆಂದು ಭಾವಿಸುವವರ ನಂಬಿಕೆಗೆ ಧಕ್ಕೆ ತರುತ್ತದೆ. ಆದರೆ ಈ ಬಹುರೂಪತೆ ಚಾರಿತ್ರಿಕ ಮತ್ತು ತುಲನಾತ್ಮಕ ವಿಶ್ಲೇಷಣೆಗಳನ್ನು ಹೆಚ್ಚು ಹೆಚ್ಚು ಶ್ರೀಮಂತಗೊಳಿಸುತ್ತದೆ. ಪರಸ್ಪರ ಇರುವ ಸಾಮ್ಯಗಳನ್ನು ಅಥವಾ ವೈರುಧ್ಯಗಳನ್ನು ಇನ್ನಷ್ಟು ಹೆಚ್ಚಿನ ಸಂಶೋಧನೆಗೆ ಒಳಪಡಿಸುತ್ತದೆ.

ಬೌದ್ಧ ಮತ್ತು ಜೈನ ಆವೃತ್ತಿಗಳು ವಾಲ್ಮೀಕಿಯ ಕಾಲಕ್ಕೆ ತುಂಬ ಹತ್ತಿರವಿರುವ ಎರಡು ಆವೃತ್ತಿಗಳು. ಬೌದ್ಧ ಆವೃತ್ತಿಯಾದ ದಶರಥ ಜಾತಕ ವಾಲ್ಮೀಕಿ ರಾಮಾಯಣದಿಂದ ಸಂಪೂರ್ಣ ಭಿನ್ನವಾದದ್ದು. ಅದರಲ್ಲಿ ರಾಮ ವಾರಣಾಸಿ ರಾಜನ ಮಗ. ಅವನು ವನವಾಸಕ್ಕೆ ಹೋಗುವುದು ಹಿಮಾಲಯಕ್ಕೆ ಮತ್ತು ಅದರಲ್ಲಿ ರಾವಣ ಸೀತೆಯನ್ನು ಅಪಹರಿಸುವುದೇ ಇಲ್ಲ.

ಜೈನ ಆವೃತ್ತಿಗಳಲ್ಲಿ ವಿಮಲಸೂರಿ ಬರೆದ ಪದ್ಮಚರಿತ ಅತ್ಯಂತ ಮೊದಲನೆಯದು. ಕ್ರಿಸ್ತಶಕದ ಶತಮಾನಗಳಲ್ಲಿ ಬರೆದ ಈ ಆವೃತ್ತಿ ಹಿಂದಿನ ಎಲ್ಲ ಆವೃತ್ತಿಗಳಿಗೆ ವಿರುದ್ಧವಾಗಿದೆ. ಇಲ್ಲಿಯತನಕ ಬಂದಿರುವ ಆವೃತ್ತಿಗಳು ನಿಜವಲ್ಲವೆಂದೂ, ಸತ್ಯವನ್ನು ಬಚ್ಚಿಡುವ ಉದ್ದೇಶದಿಂದಲೇ ಇದನ್ನು ಬರೆಯಲಾಗಿದೆ ಎಂದು ಅದು ಹೇಳಿಕೊಳ್ಳುತ್ತದೆ. ಇದೂ ವಾಲ್ಮೀಕಿ ರಾಮಾಯಣದಿಂದ ಸಾಕಷ್ಟು ಭಿನ್ನವಾದದ್ದು. ಅದರಲ್ಲಿ ರಾವಣ ಒಬ್ಬ ರಾಕ್ಷಸೀಯ ಗುಣಗಳಿರುವ ಖಳನಾಯಕನಲ್ಲ, ಬದಲಾಗಿ ಒಬ್ಬ ಮಾನವ ಪ್ರತಿ-ನಾಯಕ. ಕತೆಯನ್ನು ಅದು ಜೈನಧರ್ಮದ ಪಾರಿಭಾಷಿಕ ಚೌಕಟ್ಟಿನಲ್ಲಿ ಪ್ರಸ್ತುತಪಡಿಸುತ್ತದೆ.

ವಾಲ್ಮೀಕಿ ರಾಮಾಯಣದಲ್ಲಿ ನಂಬಿಕೆ ಇರುವ ಮನಸ್ಸೊಂದು ಇತರ ಆವೃತ್ತಿಗಳು ಭಿನ್ನ ಎಂಬ ಕಾರಣಕ್ಕಾಗಿಯೇ ಅವು ಸತ್ಯವಲ್ಲವೆಂದೂ ನಂಬುವ ಸಾಧ್ಯತೆಗಳಿವೆ. ಸಾಕಷ್ಟು ದೊಡ್ಡದಾಗಿರುವ ಈ ಭಿನ್ನವಾದ ಆವೃತ್ತಿಗಳ ಸಂಖ್ಯೆ ಇತಿಹಾಸಕಾರರಿಗೆ ಅಷ್ಟು ಮುಖ್ಯವಲ್ಲ, ಬದಲಾಗಿ ಈ ಆವೃತ್ತಿಗಳಲ್ಲಿ ಇರುವ ಭಿನ್ನತೆಗಳು, ಬದಲಾವಣೆಗಳು ಯಾಕೆ ಬಂದವು? ಅವುಗಳ ನೆಲೆಯೇನು? ಇತ್ಯಾದಿ ಪ್ರಶ್ನೆಗಳು ಅವ ರಲ್ಲಿ ಹೆಚ್ಚು ಆಸಕ್ತಿಯನ್ನು ಮೂಡಿಸುತ್ತವೆ.

ಈ ಪಂಥಗಳನ್ನು ಹುಟ್ಟು ಹಾಕಿದ ಚಾರಿತ್ರಿಕ ವ್ಯಕ್ತಿಗಳಾದ ಬುದ್ಧ ಏಸುಕ್ರಿಸ್ತ ಮೊಹಮ್ಮದ್ ಇವರ ಜೀವನಚರಿತ್ರೆಗಳಲ್ಲಿ ಈ ಭಿನ್ನತೆಗಳು ಕಂಡುಬರುವುದಿಲ್ಲ. ಅವೆಲ್ಲವೂ ಒಂದೇ ಕತೆಯ ಹಂದರವನ್ನು ಹೊಂದಿರುತ್ತವೆ ಹಾಗೂ ಆ ಹಂದರವೇ ಅವರ ಜೀವನಚರಿತ್ರೆಯ ಅಧಿಕೃತ ಆವೃತ್ತಿಯೆಂದು ಪರಿಗಣಿಸಲ್ಪಡುತ್ತದೆ. ಅವರ ಜೀವನಕ್ಕೆ ಸಂಬಂಧಪಟ್ಟ ಘಟನೆಗಳು ಬೇರೆ ಬೇರೆ ಮೂಲಗಳಲ್ಲಿಯೂ ಕಂಡುಬರುವುದರಿಂದ ಹಾಗೂ ಅವುಗಳು ಒಂದಕ್ಕೊಂದು ತಾಳೆಯಾಗುವುದರಿಂದ ಅಲ್ಲಿ ಭಿನ್ನತೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಉದಾಹರಣೆಗೆ ಬುದ್ಧನ ಚಾರಿತ್ರಿಕತೆ ಹಲವಾರು ನೆಲೆಗಳಿಂದ ಸಾಬೀತಾಗಿದೆ. ಅವನು ಸತ್ತ ಎರಡು ಶತಮಾನಗಳ ನಂತರ ಲುಂಬಿನಿಗೆ ಭೇಟಿ ಕೊಟ್ಟ ಚಕ್ರವರ್ತಿ ಅಶೋಕ ಬುದ್ಧನ ಜನ್ಮಸ್ಥಳದ ನೆನಪಿಗೆ ಕಂಬವೊಂದನ್ನು ನೆಡಿಸಿದ್ದ. ಕಂಬದ ಮೇಲೆ ಕೆತ್ತಲ್ಪಟ್ಟಿರುವ ಶಾಸನ ಇದಕ್ಕೆ ಪುರಾವೆಯನ್ನೊದಗಿಸುತ್ತದೆ.

ಪ್ರಸ್ತುತ ಎದ್ದಿರುವ ವಿವಾದ ಅರ್ಥಪೂರ್ಣವಾದ ಚಾರಿತ್ರಿಕ ಅನ್ವೇಷಣೆಯ ನೆಲೆಯಿಂದ ಹುಟ್ಟಿದ್ದರೆ ಇತಿಹಾಸಕಾರರು ಅದರಲ್ಲಿ ಭಾಗವಹಿಸಬಹುದಿತ್ತು. ಮನುಷ್ಯ ವ್ಯಾಪಾರಗಳೆಲ್ಲವೂ ಚಾರಿತ್ರಿಕ ನೆಲೆಯಿಂದ ಹುಟ್ಟಿರುತ್ತವೆ. ಅವುಗಳು ಚಾರಿತ್ರಿಕ ಶೋಧನೆಗೆ ತೆರೆದುಕೊಂಡಿರಬೇಕು. ಆದರೆ ರಾಮಸೇತು ವಿವಾದ ಹಾಗಲ್ಲ, ಧರ್ಮದ ಹೆಸರಿನಲ್ಲಿ ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳುವವರ ಹುನ್ನಾರಕ್ಕೆ ಮತ್ತು ಅಂತಹ ರಾಜಕೀಯ ಸಂಘಟನೆಗೆ ಪ್ರತಿಕ್ರಿಯಿಸುವವರಿಗೆ ರಾಮಸೇತು ಒಂದು ಆಟಿಕೆಯಾಗಿ ಒದಗಿ ಬರುತ್ತಿದೆ. ಇತಿಹಾಸ ಮತ್ತು ಪುರಾತನಶಾಸ್ತ್ರಗಳ ವಿಷಯತಜ್ಞರು ಸ್ಪಷ್ಟಪಡಿಸಿರುವಂತೆ ಇಲ್ಲಿಯತನಕ ರಾಮ ಬದುಕಿದ್ದ ಎನ್ನುವುದಕ್ಕೆ ಯಾವ ಚಾರಿತ್ರಿಕ ಪುರಾವೆಗಳೂ ಇಲ್ಲ. ಇಂತಹ ಸ್ಪಷ್ಟನೆಯನ್ನು ಅಲ್ಲಗಳೆಯುವುದರಲ್ಲಿ ರಾಜಕೀಯ ದುರುದ್ದೇಶಗಳಿವೆ. ಇತಿಹಾಸಕ್ಕೆ ಪುರಾವೆಗಳು ಬೇಕು. ಆದರೆ ನಂಬಿಕೆಗೆ ಅದರ ಅಗತ್ಯವಿರುವುದಿಲ್ಲ. ಚಾರಿತ್ರಿಕತೆಯ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸುವುದು ಧರ್ಮದ್ರೋಹವಲ್ಲ.

ಧಾರ್ಮಿಕ ನಂಬಿಕೆಯನ್ನು ಪ್ರಶ್ನಿಸುವ ಅಗತ್ಯ ಇತಿಹಾಸಕಾರನಿಗಿಲ್ಲ. ಆದರೆ ಇತಿಹಾಸಕಾರ ಯಾವುದೋ ಒಂದು ನಿರ್ದಿಷ್ಟವಾದ ದೇಶ-ಕಾಲದಲ್ಲಿ ಯಾವ ಧಾರ್ಮಿಕ ನಂಬಿಕೆ ಯಾಕೆ ಪ್ರಾಮುಖ್ಯವನ್ನು ಗಳಿಸಿಕೊಂಡಿತು ಎಂಬುದರ ಬಗ್ಗೆ ಚಾರಿತ್ರಿಕ ವಿವರಣೆಯನ್ನು ಕೊಡಲು ಯತ್ನಿಸಬಹುದು. ಒಂದು ಅಂಶವನ್ನಂತೂ ನಾವು ಮರೆಯಲೇ ಬಾರದು. ಧಾರ್ಮಿಕ ನಂಬಿಕೆಯನ್ನು ಎತ್ತಿ ಹಿಡಿಯುವವರು ಮಾತ್ರ ಪರಂಪರೆಗೆ ಕೊಡುಗೆಯನ್ನು ನೀಡಿರುತ್ತಾರೆ ಎಂಬುದು ಪೂರ್ಣಸತ್ಯವಲ್ಲ. ಆ ನಂಬಿಕೆಯನ್ನು ಪ್ರಶ್ನಿಸಿದವರೂ ಸಹ ಪರಂಪರೆಯನ್ನು ಸಮೃದ್ಧಗೊಳಿಸಿರುತ್ತಾರೆ.

ಸಾವಿರಾರು ಜನರ ಹೃದಯದಲ್ಲಿ ಧಾರ್ಮಿಕ ನಂಬಿಕೆಯೆನ್ನುವುದು ನಿಜವಾಗಿಯೂ ಬಲವಾಗಿ ಬೇರೂರಿದ್ದರೆ ಅದನ್ನು ರಕ್ಷಿಸಲು ರಾಜಕೀಯ ಪ್ರತಿಭಟನಾ ಪ್ರದರ್ಶನಗಳಾಗಲಿ, ಮುಗ್ಧರನ್ನು ಹತ್ಯೆಗೆ ಒಳಪಡಿಸುವುದಾಗಲಿ ಬೇಕಾಗಿರುವುದಿಲ್ಲ. ಅಥವಾ ಆ ನಂಬಿಕೆಯನ್ನು ರಕ್ಷಿಸುವುದಕ್ಕೋಸ್ಕರವೇ ಪುರಾತನಶಾಸ್ತ್ರದ, ಇತಿಹಾಸದ ನೆರವು ಪಡೆಯಬೇಕಿಲ್ಲ. ನಂಬಿಕೆಗೆ ಇರುವ ಮೌಲ್ಯ ಸ್ಥಾನದಂತೆಯೇ ಭೂವಿಜ್ಞಾನಶಾಸ್ತ್ರ ಮತ್ತು ಇತಿಹಾಸಕ್ಕೂ ಇರುತ್ತದೆ. ಅವೆರಡೂ ಬೇರೆ ಬೇರೆಯೇ.

ಪಾಕ್ ಕೊಲ್ಲಿಯಲ್ಲಿ ಸಮುದ್ರ ತಳದಲ್ಲಿರುವ ರಚನೆಯನ್ನು ಸ್ವಲ್ಪಮಟ್ಟಿಗೆ ತೆಗೆಯುವ ಅಗತ್ಯ ಸಾವಿರಾರು ಜನರ ಧಾರ್ಮಿಕ ನಂಬಿಕೆಗೆ ಧಕ್ಕೆ ತರುತ್ತದೆ ಎಂದು ಹೇಳುವುದು ಅಂತಹ ನಂಬಿಕೆಗೆ ಸಂದ ಗೌರವವೇ. ದೇವತೆಯೊಬ್ಬನಿಂದ ಕಟ್ಟಲ್ಪಟ್ಟಿದೆ ಎನ್ನಲಾಗುವ ಸಮುದ್ರ ತಳದ ಭೂವಿಜ್ಞಾನೀಯ ರಚನೆಯೇ ನಂಬಿಕೆಯ ಆಧಾರವಾದರೆ ಆ ನಂಬಿಕೆ ದುರ್ಬಲವಲ್ಲವೇ? ಧಾರ್ಮಿಕ ನಂಬಿಕೆಯನ್ನು ರಾಜಕೀಯ ದಾಳವಾಗಿಸಿಕೊಂಡು ಚುನಾವಣೆಗಳನ್ನು ಗೆಲ್ಲಬೇಕೆನ್ನುವ ಹೇಯ ಉದ್ದೇಶ ಧಾರ್ಮಿಕ ನಂಬಿಕೆಗೆ ಬಗೆಯುವ ದ್ರೋಹವಲ್ಲವೇನು?

ರಾಮ ಬದುಕಿದ್ದನೋ ಇಲ್ಲವೋ ಎನ್ನುವುದು ಪ್ರಸ್ತುತ ವಿವಾದವಲ್ಲ ಅಥವಾ ಸೇತುವೆ ಅವನ ಆಜ್ಞೆಯ ಮೇರೆಗೆ ಕಟ್ಟಲಾಯಿತೇ ಎನ್ನುವುದೂ ಸಹ ಅಲ್ಲ. ಅದಕ್ಕಿಂತ ಹೆಚ್ಚಾಗಿ ಪ್ರಸ್ತುತವಾಗಬೇಕಾದ ಪ್ರಶ್ನೆಗಳೆಂದರೆ ಧಾರ್ಮಿಕ ನಂಬಿಕೆಯನ್ನು ರಕ್ಷಿಸುವ ಸೋಗಿನಲ್ಲಿ ಯಾವ ಅಂಶಗಳನ್ನು ಬೇಕೆಂತಲೇ ಮರೆಮಾಚಲಾಗುತ್ತಿದೆ? ಎನ್ನುವುದು. ಇದನ್ನು ವಿಶ್ಲೇಷಿಸಲು ಉತ್ತಮ ಪರಿಣತಿ ಬೇಕು. ನೈಸರ್ಗಿಕವಾಗಿ ರಚಿಸಲ್ಪಟ್ಟಿರುವ ಸಮುದ್ರ ತಳದ ರಚನೆಯೊಂದನ್ನು ಕದಲಿಸಿದರೆ ದಕ್ಷಿಣ ಭಾರತ ಮತ್ತು ಶ್ರೀಲಂಕಾದ ಕರಾವಳಿಯ ಸಮತೋಲನಕ್ಕೆ ಧಕ್ಕೆ ಉಂಟಾಗಿ ಭವಿಷ್ಯದಲ್ಲಿ ಸುನಾಮಿಗಳಿಗೆ ಎಡೆ ಮಾಡಿಕೊಡುತ್ತದೆಯೆ? ಹಾಗಾಗದಂತೆ ಎಚ್ಚರ ವಹಿಸಿ ಸೇತುವೆಯನ್ನು ಕಟ್ಟಲು ಸಾಧ್ಯವೆ? ಇವು ನಮಗೆ ಹೆಚ್ಚಿನ ಮಹತ್ವದ ಪ್ರಶ್ನೆಗಳಾಗಬೇಕು.

ಸಂಪರ್ಕ ಮತ್ತು ಪರಸ್ಪರ ಕೊಡುಕೊಳ್ಳುವಿಕೆಯನ್ನು ಹೆಚ್ಚಿಸುವ ಅಂತಹ ಯೋಜನೆಯೊಂದರ ಆರ್ಥಿಕ ಪ್ರಯೋಜನಗಳು ಏನು? ಈ ಪ್ರಯೋಜನಗಳು ನಮ್ಮ ಸ್ಥಳೀಯ ಸಮುದಾಯವನ್ನು ತಲುಪಬಲ್ಲವೆ? ಹೇಗೆ? ಅಷ್ಟೇ ಮಹತ್ವದ ಪ್ರಶ್ನೆ ಇನ್ನೊಂದಿದೆ. ಇದರಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಅವುಗಳ ಭಾರತೀಯ ಸಹಾಯಕ ಸಂಸ್ಥೆಗಳು ವಹಿಸುವ ಪಾತ್ರವೇನು? ಇಂತಹ ಬೃಹತ್ ಯೋಜನೆಯೊಂದಕ್ಕೆ ಹಣ ಒದಗಿಸುವವರು ಯಾರು? ಅದರ ನಿಯಂತ್ರಣ ಯಾರ ಕೈಲಿರುತ್ತದೆ? ಈ ಎಲ್ಲ ಪ್ರಶ್ನೆಗಳಿಗೆ ವಿವರಣೆಗಳು ದೊರಕುವಂತಾಗಬೇಕು. ಈ ಅಂಶಗಳು ಪಾರದರ್ಶಕವಾದಾಗ ಮಾತ್ರ ಈಗಾಗಲೇ ಒಳಗೊಳಗೇ ನಡೆಯುತ್ತಿರುವ ಹಲವಾರು ಚಟುವಟಿಕೆಗಳು ಬೆಳಕಿಗೆ ಬರಬಲ್ಲವು. ಈ ಯೋಜನೆಯ ಬಗ್ಗೆ ಕೇಳಬೇಕಾದ ಪ್ರಶ್ನೆಗಳು ಇವು ಮತ್ತು ಈ ಪ್ರಶ್ನೆಗಳು ಸಾರ್ವಜನಿಕ ನೆಲೆಯಲ್ಲಿ ಮುಖ್ಯ ಸ್ಥಾನವನ್ನು ಪಡೆದುಕೊಳ್ಳಬೇಕು.

(ರೊಮಿಲಾ ಥಾಪರ್ ಒಬ್ಬ ಮಹತ್ವದ ಪ್ರಾಚೀನ ಭಾರತದ ಇತಿಹಾಸತಜ್ಞೆ. ಈ ಲೇಖನದ ವಿಸ್ತೃತ ರೂಪ Economic and Political Weekly, 29 September 2007 ರಲ್ಲಿ ಪ್ರಕಟವಾಗಿದೆ.) ■

"ಇಂಡಿಯಾ ಒಂದೇ ಎವರೆಸ್ಟ್ ಒಂದೇ
ಯಾ... ಯಾ....
ಗಾಂಧಿ ಒಬ್ರೆ, ಬುದ್ಧ ಒಬ್ರೆ....
ಯಡ್ಡಿಗೆ ಸಿ.ಎಂ. ಸೀಟು ಕೊಡಬೇಕಾ ?
ಯಡ್ಡಿಗೆ ಆಗಿದ್ದು ದ್ರೋಹಾನಾ ?
ನೋ...ನೋ....ನೋ...

ಇದು ಉಪೇಂದ್ರ-ಶಿವರಾಜಕುಮಾರ್ ಅಭಿನಯದ 'ಪ್ರೀತ್ಸೆ' ಸಿನಿಮಾದ ಸೂರ್ಯ ಒಬ್ಬ-ಚಂದ್ರ ಒಬ್ಬ ಹಾಡಿನ ಧಾಟಿಯಲ್ಲಿ ಕೊಪ್ಪಳ ಜಿಲ್ಲೆಯ ಕೆಲ ವೀರಶೈವ ಪಡ್ಡೆಗಳು ಅಂತರಂಗದಲ್ಲಿ ಹಾಡಿಕೊಳ್ಳುತ್ತಿರುವ ಪರಿ. ಆದರೆ ಯಡ್ಡಿಗೆ ಸಿ.ಎಂ. ಹುದ್ದೆ ಕೊಡದಿರುವುದು ವೀರಶೈವರಿಗೆ ಮಾಡಿದ ದ್ರೋಹ ಎಂದು ಬಿ.ಜೆ.ಪಿ.ಗಳು ಬೊಬ್ಬೆ ಹೊಡೆಯತೊಡಗಿದಾಗ ಕೊಪ್ಪಳದ ಶಾಸಕ ಸಂಗಣ್ಣ ಮತ್ತು ಕುಷ್ಟಗಿಯ ಮಾಜಿ ಶಾಸಕ ಶರಣಪ್ಪರಿಗೆ ದಿಗಿಲಾಗಲಾರಂಭಿಸಿತು. ಬರೀ ವಾರಕ್ಕೆ ಮುಂಚೆ ನಗರಸಭೆ, ಪುರಸಭೆಗಳಲ್ಲಿ ಜೆ.ಡಿ.ಎಸ್.ಗೆ ತಾನಾಗಿಯೇ ಬಹುಮತ ಬಂದದ್ದನ್ನು ಕಂಡು ಮೀಸೆ ತಿರುವಿದ್ದ ಇವರಿಗೆ ದಿಗಿಲಾಗಿದ್ದು ಸಹಜವೇ.

ಇವತ್ತು ಕೊಪ್ಪಳ-ಕುಷ್ಟಗಿ ರಾಜಕಾರಣವೆಂಬುದು ಆಳದಲ್ಲಿ ಮೇಲ್ವರ್ಗ-ಕೆಳವರ್ಗ ಎಂದು ಎರಡು ಹೋಳಾಗಿದೆ. ಸಿದ್ದರಾಮಯ್ಯನನ್ನು ಹೊರಹಾಕಿ ಜೆ.ಡಿ.ಎಸ್.ನ ಪಕ್ಷವನ್ನು ಛಿದ್ರ ಮಾಡಿಕೊಳ್ಳಲು ಸಾಧ್ಯವಾಗಿಲ್ಲ, ಬಿ.ಜೆ.ಪಿ. ಜೊತೆ ಸೇರಿದ್ದರಿಂದ ಮುಸ್ಲಿಂರೂ ಕೈ ಬಿಟ್ಟಿದ್ದಾರೆ. ಇಂತಹ ಹೊತ್ತಲ್ಲಿ ವೀರಶೈವರೂ ಯಡ್ಡಿ ಹಿಂದೆ ಹೋದರೆ ತಮ್ಮ ಹಾಸಿಗೆ ಬೀಳುವುದು ಓಟುಗಳಲ್ಲ-ದಿಟುಗಳು ಅಂತಾ ಗಾಬರಿಯಾದವರು ಈಗ "ಯಡ್ಡಿಗೆ ದ್ರೋಹ ಆಗಿಲ್ಲ, ಒಂದು ವೇಳೆ ಆಗಿದ್ದರೂ ಅದು ಅಂತಹ ದೊಡ್ಡದಲ್ಲ" ಎಂಬಂತೆ ಬೆಂಬಲಿಗರಿಗೆ ಸೂಚನೆ ನೀಡುತ್ತಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಅದು ಯಾವ ಘಳಿಗೆಯಲ್ಲಿ ಕೆಲ ವೀರಶೈವರು ಯಡ್ಡಿ ಪರ ಪ್ರತಿಭಟನೆ ಆರಂಭಿಸಿದರೋ ಅದು ಇಲ್ಲಿ ಕೆಲಸ ಮಾಡುತ್ತಿಲ್ಲ. ಮೊದಲೆಲ್ಲ ಮಾತಿಗೊಮ್ಮೆ ಭುಸ್ ಅನ್ನುತ್ತಿದ್ದ ಯಡ್ಡಿ ಈಗ ಠುಸ್ ಆಗಿರುವಾಗ ನಮ್ಮದೇನು ಎನ್ನುತ್ತ ಇಲ್ಲಿನ ಬಹುಸಂಖ್ಯಾತ ಲಿಂಗಾಯತರಲ್ಲ, ಬಹುತೇಕರು ಜೆ.ಡಿ.ಎಸ್.ನಲ್ಲಿದ್ದಾರೆ ಮತ್ತು ಅವರೆಲ್ಲ ನಂಬಿಕೊಂಡಿದ್ದ ಸಂಗಣ್ಣ, ಶರಣಪ್ಪನಂಥವರು ಈಗ ಮಾಜಿಯಾಗಿದ್ದಾರೆ. ಏನೋ ಎಲೆಕ್ಷನ್ ಬಂದ್ರೆ ನಾವೇ ಗೆಲ್ಲೋದು ಅಂತ ಭ್ರಮೆಯಲ್ಲೂ ಇದ್ದಾರೆ.


ಮಲ್ಲಿಕಾರ್ಜುನ ಅಗಡಿ ಬಣಜಿಗ ರಾಜ್ಯ ಸಂಘವೊಂದು ಯಡ್ಡಿ ಪರವಾಗಿ ಹೇಳಿಕೆ ನೀಡಿದ್ದು ಬಿಟ್ಟರೆ ಉಳಿದಂತೆ ವೀರಶೈವ ಮಹಾಸಭಾ ಯಡ್ಡಿ ಬಗ್ಗೆ ನಿರ್ಲಕ್ಷ್ಯ ತೋರಿದೆ. ಜಿಲ್ಲಾಧ್ಯಕ್ಷನಾಗಿರುವ ಗಂಗಾವತಿಯ ಪರಣ್ಣ ಮುನವಳ್ಳಿಗೆ ಕಾಂಗ್ರೆಸ್ಸಿಗರ ಜೊತೆ ಆಗಾಗ ಅನ್ಸಾರಿ ವಿರೋಧಿಗಳ ಗ್ಯಾಂಗಿನಲ್ಲಿ ಕಾಣಿಸಿಕೊಳ್ಳುವಾಗ ಇರುವ ಹುರುಪು ಯಡ್ಡಿ ವಿಷಯದಲ್ಲಿಲ್ಲ, ಬಹುಶಃ ಯಡ್ಡಿ ಪರ ಪ್ರತಿಭಟನೆ ಮಾಡಿದರೆ ಕಾಂಗ್ರೆಸ್ ಗೆಳೆಯರ ಕೆಂಗಣ್ಣಿಗೆ ಗುರಿಯಾಗಬೇಕಾಗಬಹುದೆಂಬ ಹೆದರಿಕೆ ಇರಬಹುದು. ಗಂಗಾವತಿಯಲ್ಲಿ ಬಿ.ಜೆ.ಪಿ. ಬಿಟ್ಟರೆ ಯಾರೂ ಜೆ.ಡಿ.ಎಸ್. ವಿರುದ್ಧ ಪ್ರತಿಭಟನೆ ಮಾಡಲಿಲ್ಲ, ಅಂದಹಾಗೆ ಗಂಗಾವತಿಯಲ್ಲಿ ವೀರಶೈವರು ಬಹುಸಂಖ್ಯಾತರೇ.

ಇನ್ನು ಕುಷ್ಟಗಿಯಲ್ಲಿ ಕೆಲ ವೀರಶೈವ ಯುವಕರು ಯಡ್ಡಿ ಪರ ಪ್ರತಿಭಟನೆಗೆ ಸಜ್ಜಾದರೆ ಕೆಲ ಜೆ.ಡಿ.ಎಸ್.ನ ಮುಖಂಡರೇ ತಡೆದಿದ್ದಾರೆ. ಹೋಗಲಿ ಕಡೇ ಪಕ್ಷ ಪ್ರೆಸ್‌ನೋಟ್ ಕೊಡೋಣವೆಂದರೆ ಆಗಲೂ ಮುಖಂಡರ ಕಾಣದ ಕೈಗಳು ತಡೆದಿವೆ. ಬಿ.ಜೆ.ಪಿ.ಯೊಂದೇ ಇಲ್ಲಿ ಪ್ರತಿಭಟಿಸಿದೆ. ಕುಷ್ಟಗಿ ತಾಲೂಕು ವೀರಶೈವ ಮಹಾಸಭಾದ ಅಧ್ಯಕ್ಷ ದೊಡ್ಡಯ್ಯ ಗದ್ದದಮಠಿಯೇ ಇಲ್ಲಿ ಜೆ.ಡಿ.ಎಸ್.ನಿಂದ ಜಿಲ್ಲಾ ಪಂಚಾಯತ್ ಮೆಂಬರ್. ಅಂದಮೇಲೆ ಆತ ತನ್ನ ಪಕ್ಷದ ವಿರುದ್ಧ ಪ್ರತಿಭಟಿಸಿ ಕುಮ್ಮಿ-ದೇವುರನ್ನು ಎದುರುಹಾಕಿಕೊಳ್ಳುವ ಸಾಹಸ ಹೇಗೆ ಮಾಡುತ್ತಾನೆ? ಒಂದು ವೇಳೆ ಇಲ್ಲಿ ಯಡ್ಡಿ ಪರ ಸಣ್ಣದೊಂದು ವೀರಶೈವರ ಪ್ರತಿಭಟನೆ ಆದರೆ ಸಾಕು ಕೆ. ಶರಣಪ್ಪನಿಗೆ ಟಿಕೆಟ್ ಕಟ್. ಯಾರಾದರೂ ವೀರಶೈವ ಯುವಕರು ಪ್ರತಿಭಟನೆ ಮಾಡೋಣವೆಂದರೆ "ಬಿಡ್ರಿ ಆ ಯಡಿಯೂರಪ್ಪನಿಗೆ ಅಧಿಕಾರ ದಾಹ, ಅದಕ್ಕೆ ಧರ್ಮಯಾತ್ರೆ ಅರ್ಧಕ್ಕೆ ನಿಲ್ಲಿಸಿ ತುಮಕೂರಿನಿಂದ ಬೆಂಗಳೂರಿಗೆ ಓಡಿ ಹೋಗಿಲ್ಲವಾ? ಮುಂದೆ ಯಾರಿಗೂ ಬಹುಮತ ಇಲ್ಲ ಎಂದು ಗೊತ್ತಿರುವ ಯಡಿಯೂರಪ್ಪ ಈಗಲೇ ಮಾತಿಗೊಮ್ಮೆ ಕುಮಾರಸ್ವಾಮಿಗೆ ಸನ್ಮಾನ್ಯರು ಅಂತ ಮಸ್ಕಾ ಹೊಡೆಯುತ್ತಿದ್ದಾರೆ. ಅಂಥದರಲ್ಲಿ ನೀವ್ಯಾಕೆ ಗಂಟಲು ಹರಕೊಂಡು ಸುಮ್ಮನೆ ಎದುರು ಹಾಕ್ಕೋತೀರಿ" ಅನ್ನೋ ತರಹ ಮಾತಾಡಿ ಅವರ ಉತ್ಸಾಹಕ್ಕೆ ತಣ್ಣೀರು ಹಾಕುತ್ತಿದ್ದಾರೆ.

ಇಲ್ಲಿ ವೀರಶೈವರಲ್ಲಿ ಅಲ್ಪಮಟ್ಟಿನ ಒಗ್ಗಟ್ಟಿದೆಯಾದರೂ ವೀರಶೈವದಲ್ಲಿರುವ 36 ಪಂಗಡದಲ್ಲಿ 35 ಪಂಗಡಗಳು ಗೆಜೆಟ್‌ನಲ್ಲಿ ನಮೂದಾಗಿವೆ. ಆದರೆ ಪಂಚಮಸಾಲಿ ಪಂಗಡವನ್ನು ಗೆಜೆಟ್‌ನಲ್ಲಿ ಮುದ್ರಿಸಲು ಯಡ್ಡಿ ಆಸಕ್ತಿ ತೋರಿಸಿಲ್ಲ, "ಬಹುಸಂಖ್ಯಾತರಾದ ನಾವು ವೀರಶೈವರಿಗೆ ಅನ್ಯಾಯ ಎಂದಾಗ ನಾವು ಬೇಕು, ಸರ್ಕಾರಿ ಲಿಸ್ಟ್‌ನಲ್ಲಿ ನಾವು ಬೇಡವಾ" ಅಂತ ಬಿಸಿ ರಕ್ತದ ಯುವಕರೇ ಪ್ರಶ್ನಿಸುತ್ತಿದ್ದಾರೆ. ಒಟ್ಟಿನಲ್ಲಿ ಜೆ.ಡಿ.ಎಸ್.ನಿಂದ ಯಡ್ಡಿಗೆ ಅದರಲ್ಲೂ ವೀರಶೈವರಿಗೆ ಅನ್ಯಾಯವಾಗಿದೆ ಎಂಬ ಅನುಕಂಪದ ಅಲೆ ಹುಟ್ಟಿಸಲು ನೋಡಿದವರಿಗೆ ಇಲ್ಲಿ ನಿರಾಶೆಯಾಗಿದೆ. ಸ್ವತಃ ಅದರ ನಾಯಕರೇ ನಾಪತ್ತೆಯಾಗಿದ್ದಾರೆ. ಪಾಪ ಯಡಿಯೂರಪ್ಪ

ಇದೇ 18 ರಂದು ಕೊಪ್ಪಳ ಜಿಲ್ಲೆಗೆ ಬರುವ ಯಡ್ಡಿಗೆ [illegible]

■ [illegible]



ಚೆನ್ನಮ್ಮನ ತಾಳಿ ಉಳಿತಲ್ಲ ಅಷ್ಟೆ ಸಾಕು ಬುಡೊ

ಕಾಳಮಾವ ಚಿಂತಾಕ್ರಾಂತನಾಗಿ ಕುಳಿತಿದ್ದ. ಏಕೆಂದರೆ ಈಗ ಒಂದೇ ಒಂದದ ಮಳೆ ಹೊಡೆದಿದ್ದರೂ ಸಾಕಿತ್ತು ಪೈರು ಒಡೆ ಕಡುಬಿಡುತ್ತಿತ್ತು. ಆದರೆ ನೋಡುನೋಡು ತ್ತಿದ್ದಂತೆ ಊರ ಸುತ್ತಲ ಹೊಲಗಳೆಲ್ಲಾ ಬತ್ತಿಹೋಗ ತೊಡಗಿದ್ದವು. ಆದ್ದರಿಂದ ದುಗುಡಗೊಂಡ ಅವನೆದುರು ಪ್ರಸ್ತುತ ರಾಜಕಾರಣ ಮಾತನಾಡುವ ಧೈರ್ಯ ಅಲ್ಲಾರಿಗೂ ಬರಲಿಲ್ಲ. ಕೊನೆಗೆ ಸಾವಿನ ಸುದ್ದಿಗೆ ಕೈಹಾಕಿದ ಸೀರ,

"ಬಮ್ಮಾಯಿ ಆಗ್ಲೆ ತೀರೋಗಿರಲಿಲ್ವೆ?" ಎಂದ.

"ಏ, ಆಗ್ಲೆ ತೀರೋಗಿದ್ರೆ ಈಗ ತಿರುಗ ತೀರೋಯ್ತ ದ್ದೇನೊ? ಪಾಪ ಬಾಳದಿನ ಕುಂತುಬುಟ್ಟಿದ್ದ. ಈಗ ತೀರಿಕಂಡ ಅಷ್ಟೆಯ" ಎಂದ ಉಗ್ರಿ.

"ಅವುನು ದ್ಯಾವೇಗೌಡುನಿಗಿಂತ ಹಿರಿಯನೇನ್ಲ?"

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಊ. ಎಳೆಂಟು ವರುಸ ದ್ವಡ್ಡೋನು. ಆದ್ರು ದ್ವಡ್ಡ ಮನ್ಸ."

"ಮಕ್ಕಳೇಸಿದ್ದವೂ?" ಎಂದಳು ಜುಮ್ಮಿ.

"ಮುರ್ನಾಕಿರಬೇಕು, ಆ ಬಸುರಾಜ ಬಮ್ಮಾಯಿ ಅನ್ನೊನು ಇವುನ ಮಗನೆಯ, ಅವುನು ವಳ್ಳೆ ಹುಡುಗ."

"ಅಪ್ಪನಂತೆ ಮಗ. ಅಪ್ಪ ವಳ್ಳೋನಾಗೊವತ್ತಿಗೆ ಮಗನೂ ವಳ್ಳೆ ಮನ್ಸ" ಎಂದ ಸೀರ.

"ಅದು ನಿಜ. ಬಮ್ಮಾಯಿ ಬದುಕಿದ್ದಾಗ ಬಸವಣ್ಣನಂಗೆ ಬದುಕಿದ್ದ ಕನೊ. ಮುಂದೋದ್ರೆ ಹಾಯಿಲಿಲ್ಲ, ಹಿಂದಕೋದ್ರೆ ವದಿಲಿಲ್ಲ ವಳ್ಳೆ ರಾಜಕಾರಣ ಮಾಡಿದ."

"ದ್ಯಾವೇಗೌಡ್ನ ಅವುನು ಧ್ವತೆ ಎತ್ತಿದ್ದುಂಗಿದ್ರು ಅಲವೆ?"

"ಊ, ಆದ್ರು ದ್ಯಾವೇಗೌಡ ಅಂಥೋನಿಗೆ ಕೈ ಕೊಟ್ಟು ಎತ್ತಿ ಯಸ್ದುಬುಟ್ಟ ಅತ್ಲಾಗೆ."

"ಅದ್ಯಾವಾಗ್ಯಸ್ದುದ್ದಾ?" ಎಂದ ಕಾಳಮಾವ ತಾತ್ಸಾರದಲ್ಲಿ.

"ಆಗ ರಾಮಕಿಷ್ನ ಯಗಡೆ ಇಳುದು ಬಮ್ಮಾಯಿ ಮುಖ್ಯಮಂತ್ರಿ ಮಾಡಿದ್ನಲ್ಲ ಮಾವ. ಆಗ ಇದೇ ದ್ಯಾವೇಗೌಡ್ನು ಮಂತ್ರಿಯಾಗಿದ್ದ. ಆದ್ರು ಬಮ್ಮಾಯಿ ಮುಖ್ಯಮಂತ್ರಿಯಾಗಿರದ ಸಯಿಸಕ್ಯಾಗದೇ ಯಂಗಟಸುಬ್ಬ ಅಂತ ವಬ್ಬ ರಾಜ್ಯಪಾಲಿದ್ದ, ಅವುನತ್ರಕೋಗಿ ಚಾಡಿ ಹೇಳಿ ಸರ್ಕಾರ ವಜಾ ಮಾಡ್ಸಿ ರಾಜ್ಯಪಾಲ್ರು ಆಡಳತ ತರಂಗೆ ಮಾಡಿದ್ದ."

"ಈಗ್ಲು ಅಂಗೆ ಮಾಡ್ಯವುನಲ್ಲ ಹೇಳು?" ಎಂದ ಸೀರ.

"ಅಂಗೆ ಚಾಡಿ ಹೇಳಿ ಸರ್ಕಾರ ತಗಸಕ್ಯಾದತ್ಲ?" ಎಂದ ಕಾಳಮಾವ.

"ತಗಿಸಿದ್ನಲ್ಲ ಹೇಳು. ಆ ಯಂಗಟಸುಬ್ಬ ಇವುನ ಮಾತುಕಟಗಂಡು ಮಾಡಿದ ಕ್ಯಲಸಕ್ಕೆ ಸರಿಯಾಗಿ ಕೋರ್ಟು ಮಕ್ಕುಗಿತು. ಆದ್ರೇನು ಮಾಡೀ, ಬಮ್ಮಾಯಿ ತಿರುಗ ಮುಖ್ಯಮಂತ್ರಿ ಆಗಂಗಿರಲಿಲ್ಲ, ಆಟೊತ್ತಿಗಾಗ್ಲೆ ಮೊಯ್ಲಿ ಬಂದು ಕುಂತಿದ್ದ."

"ಓಹೊಹೊಹೊ ಆಟು ದಿನಾಗೋಯ್ತು ಅನ್ನು?"

"ಊ. ಈ ದ್ಯಾವೇಗೌಡ ಜ್ವತೆಲಿದ್ದಕಂಡು ಮಾಡಿದ ಕ್ಯಲಸ್ಕೆ ಬಮ್ಮಾಯಿಗೆ ಬೇಜಾರಾಗಿ ಅದೇ ಬೇಜಾರಲ್ಲಿ ಮಗ್ಗುಲುಕೊಟ್ಟೋನು ಮ್ಯಾಕ್ಕೇಳ್ಳಿಲ್ಲ" ಎಂದ ಉಗ್ರಿ.

"ವಯಿಸ್ಯಾರಪ್ಪನ ಮನೆದ್ನ?" ಎಂದ ಕಾಳಮಾವ.

"ಈಗ್ಲು ದ್ಯಾವೇಗೌಡ ಈ ಬಿಜೆಪಿಗಳ ಕೈಗೆ ಚಿಪ್ಪು ಕೊಟ್ಟ, ಅದೇ ಟೇಮಿಗೆ ಬಮ್ಮಾಯಿ ತೀರಿಕಂಡವುನೆ. ನೋಡಿದ್ಯಂಗದೆ" ಎಂದ ಸೀರ.

"ಅವುರಾಗ್ಲೆ ಚಿಪ್ಪಿಡಕಂಡು ಹೊಂಟೆಬುಟ್ರು ಚಿಗಪ್ಪ ಇನ್ನ ಕೂಗ್ತರೆ ಅಂದ್ರೆ ಮೈಕೆ ಬ್ಯಾಡ ಅವುರಿಗೆ" ಎಂದು ವಾಟಿಸ್ಸೆ ಬಂದ.



"ದಸರ ನೋಡಕ್ಹೋಯ್ತಿನಿ ಅಂದಿದ್ಯೋನು ಇಲ್ಲೆಯಿದ್ದಿಯಲ್ಲಾ?" ಎಂದಳು ಜುಮ್ಮಿ.

"ನಾನ್ಯಾವಾಗ ದಸರ ನೋಡ್ತಿನಿ ಅಂದಿದ್ದಿನಕ್ಕಾ, ಆದರಲ್ಲೂ ಈಗ ಅಧಿಕಾರಿಗಳು ಮಾಡೊ ದಸರ ನೋಡಕ್ಯಾಯ್ತದಾ. ಪಾಪ ಕುಮಾರಸ್ವಾಮಿ ಮಾಡಿರೊ ಕ್ಯಲಸಕ್ಕೆ ಸಿದ್ದಗಂಗೆ ಸ್ವಾಮಿ ನಾನು ಬರದೇಯಿಲ್ಲ ಅಂದುಬುಟ್ರು ಕಣಕ್ಕ."

"ಅವುರು ದಸರ ನೋಡಕ್ಕೆ ಬತ್ತಿದ್ರೆ?"

"ಓ ನಿನಿಗೆ ಡೀಟ್ಯೈಲಾಗಿ ಹೇಳಬೇಕೇನಾ. ನೋಡಕ್ಕಾ, ವರುಸಾ ವರುಸ ದಸರ ಉದ್ಘಾಟನೆಗೆ ಅಂತ ದೊಡ್ಡ ದೊಡ್ಡ ಜನ ಕರಿತಿದ್ರು. ಈ ವರ್ಸ ಸಿದ್ದಗಂಗೆ ಸ್ವಾಮಿ ಕರದಿದ್ರು. ಆದ್ರೆ ಕುಮಾರಸ್ವಾಮಿ ಎಡೂರಪ್ಪನಿಗೆ ಅಧಿಕಾರ ಬುಟ್ಟು ಕೊಡ್ಲಿಲ್ಲ ಅಂತ ಸಿದ್ದಗಂಗೆ ಸ್ವಾಮಿ ತಪ್ಪಿಸಿಗಂಡ್ರು."

"ಅವುರಿಗೂ ಇದುಕು ಏನ್ಲ ಸಮಂದ?" ಎಂದ ಸೀರ.

"ಅಯ್ಯೋ ನೀನೊಬ್ಬ ಪೂಲಿಶ್ ಚಿಗಪ್ಪ ಇತ್ತೀಚೆಗೆ ಯಲ್ಲಾ ಸ್ವಾಮಿಗಳೂ ರಾಜಕಾರಣಿಗಳ ಜೊತೆ ಸೇರಿಕಂಡು ಮಾನಕಳಕಂಡು ಕುಂತವುರೇ."

"ಅದು ನನಿಗೂ ಗೊತ್ತು ಮುಂದಕೇಳು?"

"ಈ ಎಡೂರಪ್ಪ ಸಿದ್ದಗಂಗೆ ಸ್ವಾಮಿ ತೂಕದ ಚಿನ್ನ ಕೊಡ್ತಿನಿ, ಬೆಂಗಳೂರಲ್ಲಿ ಹತ್ತು ಲಕ್ಷ ಜನ ಸೇರಿಸಿ ನೂರೊಂದು ಕೆಜಿ ಚಿನ್ನ ಕೊಡ್ತಿನಿ ಅಂದಿದ್ದ. ಅಂಥೋನಿಗೆ ಅಧಿಕಾರ ಬುಟ್ಟು ಕೊಡ್ಲಿಲ್ಲ ಈ ಕುಮಾರ ಅಂದ್ರೆ

ಧರ್ಮಯುದ್ಧಕ್ಕೆ ಮಠಾಧೀಶರ 'ರಣಹಾರ'

ಧರ್ಮಯುದ್ಧಕ್ಕೆ ತುಡಿಯುತ್ತಿತ್ತು ಧೀರ ಹಿಂದೂ ಪಡೆ.

ಯಾರ ವಿರುದ್ಧ ಈ ವೀರರ ಹೋರಾಟ?

ವಚನ ಭ್ರಷ್ಟರ ವಿರುದ್ಧ!

ಸತ್ಯಹರಿಶ್ಚಂದ್ರರೇ ಇವರು?

ನಿಸ್ಸಂಶಯವಾಗಿ!

ವಚನಭ್ರಷ್ಟತೆಯ ಪೇಟೆಂಟೇ ಇವರ ನಾಯಕರ ಬಳಿ ಇದೆ, ಇದರ ಮನೆ ದೇವರೇ ಇವರು ಎಂದು ಆರೋಪಿಸುವವರೂ ಇರಬಹುದು. ಇಂತಹವರಿಗೆ ಒಂದು ವಿಷಯ ತಿಳಿದಿಲ್ಲ, ಇವರ ನಾಯಕರ ವಚನಭ್ರಷ್ಟತೆ ಹಿಂದೂ ಧರ್ಮದ ಉಳಿವಿಗಾಗಿ! ಈಗಿನ ವಚನಭ್ರಷ್ಟತೆ ಹಿಂದೂ ಧರ್ಮದ ನಾಶಕ್ಕಾಗಿ!

ಯುದ್ಧ ಮಾಡಲು ರಣವೀಳ್ಯ ಪಡೆಯಬೇಕಲ್ಲ. ನಡೆಯಿತು ಪಡೆ ಸಿದ್ಧಗಂಗಾಮಠದ ಕಡೆ.

ಯಾಕೆ ಆ ಮಠವನ್ನೇ ಆಯ್ಕೆ ಮಾಡಿದರು? ಅಲ್ಲಿನ ಮಠಾಧಿಪತಿಗಳು ಲಿಂಗಾಯತ ಮತಸ್ಥರೆಂದೆ?

ಅಲ್ಲ ಜಾತಿ, ಮಂತ್ರ, ಪಂಥ ಮೀರಿ ನಿಂತಿರುವ ಮಠ ಅದು. ಶತಾಯುಷಿ ಶಿವಕುಮಾರ ಸ್ವಾಮಿಗಳು ನಡೆದಾಡುವ ದೇವರು ಎಂದೇ ಗುರುತಿಸಿಕೊಂಡವರು.

(ಮಠಗಳ ಕುರಿತ ಒಂದು ಆರೋಪ ಇದೆ. ಮಠಾಧಿಪತಿಗಳು ಸಾಮಾನ್ಯ ದಿನಗಳಲ್ಲಿ ಎಲ್ಲ ಮತದ ಭಕ್ತರನ್ನೂ ಸಮಾನಭಾವದಿಂದ ಕಾಣುತ್ತಾರೆ. ಯಾವುದೇ ಬೇಧ ಭಾವ ಎಣಿಸದೆ ಪಾದಪೂಜೆ ಮಾಡಿಸಿಕೊಂಡು ಕಾಣಿಕೆ ಪಡೆಯುತ್ತಾರೆ. ನಿರ್ಣಾಯಕ ಸಂದರ್ಭದಲ್ಲಿ ಮಾತ್ರ ಯಾಕೋ ಏನೋ ತಮ್ಮ ಜಾತಿಯವರ ಕಡೆ ಒಲವು ಹರಿಸುತ್ತಾರೆ! ಈ ಮಠ ಹಾಗಿಲ್ಲ ಎಂದೇ ಭಾವಿಸೋಣ.)

ಶತಾಯುಷಿ ಸ್ವಾಮೀಜಿಗಳು ನಗೆ ಮುಖದಲ್ಲಿ ಧರ್ಮಯುದ್ಧಕ್ಕೆ ಪಣ ತೊಟ್ಟಿದ್ದ ನಾಯಕರುಗಳಿಗೆ 'ರಣಹಾರ' ಹಾಕಿದರು!

ಧರ್ಮಯುದ್ಧಕ್ಕೆ ಕೂಗಿದರು ರಣಕಹಳೆ!

ದೇವೇಗೌಡ, ಅವರ ಕುಟುಂಬ ಜನ್ಮ ಜಾಲಾಡಿದರು!

ತಮ್ಮ ಅದ್ವಿತೀಯ ಪದ ಪ್ರಯೋಗಗಳನ್ನು ಕರ್ನಾಟಕದೆಲ್ಲೆಡೆ ಪ್ರಸರಿಸಬೇಕೆಂದಿದ್ದರು. ಆದರೆ.... ಅಕಟಕಟಾ ಏನೆಂಬುದು ಈ ದೈವಲೀಲೆಯ.... ಆ ಪಾಳಾದ ಕಾಂಗ್ರೆಸ್ ಸರ್ಕಾರ ವಿಧಾನಸಭೆಯನ್ನು ವಿಸರ್ಜಿಸದೆ ಅಮಾನತ್ತಿನಲ್ಲಿಟ್ಟಿತು! ಈ ಒಂದು ಆಜ್ಞೆ ಕೆಡವಿತು ಯಡಿಯೂರಪ್ಪರನ್ನು ಧರ್ಮಸಂಕಟದಲ್ಲಿ!



ಜನತಾ ನ್ಯಾಯಾಲಯಕ್ಕೆ ಹೋಗ್ತೀವಿ; ಮತದಾರ ಮಹಾಶಯರನ್ನೇ ತೀರ್ಪು ನೀಡಿ ಅಂತ ಕೇಳ್ತೀವಿ; ವಚನಭ್ರಷ್ಟರೊಂದಿಗೆ ಯಾವುದೇ ಸಂಬಂಧ ಇಲ್ಲ ಎಂದೆಲ್ಲ ಹಾರಾಡಿದ್ದ ಯಡಿಯೂರಪ್ಪಗೆ ಧರ್ಮಸಂಕಟ ಎಲ್ಲಿಯದು ಎಂದು ಕೆಲವರಿಗೆ ಅನ್ನಿಸಬಹುದು. ಅವರಿಗೆ ಮುಖ್ಯಮಂತ್ರಿಯ ಗಾದಿಯ ಮೇಲೆ ಯಾವ ಆಸೆಯೂ ಇಲ್ಲ! ಆದರೆ ಅನಾಯಾಸವಾಗಿ ದೊರಕುವುದಾದರೆ ದೊರಕಲಿ ಎಂಬ ಮನಸ್ಸು ಯಾರಿಗೆ ಇರೊಲ್ಲ ಹೇಳಿ.

ನೀಡಿದರು ಯಡ್ಡಿ ಧರ್ಮಯುದ್ಧಕ್ಕೆ ತಾತ್ಕಾಲಿಕ ರಜ! ನಡೆಯಿತು ಅವರ ಸವಾರಿ ಬೆಂಗಳೂರಿಗೆ. ಅಲ್ಲಿ ಮಾಧ್ಯಮದ ಎದುರು ಹಿಂದೆ ಮಾಡಿದಂತೆ ವಚನ ಭ್ರಷ್ಟರನ್ನು ಹೀಯಾಳಿಸುವಂತಿಲ್ಲ, ಅವರ ಬೆಂಬಲ ಬೇಕಿತ್ತಲ್ಲ. ಹಾಗಂತ ಹೊಗಳುವ ಹಾಗೂ ಇಲ್ಲ. ಮರ್ಯಾದೆ ಪ್ರಶ್ನೆ! ಏನು ಮಾಡಿದರು ಅಂದರೆ ಅವರಿಂದ ತಲೆ ಮರೆಸಿಕೊಂಡರು! ಅಕಟಕಟಾ ಏನಿದು ದುರ್ವಿಧಿ, ಅಲ್ಲೂ ಬರಬೇಕೆ ಅಡ್ಡಿ ದೇವೇಗೌಡರ ರೂಪದಿ!

ಏನಾಯಿತು ಧರ್ಮಯುದ್ಧದ ಗತಿ?

ಯುದ್ಧ ನಿಂತೇ ಹೋದರೆ.... ಯಡ್ಡಿ ಮುಖ್ಯಮಂತ್ರಿ ಆಗಿಯೇ ಹೋದರೆ..... ಬೆದರಿತು ಅನಂತ್‌ಕುಮಾರ್ ಪಡೆ. ಹೂಡಿತು ಷಡ್ಯಂತ್ರ. ಜಾತ್ಯತೀತ ದಳದ ಮೇಲೆ ಬಿಟ್ಟರು ವಾಗ್ಬಾಣ. ಹೀನಾಮಾನ ತೆಗಳಿದರು, ಲೇವಡಿ ಮಾಡಿದರು ಅದರ ನಾಯಕರ. ಮತ್ತೆ ಒಂದಾಗದಂತೆ ಭದ್ರಪಡಿಸಿದರು.

ಪಾಪ ಯಡಿಯೂರಪ್ಪಗೆ ಈ ಅನಂತ್‌ಕುಮಾರ್ ಗುಂಪು ಬಿಸಿತುಪ್ಪ, ಹೀಯಾಳಿಸಲು ಇದು ಸಂದರ್ಭ ಅಲ್ಲ ಅನ್ನುವ ಹಾಗೂ ಇಲ್ಲ, ಹೀಯಾಳಿಸಿ ಎಂದು ಬೆನ್ನು ಚಪ್ಪರಿಸುವಂತೆಯೂ ಇಲ್ಲ! 'ಮಂಗಳೂರಿನಿಂದ ಅವರು ಹಾರಿದರು ಶಿವಮೊಗ್ಗೆಗೆ. ಅಲ್ಲಿ ತೋಡಿಕೊಂಡರು ಮನದ ಅಳಲ-ಜಾತ್ಯತೀತ ಜನತಾದಳ ಬಾಹ್ಯ ಬೆಂಬಲ ನೀಡಿದರೆ ನಾನು ಸರ್ಕಾರ ರಚಿಸಲು ಸಿದ್ಧ!

ಬೆಂಗಳೂರಿಗೆ ಬಂದು ಇದಕ್ಕಾಗಿ ಗುಪ್ತ ಹೋರಾಟ ನಡೆಸಿದರು!

ದಳದ್ದೇನು ಉತ್ತರ ಇವರ ಮಾತಿಗೆ?

ಮತ್ತೆ ಭಾಜಪ ಜೊತೆ ಕೈ ಜೋಡಿಸಲು ಸಿದ್ಧರಿಲ್ಲ!

ಆಯಿತು ಮುಖಭಂಗ ಯಡ್ಡಿಗೆ.

ಧರ್ಮಯುದ್ಧ? ಸ್ಥಗಿತಗೊಂಡಿತ್ತು!

ಮತ್ತೆ ಅದಕ್ಕೆ ಜೀವ ನೀಡಬೇಕಲ್ಲ, ಮುಖ ಉಳಿಸಿಕೊಳ್ಳಬೇಕಲ್ಲ, ಯಡ್ಡಿ ಘೋಷಿಸಿದರು-ಯಾವುದೇ ಕಾರಣಕ್ಕೂ ನಾವು ಸರ್ಕಾರ ರಚಿಸಲು ಸಿದ್ಧರಿಲ್ಲ!

ಆ ವಿಧಿ ಅನ್ನೋದು ಹೀಗೆ ಯಡಿಯೂರಪ್ಪನವರನ್ನು ಕಾಡಬಾರದಾಗಿತ್ತು, ನಿಮಿಷಕ್ಕೊಂದು ಹೇಳಿಕೆ ನೀಡುತ್ತಿರುವ ಇವರನ್ನು ನೋಡಿದ ಜನ 'ಪಾಪ ಮುಖ್ಯಮಂತ್ರಿ ಆಗಲಿಲ್ಲವಲ್ಲ ಅನ್ನೋ ಸಂಕಟದಲ್ಲಿ ಅವರಿಗೆ ಬುದ್ಧಿಭ್ರಮಣೆ ಆಗಿರುವಂತಿದೆಯಲ್ಲಾ... ಛೇ ಹೀಗಾಗಬಾರದಿತ್ತು' ಅಂತ ಹಾದಿಬೀದೀಲಿ ಆಡಿಕೊಳ್ಳುವ ಹಾಗಾಯಿತಲ್ಲಾ.....

* * * * * *

ಅಸಹ್ಯ ತರಿಸುವಂತೆ ನಾಯಕರುಗಳು ನಡೆದುಕೊಳ್ಳುತ್ತಿರುವುದನ್ನು ನೋಡಿ ಜನ ನೋವು, ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಅದರಲ್ಲಿ ಒಂದೆರಡು ತುಣುಕುಗಳು ಇಲ್ಲಿವೆ.

ಕೆಲವು ದೊಡ್ಡ ಮನುಷ್ಯರು ಇದ್ದಾರೆ. ಅವರ ಹುಟ್ಟಿದ ದಿನವನ್ನು ಒಂದು ವಿಶಿಷ್ಟ ದಿನವನ್ನಾಗಿ ಗುರುತಿಸುತ್ತಾರೆ.

ಮಹಾತ್ಮಾಗಾಂಧಿ ಹುಟ್ಟಿದ ದಿನ: 'ವಿಶ್ವ ಅಹಿಂಸಾ ದಿನ'

ಅಣಕ

ಎಚ್.ಎಲ್. ಕೇಶವಮೂರ್ತಿ

ಸರ್ವಪಲ್ಲಿ ರಾಧಾಕೃಷ್ಣನ್ ಹುಟ್ಟಿದ ದಿನ: 'ಅಧ್ಯಾಪಕರ ದಿನ'

ರಾಜೀವ್ ಗಾಂಧಿ ಹುಟ್ಟಿದ ದಿನ: 'ಸದ್ಭಾವನಾ ದಿನ'

ಜವಹರಲಾಲ್ ನೆಹರು ಹುಟ್ಟಿದ ದಿನ: 'ಮಕ್ಕಳ ದಿನ'

ಒಂದು ವೇಳೆ ಮಾಜಿ ಪ್ರಧಾನಿ ದೇವೇಗೌಡರ ಹುಟ್ಟಿದ ದಿನವನ್ನು ನೆನಪಿಸಿಕೊಳ್ಳಬೇಕೆಂದರೆ ಅದನ್ನು ಏನೆಂದು ಕರೆಯಬೇಕು?

ಹರದನಹಳ್ಳಿ ದೇವೇಗೌಡ ಹುಟ್ಟಿದ ದಿನ: 'ಆಪತ್ತಿನ ದಿನ!'

ಇದು ಆಯಿತಲ್ಲ, ಮಾಜಿ ಪ್ರಧಾನಿ ಈಗ ಏನು ಮಾಡುತ್ತಿರಬಹುದು ಎಂಬ ವಿಷಯವನ್ನು ಆದಿತ್ಯ ಸಿನ್ಹ ಸ್ವಾರಸ್ಯಕರವಾಗಿ ವಿವರಿಸುತ್ತಾರೆ:

ನಾನು ಈ ಪ್ರಶ್ನೆಯನ್ನು ಎತ್ತಿರುವುದು ಅಧಿಕಾರದಿಂದ ಇನ್ನೇನು ಇಳಿಯಲಿರುವ ಮನಮೋಹನ್‌ಸಿಂಗ್ ಅವರು ತಮ್ಮ ಮುಂದಿನ ಜೀವನ ಶೈಲಿಯನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂದು ತಿಳಿಯಲು ಅಲ್ಲ.

ಶಿವಕುಮಾರಸ್ವಾಮಿಗೆ ಬೇಜಾರಾಗದಿಲವೆ. ಆದ್ರೆ ಅವುರು ದಸರಾ ಉದ್ಘಾಟ್ನೆಗೆ ಬರದಿಲ್ಲ ಅಂದ್ರು, ಅದ್ಕೆ ಕುಮಾರಸ್ವಾಮಿ ನೀವಿಲ್ಲದಿದ್ರೆ ಇನ್ನೊಬ್ಬ ಅಂತ ಚುಂಚನಗಿರಿ ಸ್ವಾಮಿಗೇಳಿದ. ಅವುರೋಗಿ ದಸರ ಚಾಲು ಮಾಡಿದ್ರು."

"ಅಂತೂ ಈ ಅಪ್ಪ ಮಕ್ಳು ಸುಮ್ನಿದ್ದ ಸ್ವಾಮಿಗಳನೂ ಹಾಳು ಮಾಡಿದ್ರು ಅನ್ನು!" ಎಂದ ಸೀರ.

"ಅಂಗೇಳಕ್ಕೆ ಬರದಿಲ್ಲ, ಅವುರಾಳುಮಾಡಕ್ಕೆ ಇರದು. ಆದ್ರೆ ನೀವು ಅವುಕಾಸ ಕೊಡದಂಗಿರಬೇಕಾಗಿತ್ತು, ಇವತ್ತು ನೋಡು ಎಡೂರಪ್ಪನಿಗೆ ಸಹಾಯ ಮಾಡಕ್ಕೆ ಬಂದ ಸ್ವಾಮಿಗಳ ಕತೆ ಏನಾಯ್ತು, ರಿಯಲಿ ಇಟೀಸ್ ಸೇಂ ಟು ಅವರ್ ಸ್ವಾಮಿ ಕಮ್ಯುನಿಟಿ."

"ಈಟ್ನಲ್ಲ ಆದ್ರು ದ್ಯಾವೇಗೌಡ್ನಾಕೆ ಮಗನ್ನ ತದದಾ" ಎಂದ ಸೀರ.

"ಅಯ್ಯೋ ದ್ಯಾವೇಗೌಡನ ಮನೆಲಿ ಮಾರಾ ಮಾರಿನೆ ನ್ಯಡಿತಂತೆ ಕಣ ಮಾವ" ಎಂದ ಉಗ್ರಿ.

"ಏನ್ನಡಿತ್ತ?" ಎಂದ ಕಾಳಮಾವ.

"ಕುಮಾರಸ್ವಾಮಿ ನಾನು ಮಾತು ಕೊಟ್ಟಿರಂಗೆ ಎಡೂರಪ್ಪನಿಗೆ ಅಧಿಕಾರ ಕೊಡ್ತಿನಿ ಅಂತ ಕುಂತಿದ್ನಂತೆ. ಆಗ ದ್ಯಾವೇಗೌಡ್ರು ನಾನು ಕತ್ತು ಕುಯ್ಕಂಡು ಸತ್ತೋಯ್ತಿನಿ ಅಂತ ಎದ್ದು ಚೂರಿ ಹುಡುಕಿದ್ರಂತೆ."

"ಅಹಹ ನಿಜವೇನ್ನ?" ಎಂದಳು ಜುಮ್ಮಿ.

"ಊ ಕಣೇ. ಆಗ ಚೆನ್ನಮ್ಮ ವಳಗಡೆಯಿಂದ ನನ್ನ ಮಾಂಗಲ್ಯ ಉಳುಸ್ಕೊಯಪ್ಪ ಅಂತ ತಾಳಿನ ಕೈಲಿಡಕಂಡು ಓಡಿ ಬಂದ್ಲಂತೆ. ಎಡೂರಪ್ಪನಿಗೆ ಅಧಿಕಾರ ಕೊಡದು ಮುಖ್ಯನೊ, ಚೆನ್ನವ್ವನ ತಾಳಿ ಮುಖ್ಯನೊ ಅನ್ನೊ ಸಮಸ್ಯೆ ಬಿಗಡಾಯಿಸ್ತಂತೆ" ಎಂದು ಉಗ್ರಿ ಹೇಳುವಾಗ ವಾಟಿಸ್ಸೆ ಗಂಭೀರವಾಗಿ,

"ಮಿಸ್ಟರ್ ಉಗ್ರಿ, ಚೆನ್ನವ್ವ ನಮ್ಮವ್ವ, ಅಥವಾ ನಮ್ಮಜ್ಜಿ ಇದ್ದಂಗೆ. ಅವುರಿಗೆ ಈ ವಯಸಿನಲ್ಲಿ ತಾಳಿ ಕಟಗಂಡೇನಾಗಬೇಕೊ. ಕ್ರಮೇಣ ಹೆಂಗಸರಿಗೆ ಒಂದು ವಯಸಿನಲ್ಲಿ ತಾಳಿ ಕ್ಯಲಸಕ್ಕೆ ಬಾರದ ಬಲ್ಲೆಯಂಗೆ ಕಾಣ್ತದೆ. ಪರೆಗ್‌ಜಾಂಪಲ್ ನಿಮ್ಮವ್ವ ಸಿದ್ದಮ್ಮ ಅವ್ಳೆ. ಅವುಳ ಕುತ್ತಿಗೆ ತಾಳಿಗೂ ಚೆನ್ನಮ್ಮನ ತಾಳಿಗೂ ನನಿಗೆ ಅಂತ ಡಿಫರೆನ್ಸೆ ಕಾಣದಿಲ್ಲ ಅಲವೇನಕ್ಕ.

"ಆಹಹ ತಗದ ಇವುನಳೆ ಫುಲಾರವ."

"ಹಳೆ ಫುಲಾರಲ್ಲ ಕಣಕ್ಕ. ಉಗ್ರಿ ಹೇಳ್ತಯಿರೊ ತಾಳಿ ವಿಷಯ ಕೇಳಿದ್ರೆ ಇತ್ತೀಚಿನ ಸಾಯಿಕುಮಾರನ ಸಿನಿಮ ನೋಡಿದಂಗಾಯ್ತು, ಅದೇನಾರ ಆಗ್ಲಿ ಚೆನ್ನಮ್ಮನ ತಾಳಿ ಉಳಿತಲ್ಲ, ಅಷ್ಟೆ ಸಾಕು ಬುಡೊ. ಬತ್ತಿನಿ ಕಣಕ್ಕ". ■

ಅಟಲ್‌ಬಿಹಾರಿ ವಾಜಪೇಯಿ ಅವರಿಗೂ ಇದು ಅನ್ವಯಿಸುವುದಿಲ್ಲ, ಏಕೆಂದರೆ ಈಗ ಚಾಲ್ತಿಯಲ್ಲಿರುವ ವದಂತಿಗಳಂತೆ ಅವರ ಆರೋಗ್ಯ ತೀರಾ ಹದಗೆಟ್ಟಿದ್ದು ವ್ಯಕ್ತಿಗಳನ್ನು ಗುರುತಿಸಲೇ ಸಾಧ್ಯವಾಗುತ್ತಿಲ್ಲವಂತೆ. ಇತ್ತೀಚೆಗೆ ಅವರು ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಗೆ ಕಳುಹಿಸಿದ್ದ ಪತ್ರವೂ 'ಭೂತಪತ್ರ'ವಂತೆ!

ವಿಶ್ವನಾಥ ಪ್ರತಾಪ್ ಸಿಂಗ್ ಅವರನ್ನು ಕುರಿತು ಕೇಳಿದ ಪ್ರಶ್ನೆ ಇದಲ್ಲ, ವಾರಕ್ಕೆರಡು ಸಲ ಡಯಾಲಿಸಿಸ್‌ಗೆ ಒಳಗಾದರೂ ತೃತೀಯ ರಂಗಕ್ಕೆ ಸೈದ್ಧಾಂತಿಕ ನೆಲೆಗಟ್ಟನ್ನು ನೀಡಲು ಅವರು ಪ್ರಯತ್ನಿಸುತ್ತಿದ್ದಾರೆ. ಇನ್ನು ಇಂದರ್ ಗುಜ್ರಾಲ್ ಕುರಿತದ್ದೂ ಇದಲ್ಲ, ಅವರು ಪ್ರಧಾನಿಯಾಗಿದ್ದಾಗಲೂ ಸುದ್ದಿ ಮಾಡಲಿಲ್ಲ, ಈಗಂತೂ ಕೇಳುವ ಹಾಗೆಯೇ ಇಲ್ಲ.

ಈ ಪ್ರಶ್ನೆ ಯಾರನ್ನು ಕುರಿತದ್ದು ಎಂದರೆ ಹರದನಹಳ್ಳಿ ದೇವೇಗೌಡ ಅವರದ್ದು. ಒಂದು ಮಧ್ಯಾಹ್ನ. ಬಿಗಿಗೊಳಿಸುವ ವಾತಾವರಣ. ಅವರ ಮನೆಗೆ ಹೋದೆ. ದೇವೇಗೌಡರು ಎರಡು ವಸ್ತುಗಳಿಗೆ ಅಂಟಿಕೊಂಡಿದ್ದರು. ಒಂದು ಅವರು ಕುಳಿತಿದ್ದ ಸೋಫಾ. ಇನ್ನೊಂದು ಟಿವಿ. ತಮ್ಮ ಮಗ ಅದೆಷ್ಟನೇ ಬಾರಿಗೋ ನಾನು ಏಕೆ ಅಧಿಕಾರ ಹಸ್ತಾಂತರ ಮಾಡುವುದು ಸಾಧ್ಯವಿಲ್ಲ ಎಂಬ ವಿವರಣೆ ಅದರಲ್ಲಿ ಬರುತ್ತಿತ್ತು, ಟಿವಿಯ ಶಬ್ದ ಜೋರಾಗಿತ್ತು, ನಾವು ಮಾತಾಡುವಾಗ ಅರುಚಬೇಕಾಗುತ್ತಿತ್ತು, ಆದರೂ ಅವರು ಶಬ್ದ ಕಡಿಮೆ ಮಾಡಲಿಲ್ಲ! ಅವರು ಮುಂದಿನ ಹೆಜ್ಜೆ ಹೇಗಿಡಬೇಕು ಅನ್ನುವುದರ ಚಿಂತೆಯಲ್ಲಿ ಮುಳುಗಿದ್ದಂತಿತ್ತು,

ಯಾಕೆ ಈ ಇಳಿವಯಸ್ಸಿನಲ್ಲಿ ಹೀಗೆ?

ಸ್ಥಳೀಯ ಪಕ್ಷಗಳು ಪ್ರಬಲ ಆಗುತ್ತಿವೆ. ಎನ್‌ಡಿಎ ಅಧಿಕಾರಕ್ಕೆ ಬರಬೇಕಾದರೆ ಅವುಗಳ ಬೆಂಬಲ ಅತ್ಯಗತ್ಯ. ಜಾರ್ಜ್ ಫರ್ನಾಂಡಿಸ್‌ಗೆ ವಯಸ್ಸಾಗಿದೆ. ಆ ಪಕ್ಷಗಳನ್ನು ಎನ್‌ಡಿಎ ತೆಕ್ಕೆಗೆ ತರಲು ಬಲಿಷ್ಠ ವ್ಯಕ್ತಿಬೇಕು. ಅದು ಯಾರು? ಎಚ್.ಡಿ. ದೇವೇಗೌಡ!

"ಗೌಡರು ಸದಾ ಅದರ ಧ್ಯಾನದಲ್ಲಿದ್ದಾರೆ!

* * * * * *

ತಮ್ಮ ಪಕ್ಷವನ್ನು ವಹಿಸಿಕೊಳ್ಳಬೇಕು ನಿಜ. ಅಕ್ಷಮ್ಯ ಅಪರಾಧ ಎಸಗಿದಾಗಲೂ ಅಸಂಬದ್ಧವಾಗಿ ಅದರ ಪರ ಮಾತನಾಡಿದರೆ...

ಇಪ್ಪತ್ತು ತಿಂಗಳ ಹಿಂದೆ ಭಾಜಪ-ಜಾತ್ಯತೀತ ದಳದ ನಡುವೆ ಅನೈತಿಕ ಒಪ್ಪಂದ ಆಗಿತ್ತು, ಆಗ ನಡೆದ ಒಂದು ಒಪ್ಪಂದ-ಇಪ್ಪತ್ತು ತಿಂಗಳ ನಂತರ ಅಧಿಕಾರ ಹಸ್ತಾಂತರ ಆಗಬೇಕು.

ಈಗ ಅದರ ಉಲ್ಲಂಘನೆ ಆಗಿದೆ. ಆದರೂ ಪಕ್ಷದ ಪರವಾಗಿ ವಾದಿಸಬೇಕು.

ಹೇಗೆ? ಪುರಾಣ ಪುರುಷರನ್ನು ಎಳೆದು ತಂದು!

'ಧರ್ಮರಾಯ, ಶ್ರೀಕೃಷ್ಣ ಸಂದರ್ಭೋಚಿತ ಸುಳ್ಳನ್ನು ಸಾರ್ಥಕತೆಗೆ ಬಳಸಿಕೊಳ್ಳುತ್ತಿದ್ದರು!'

ತಿರಸ್ಕಾರ ತರಿಸುವ ಮಾತುಗಳು ಇವು.

ಇದನ್ನು ಹೇಳಿದವರು ಯಾರು ಅನ್ನುತ್ತೀರಾ?

ಬುದ್ಧಿಜೀವಿ, ಸುಸಂಸ್ಕೃತ ರಾಜಕಾರಣಿ ಅನ್ನಿಸಿಕೊಂಡ ಎಂ.ಪಿ. ಪ್ರಕಾಶ್!


ಇಂತಹ ದೈನೇಸಿ ಸ್ಥಿತಿ ಅವರಿಗೆ ಬರಬಾರದಿತ್ತು. ■

ಮರೆಯುವ ಮುನ್ನ



ಪಿ. ಲಂಕೇಶ್ -ಏಪ್ರಿಲ್ 30, 1989

ಕೋಮಲೆಯರ ದಮನ



ಮದುವೆಯಾದ ಮೂರು ತಿಂಗಳಿಗೆ ಶುರುವಾಯಿತು. ಒಳ್ಳೆಯ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಗತೊಡಗಿತು. ಹೊಡೆತ, ಆಯಕಟ್ಟಿಗೆ. ಹೆಂಗಸರನ್ನು ಕರೆತಂದು ಆಕೆಯ ಎದುರಿಗೇ ಮಲಗಲಾಯಿತು. ಎದುರು ಮಾತಾಡಲು ಭಯ. ಮಾತಿಗೆ ಮೀರಿದ ನೋವು, ತವರಿಗೆ ದೂರು ಕೊಟ್ಟಳು. ತಂದೆ ಗಂಡನ ತರಹದವನೇ. 'ಹೊಂದಿಕೊಂಡು ಹೋಗು' ಎಂಬ ಕಟ್ಟಾಜ್ಞೆ. ಇಬ್ಬರು ಮಕ್ಕಳಾದವು ಈ ನರಕದಲ್ಲಿಯೇ. ಅನೇಕ ಸಲ ಆತ್ಮಹತ್ಯೆಯ ಪ್ರಯತ್ನ. ಮಕ್ಕಳ ಮುಖ ನೋಡಿ ಸುಮ್ಮನಾದಳು. ಮಕ್ಕಳನ್ನು ಓದಿಸುವುದಕ್ಕೂ ಕಷ್ಟ. ಬರುತ್ತಿದ್ದ ಸಂಬಳವನ್ನೆಲ್ಲ ದೂರದಲ್ಲಿದ್ದ ಸಣ್ಣ ಹೊಲದ ಮನೆಯಲ್ಲಿ ಚಾನಗಡಿ ನಡೆಸಲು ವ್ಯಯಿಸುತ್ತಿದ್ದ, ಮನೆಗೆ ಬರುವುದನ್ನು ಕಡಿಮೆ ಮಾಡಿದ. ಆಕೆಯ ತಿಂಗಳ ಖರ್ಚಿಗೆ ಹಣ ಕೇಳಲು ಅಲ್ಲಿಗೇ ಹೋಗಬೇಕಾಗುತ್ತಿತ್ತು. ಈಕೆಯನ್ನು ನೋಡಿದರೆ ಕೆರಳಿ ಮೈ ಮೇಲೆ ಬೀಳುವ ಹೆಂಗಸರು. ಈತನಿಂದ ಅವರೆದುರಿಗೇ ಹೊಡೆತ.

ಇವತ್ತು ಈಕೆ ಚಿಂತಿಸಲೂ ಆಗುತ್ತಿಲ್ಲ. ಯೋಚನೆ ಮಾಡಿದರೆ ಭೀಕರ ತಲೆನೋವು, ಮೈ ಸೀಳುವ ನರಗಳ ಬಡಿತ.... ಕೇಳುತ್ತ ಕೂತೆ. ಅದೆಂತೋ ಒಂದೇ ತರಹದ ಗೋಳಿನ, ಯಾತನೆಯ ಕತೆಗಳು ಒಮ್ಮೆಗೆ ಬರತೊಡಗುತ್ತವೆ. ಇನ್ನೊಬ್ಬ ಹೆಂಗಸಿಗೆ ಈಗ ಮೂವತ್ತೈದು ವರ್ಷ. ನೋಡಲು ಚೆನ್ನಾಗಿದ್ದಾಳೆ. ಚುರುಕಾಗಿ, ತಮಾಷೆಯಾಗಿ ಮಾತಾಡುವ ಹೆಂಗಸು, ತನ್ನ ಒಬ್ಬಂಟಿತನವನ್ನು ಮರೆಯಲು ಹಾಸ್ಯದ ನೆರವು. ಈಕೆಯ ಅಪರಾಧ ಏನು ಗೊತ್ತೆ? ಆತ ಮಕ್ಕಳು ಬೇಡವೆಂದರೂ ಗರ್ಭಿಣಿಯಾದದ್ದು. ಹೊಟ್ಟೆಗೆ ಒದೆತ. ಚಿತ್ರಹಿಂಸೆ. ಶಿಲಾಯುಗದ ಕನ್ಯೆಯಂತೆ ಗರ್ಭ ಕಾಪಾಡಿಕೊಂಡು ಮಗನನ್ನು ಹೆತ್ತಳು. ಆತ ಕ್ಷಮಿಸಲಿಲ್ಲ, ಮನೆಯಿಂದ ಒದ್ದೋಡಿಸಿದ; ಸ್ವಲ್ಪ ಹಣ ಕೊಟ್ಟು ಡೈವೋರ್ಸ್ ಪಡೆದ. ಜೀವನದ ಈ ಅನಿರೀಕ್ಷಿತ ಆಘಾತಕ್ಕೆ ನಿರುತ್ತರಳಾದ ಹೆಣ್ಣು ಹೆಣ್ಣುತನಕ್ಕೆ ಸಂದ ಸವಾಲುಗಳನ್ನೆದುರಿಸಿ ತಮಾಷೆಯಾಗಿ ಮಾತಾಡುವ, ಗಂಡನ ಬಗ್ಗೆ ಅಕ್ಕರೆ ಕಳೆದುಕೊಳ್ಳದೆ ಜೀವನ ಸಂಗಾತಿಯೊಬ್ಬನಿಗಾಗಿ ಹುಡುಕುವ ಹೆಣ್ಣು.

'ಆತನಿಗೆ ನಾಲ್ಕು ಒದೆ ಕೊಡಬೇಕಾಗಿತ್ತು' ಮೊದಲನೆಯವಳಿಗೆ ಸೂಚನೆ.

'ಗಂಡಸರ ಭಂಡತನ ನಿಮಗೆ ಗೊತ್ತಿಲ್ಲ. ಬೀದಿಗಿಳಿಯುತ್ತಾರೆ, ಎಲ್ಲ ಬಿಟ್ಟವರಾಗಿ ಇರುವ ಜೀವಸೆಲೆಯನ್ನೂ ಇಲ್ಲವಾಗಿಸುತ್ತಾರೆ.'

'ಪೊಲೀಸರಿಗೆ ಹೇಳಲಿಲ್ಲವೆ?'

'ಹೇಳಿದೆ. ಆದರೆ ದಿನವೂ ಪೊಲೀಸರು ಹೇಗೆ ಕಾಯಲು ಸಾಧ್ಯ?'

ಆಮೇಲೆ ಎರಡನೆಯಾಕೆಗೆ,

'ನಿಮ್ಮ ಗರ್ಭದ ಶಿಶು ತನ್ನದಲ್ಲವೆಂದು ನಿಮ್ಮ ಗಂಡನಿಗೆ ಅನುಮಾನವಿತ್ತೆ?'

'ಅಂಥ ಅನುಮಾನಕ್ಕೆ ಆಸ್ಪದ ಕೊಡುವ ಗುಣದವಳಲ್ಲ ನಾನು.'

'ಹಾಗಾದರೆ ಯಾಕೆ ಈ ಹಿಂಸೆ?'

'ನೀವೇ ಹೇಳಬಹುದೆಂದು ಎಲ್ಲವನ್ನೂ ಹೇಳಿದೆ.'

ಇಂಥ ವಿಚಿತ್ರ ಬಲೆಯಲ್ಲಿ ಸಿಕ್ಕ ಹೆಂಗಸರು ಹಲವರಾದರೆ ಇನ್ನೊಬ್ಬಳು ಹುಡುಗಿ, ನೃತ್ಯಗಾತಿ... ಈಕೆಗೆ ಬೇಸರವಾಗದಿರಲೆಂದು ಈಕೆಯ ವೃತ್ತಿಯನ್ನೇ ಬದಲಿಸಿ ನಿಮಗೆ ಹೇಳುತ್ತಿದ್ದೇನೆ. ಈಕೆ ಸುಮಾರು ಐವತ್ತು ಸಿನಿಮಾಗಳಲ್ಲಿ ನರ್ತಿಸಿದ್ದಾಳೆ. ತೆಳ್ಳನೆಯ, ಮೋಹಕ ಹುಡುಗಿ. ಪದವೀಧರೆ, ಪುಟ್ಟ ಉದ್ಯೋಗ ಕೂಡ ಉಳ್ಳವಳು. ಇವಳ ಆದಾಯ ಚೆನ್ನಾಗಿತ್ತು, ತನ್ನ 28ರ ವಯಸ್ಸಿಗೆ ಸುಮಾರು ಮೂರು ಲಕ್ಷದಷ್ಟು ಹಣ ಗಳಿಸಿದಳು. ಈಕೆಗೆ ವಯಸ್ಸು 21 ಆಯಿತು, 24 ಆಯಿತು, 27 ಆಯಿತು. ತಂದೆ ಈಕೆಯ ಮದುವೆಯ ಯೋಚನೆಯನ್ನೇ ಮಾಡಲಿಲ್ಲ; ಮೂರು ಲಕ್ಷದಷ್ಟು ಹಣತಂದು ಕೊಟ್ಟ ಹುಡುಗಿ ಇನ್ನೆರಡು ಲಕ್ಷವನ್ನಾದರೂ ತರುವ ಮುನ್ನ ಮದುವೆ ಯಾಕೆ? ಬೇಕೆಂತಲೇ ಕುರೂಪಿಗಳು, ಮುದುಕರು, ದುಷ್ಟರನ್ನು ತಂದು ತೋರಿಸಿ 'ನನಗೆ ಮದುವೆ ಬೇಡ' ಎಂದು ಆಕೆಯೇ ಹೇಳುವಂತೆ ಮಾಡುತ್ತಿದ್ದ ತಂದೆ. ತನಗೆ ಮದುವೆಯೇ ಆಗುವುದಿಲ್ಲವೆಂದು ತೀರ್ಮಾನಿಸಿ ದಿಕ್ಕೆಟ್ಟ ಹುಡುಗಿ, ಕೊನೆಗೆ ಧೈರ್ಯ ಮಾಡಿದಳು. ಮದುವೆಯ ಮಧ್ಯವರ್ತಿಯೊಬ್ಬನನ್ನು ಸಂಧಿಸಿ ಫೋಟೋ ಕೊಟ್ಟಳು; ಹುಡುಗರ ಫೋಟೋ, ಉದ್ಯೋಗದ ವಿವರ ತರಿಸಿಕೊಂಡಳು. ಗುಟ್ಟಾಗಿ ಮದುವೆಯನ್ನು ನಿಶ್ಚಯಿಸಿ ದಿನಾಂಕವನ್ನು ಗೊತ್ತು ಮಾಡಿ ತಂದೆಗೆ ಹೇಳಿಬಿಟ್ಟಳು. ತಂದೆ ಕೋಪಗೊಂಡ. ಆಕೆ ಆಹ್ವಾನಪತ್ರಿಕೆ ಕೂಡ ಅಚ್ಚು ಮಾಡಿಸಿ ಎಲ್ಲರಿಗೆ ಹೇಳಿದ್ದರಿಂದ ಏನೂ ಮಾಡಲಾಗಲಿಲ್ಲ. ಹುಡುಗಿ ತನ್ನ ಕೈಯಲ್ಲಿದ್ದ ಹಣವನ್ನೆಲ್ಲ ಖರ್ಚುಮಾಡಿ ಮದುವೆಯಾದಳು. ತಂದೆ ಆಕೆಯ ಸ್ಕೂಟರ್ ಕೂಡ ಕಿತ್ತುಕೊಂಡು ಉಟ್ಟ ಸೀರೆಯಲ್ಲೇ ಅವಳನ್ನು ಮನೆಯಿಂದ ಕಳಿಸಿದ. ಹುಡುಗ ಈ ಖ್ಯಾತ ನರ್ತಕಿ ಹಣ ತರುವಳೆಂದು ನಿರೀಕ್ಷಿಸಿದ್ದರೆ? ಆತ ದುರಾಸೆಯವನಾಗಿದ್ದರೆ? ಆತನ ಸಂಬಂಧಿಗಳು ಲೋಭಿಗಳಾಗಿದ್ದರೆ?


ನಾನು ಸೂಚಿಸಿದೆ: ನಿನ್ನ ಕಾರ್ಖಾನೆಯ ಉದ್ಯೋಗ ಬಿಡಕೂಡದು, ನಿನ್ನ ನರ್ತನದಿಂದ ಬಂದ ಹಣದ ಬಗ್ಗೆ ಗೋಪ್ಯಗಳಿರಕೂಡದು. ನಿನ್ನ ಕಲೆಯಂತೆಯೇ ನಿನ್ನ ಬದುಕು ಮುಕ್ತವಾಗಿ, ತೀವ್ರವಾಗಿ, ಪ್ರಾಮಾಣಿಕವಾಗಿರಬೇಕು. ಸಂಸಾರದಿಂದ ತೀರಾ ಹೆಚ್ಚು ನಿರೀಕ್ಷಿಸದೆ ಪಡೆದದ್ದಕ್ಕಿಂತ ಹೆಚ್ಚನ್ನು ಕೊಡುವುದು ಕಲಿಯಬೇಕು.

ನಾಲ್ಕನೆಯವಳು ದೂರದ ಊರಿನ ಹುಡುಗಿ; ಹಳ್ಳಿಯ ತರುಣಿ. ಈಕೆ ಪದವೀಧರೆ, ಕೆಲವು ದಿನ ತೀರಾ ಕನಿಷ್ಠ ಸಂಬಳಕ್ಕೆ ಕೆಲಸ ಮಾಡಿ ಬೇಸತ್ತು ಹಳ್ಳಿಗೆ ಹಿಂದಿರುಗಿರುವವಳು. ಈಗ ನಿರುದ್ಯೋಗಿ. ಬಡವರ ಮನೆಯ ವಿದ್ಯಾವಂತೆಯಾದ ಈಕೆ ಬರೆಯಬಲ್ಲಳು. ಕೆಲಸಕ್ಕಾಗಿ ಕೇಳಿ 'ಸಮಾಧಾನವನ್ನಾದರೂ ಹೇಳಿ' ಎನ್ನುತ್ತಾಳೆ. ನಾನು ಈ ನಾಡಿನ ನಿರುದ್ಯೋಗದ ದುರಂತದ ಬಗ್ಗೆ ಹೇಳುತ್ತೇನೆ. ನನ್ನೆದುರು ಇರುವ ನಿರುದ್ಯೋಗಿ ಹುಡುಗಿಯೊಬ್ಬಳ ಕತೆ ಹೇಳುತ್ತೇನೆ. 'ಈಕೆ ದಕ್ಷಿಣ ಕನ್ನಡದ ಹುಡುಗಿ. 400 ರೂಪಾಯಿ ಸಂಬಳದ ಕೆಲಸದ ಜಾಹೀರಾತೊಂದನ್ನು ನೋಡಿ ಹುಡುಕಿಕೊಂಡು ಹೋಗುತ್ತಾಳೆ. ಬೆಂಗಳೂರಿನ ತೀರ ಕೊಳಕಾದ ಜಾಗದಲ್ಲೊಂದು ಮನೆ; ಅದರ ವಿಳಾಸ: ಶ್ರೀ ಗುರುರಾಘವೇಂದ್ರ ಹಾಸ್ಟೆಲ್, ನಂ. 178, ಟೀಚರ್ಸ್ ಕಾಲೋನಿ, ಬನಶಂಕರಿ 2ನೇ ಹಂತ, ಬೆಂಗಳೂರು - 560 070. ಇಲ್ಲಿ ಒಬ್ಬ ಸರ್ದಾರ್ಜಿ ನಡೆಸುತ್ತಿರುವ ಅನಾಥಾಶ್ರಮ. ನೋಡಿದರೆ ಮಕ್ಕಳು ಕಡಿಮೆ. ಹತ್ತಾರು ಹೆಣ್ಣುಮಕ್ಕಳನ್ನು ಜಾಹೀರಾತಿನ ಮೂಲಕ ಸೆಳೆದು ಅವರನ್ನು ಬೀದಿ ಬೀದಿಯಲ್ಲಿ ಭಿಕ್ಷೆ ಎತ್ತಲು ಹಚ್ಚಿ ಹಣ ಮಾಡುವ ವ್ಯಕ್ತಿ; ಈ ಹುಡುಗಿಯರಿಗೆ ಕಟ್ಟುಪ್ಪಣೆಗಳು, ಚಕ್ರವ್ಯೂಹಗಳು, ಕ್ರಮೇಣ ಮುಂಬೈಗೆ ಹುಡುಗಿಯರನ್ನು ಸಾಗಿಸುವ ಪುಕಾರುಗಳು, ಬೆಳಗ್ಗೆ 7ರಿಂದ ಸಂಜೆ ಏಳರವರೆಗೆ ಭಿಕ್ಷೆ ಬೇಡಿಕೆ, ಈತನ "ಆಶ್ರಮ"ಕ್ಕಾಗಿ. ಒಂದೂವರೆ ತಿಂಗಳಲ್ಲಿ ಹೇಗೋ ತಪ್ಪಿಸಿಕೊಂಡು ಊರಿಗೆ ಓಡಿ ಹೋಗಿ ಇದೆಲ್ಲದರಿಂದ ಗುಣ ಹೊಂದಲು ತಿಂಗಳುಗಳನ್ನೇ ತೆಗೆದುಕೊಂಡ ಅಮಾಯಕ ತರುಣಿ.

ನಿರುದ್ಯೋಗ ಏನೇನು ಅವಮಾನ, ನೋವು ತರುತ್ತದೆ!

ಕೊನೆಯೇ ಇಲ್ಲದ ಈ ಪಟ್ಟಿಯಲ್ಲಿ ಕೊನೆಯದಾಗಿ ನಿಮ್ಮ ಕಣ್ಣೆದುರಿಗೇ ಮೊನ್ನೆ ಮೊನ್ನೆಯವರೆಗೆ ಸಿನಿಮಾ ಸ್ಟಾರ್ ಆಗಿ ಮಿಂಚುತ್ತಿದ್ದ ನಟಿಯ ಗೋಳಿನ ಕತೆ ಹೇಳಲೆ? ಈಕೆ ತನ್ನ ತಾಯಿಯ ಬಂಧಿ. ಬೆಳೆಯುತ್ತಿದ್ದ ಮೈ ಸಪೂರಗೊಳಿಸಲು ಬೆಳಗ್ಗೆ ನಡೆಯಲು, ಓದಲು ಕೂಡ ಬಿಡದ ತಾಯಿ. ಈಕೆ ಗಳಿಸಿದ ಹಣವೆಲ್ಲ ಅಮ್ಮನ ಚೀಲ ಸೇರಿದೆ. ಕ್ಷಣ ಕಣ್ಣು ತಪ್ಪಿಸಿ ಓಡಾಡಿದರೂ ಮಗ್ಗಲು ಮುರಿತ; ಸದಾ ಬೀದಿ ಪಾಲಾಗುವ ಭಯ. ಸೌಂದರ್ಯ ಮಂಕಾದರೆ ಸಿನಿಮಾಗಳಲ್ಲಿ 'ಛಾನ್ಸ್' ಇಲ್ಲ... ಈಗ ಮಂಕಾಗಿರುವ ಹುಡುಗಿ.

ಎಲ್ಲರಿಗೆ ನನ್ನದೊಂದೇ ಹಿತವಚನ: ಅವರ ನೋವನ್ನು ಈ ಕ್ಷಣದಲ್ಲಿ ಪರಿಹರಿಸಲಾರದ ಉಪನ್ಯಾಸ. ಇಲ್ಲಿ ಜಾತಿ, ಲಿಂಗ, ವರ್ಗದ ಭೇದವಿಲ್ಲದ ಶಿಕ್ಷಣ, ತರಬೇತಿ, ಉದ್ಯೋಗ ದೊರೆಯಬೇಕು; ಕಲಿತ ಮಹಿಳೆ ತನ್ನ ಸಂಗಾತಿ, ತನ್ನ ಉದ್ಯೋಗ, ತನ್ನ ಕ್ರಿಯಾಶೀಲತೆಯನ್ನು ತಾನೇ ನಿರ್ಧರಿಸಿಕೊಳ್ಳುವಂತಾಗಬೇಕು. ಅಲ್ಲಿ ಕಾವ್ಯ ಹುಟ್ಟುತ್ತದೆ; ಅಲ್ಲಿ ಘನತೆಗೆ ಧಕ್ಕೆ ಬಾರದ ಜೀವನ ಇರುತ್ತದೆ; ಇಲ್ಲಿ ನರಳುವ ನರಕ ಭವಿಷ್ಯದ ಬಗ್ಗೆ ಹೆದರುವುದು ತಪ್ಪುತ್ತದೆ. ■



ಮೊನ್ನೆ 20-20 ವರ್ಲ್ಡ್‌ಕಪ್ ಫೈನಲ್‌ಗೆ ಚಕ್‌ದೇ ಇಂಡಿಯಾ ಎಂಬ ಹಾಕಿ ಚಿತ್ರದ ಹೀರೋ ಶಾರೂಖ್ ದಕ್ಷಿಣ ಆಫ್ರಿಕಾಕ್ಕೆ ಹೋಗಿ ಇಂಡಿಯಾದ ಕ್ರಿಕೆಟ್ ವೀರರನ್ನು ಅಪ್ಪಿ ಮುದ್ದಾಡಿದ್ದನ್ನು ನೋಡಿ ಕೋಟ್ಯಂತರ ಶಾರೂಖ್ ಅಭಿಮಾನಿಗಳು ಥ್ರಿಲ್ಲಾದರು. ಹಾಗೆಯೇ ಹಲವಾರು ಜನ ಶಾರೂಖ್‌ನನ್ನು ನೋಡಿ ದಂಗುಬಡಿದು ಹೋದರು. ಸುಟ್ಟ ಬದನೇಕಾಯಿಯಂತಾಗಿರುವ ಅವನ ಮುಖ, ಇಳಿಬಿದ್ದ ಚೋಟು ಕೂದಲು,

ಎಲ್ಲಿ? ಈಗ ಮುಖಮೂತಿಯೆಲ್ಲ ಸರ್ಜರಿ ಮಾಡಿಸಿಕೊಂಡು ಹೈಬ್ರಿಡ್ ಕರಿಬಿಳಿಯವನಾಗಿರುವ ಜಾಕ್ಸನ್ ಎಲ್ಲಿ? 'ಬಾಜಿಗರ್' ಚಿತ್ರದಲ್ಲಿ ತುಂಟ, ಆರೋಗ್ಯವಂತನಂತೆ ಕಾಣುತ್ತಿದ್ದ ಶಾರುಕ್ ಎಲ್ಲಿ, ಈಗ ಟಿವಿ ಸ್ಕ್ರೀನ್ ಮೇಲೆ ಕಾಣುತ್ತಿರುವ ಶಾರುಕ್ ಎಲ್ಲಿ?

ಇವರಿಬ್ಬರೂ ಅದೇನು ಅದ್ವಾನದ ಔಷಧಿಗಳನ್ನು ತೆಗೆದುಕೊಂಡು ಈ ವಿಚಿತ್ರಕ್ಕೆ ಬಂದಿದ್ದಾರೋ ಗೊತ್ತಿಲ್ಲ.

ಶಾರೂಕ್‌ಸನ್-ಜಾಕ್‌ಖಾನ್


ದೊಡ್ಡ ಕಪ್ಪು ಕೂಲಿಂಗ್ ಗ್ಲಾಸ್-ಇವೆಲ್ಲವು ಗಳಿಂದ ಶಾರೂಖ್ ಥೇಟ್ ಮೈಕಲ್ ಜಾಕ್ಸನ್ ಥರಾನೇ ಕಾಣುತ್ತಿದ್ದ.

ಅದಕ್ಕೇ ಇಂಗ್ಲಿಷ್ ಪತ್ರಿಕೆಯೊಂದು ಇವರಿಬ್ಬರ ಫೋಟೋ ಹಾಕಿ ಹುಟ್ಟನಿಂದ ಬೇರೆಯಾದವರೇ ಎಂದು ಆಶ್ಚರ್ಯ ಸೂಚಿಸಿತ್ತು.

'ಬ್ಲಡ್ ಆನ್ ದಿ ಡಾನ್ಸ್ ಫ್ಲೋರ್'ನ ಆಲ್ಬಂನಲ್ಲಿದ್ದ ಕಪ್ಪುಚಿರತೆಯಂತಹ ಜಾಕ್ಸನ್

ಆದರೆ ಅಮೆರಿಕದ ಡ್ಯಾನ್ಸ್‌ಸ್ಟಾರ್ ಮತ್ತು ಇಂಡಿಯಾದ ಸೂಪರ್‌ಸ್ಟಾರ್ ಒಂದೇ ದೇಹ ಹೊತ್ತ ಎರಡು ಮುಖಗಳಂತೆ ಕಾಣುತ್ತಿದ್ದಾರೆ. ಆದ್ದರಿಂದ ಇವನನ್ನು ಶಾರೂಕ್‌ಸನ್ ಎಂದೂ, ಅವನನ್ನು ಜಾಕ್‌ಖಾನ್ ಎಂದೂ ಕರೆಯ ಬಹುದೇನೋ!

ಅಣು ಒಪ್ಪಂದ ಜಾರಿಯಾಗುವ ಮೊದಲೇ ಈ ವಿಕೃತ ಹೈಬ್ರಿಡ್ ರೂಪಗಳು ಕಾಣಿಸಿಕೊಂಡರೆ, ಆನಂತರ ಹೇಗೋ?!



ಮುಠ್ಠಾಳ ಮುತಾಲಿಕ್, ಬೊಗಳುವ ಸಿಂಹ!

ಈ ವಾರದ ಸಂಚಿಕೆ ಮುಖಪುಟದಲ್ಲಿ ಯಡ್ಡಿಗೆ ಕೈಕೊಟ್ಟದ್ದು ಚೆಡ್ಡಿಗಳು! ಎಂಬ ಹೆಡ್ಡಿಂಗ್ ಸತ್ಯಕ್ಕೆ ಅತ್ಯಂತ ಹತ್ತಿರವಿದೆ.



ಕುಮಾರಸ್ವಾಮಿ ಸರ್ಕಾರದ ಅಧಿಕಾರ ಹಸ್ತಾಂತರ ನಿಜಕ್ಕೂ ಗಾಳಿಪಟ ಆಗಿದೆ. ಯಡಿಯೂರಪ್ಪನಿಗೆ ಸಿಎಂ ಗಿರಿ ತಪ್ಪಿಸಲು ಬಿಜೆಪಿ ಪಾಳೆಯದ ಕೆಲವು ಚೆಡ್ಡಿ ಬಳಗದ ನಾಯಕರೇ ಕಾರಣವೆಂಬುದಕ್ಕೆ ಪತ್ರಿಕೆ ವರದಿಯೇ ವಾಸ್ತವ ಕನ್ನಡಿ. ಸಿ.ಎಂ. ಪಟ್ಟಕ್ಕಾಗಿ ತಿರುಕನ ಕನಸು ಕಾಣುತ್ತಿದ್ದ ಯಡ್ಡಿಗೆ ಆರ್‌ಎಸ್‌ಎಸ್‌ನ ಚೆಡ್ಡಿಚತುರ ಅನಂತಕುಮಾರನೇ ಅಡ್ಡಗಾಲು ಅಂದರೆ ತಪ್ಪಾಗಲಾರದು.

-ರಮಜಾನ ಕೆ. ಕೊರ್ತಿ, ಬಾದಾಮಿ

'ಹಿಂದೂ ಸೇನೆ' ಎಂಬೊಂದು ಸಂಘ ಕಂ ಪಕ್ಷ ಕಟ್ಟಿಕೊಂಡಿರುವ ಹುಂಬ ಪ್ರಮೋದ್ ಮುತಾಲಿಕ್ ಗೊತ್ತಲ್ಲ, ಅವನ ತಿಕ್ಕಲು ಥಿಯರಿಗಳೇನು ಗೊತ್ತಾ? ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಓಡಿಸಬೇಕಂತೆ! ಶಾಂತಿ ಕಾಪಾಡಬೇಕಾದರೆ ರಕ್ತಕ್ರಾಂತಿ ಆಗಲೇಬೇಕಂತೆ! ಶಾಂತಿ ಮತ್ತು ಅಹಿಂಸಾವಾದದಿಂದಾಗಿ ಈ ದೇಶವೇ ತನ್ನ ಸತ್ವ ಕಳೆಕೊಂಡಿದೆಯಂತೆ. ಹಾಗಾಗಿ ಹಿಂದೂ ಸಾಮ್ರಾಜ್ಯ ಸ್ಥಾಪನೆಗಾಗಿ ಯುವಕರೆಲ್ಲರೂ ಪ್ರಾಣ ತೆಗೆಯಲು ಮತ್ತು ಪ್ರಾಣ ನೀಡಲು ಸಿದ್ಧರಾಗಬೇಕಂತೆ! ಓ ಮೈ ಗಾಡ್! ಎಂಥಾ ರಕ್ತಪಿಪಾಸು ವಿಕೃತ ವಕ್ತಿರೀ ಈತ!! ಅದಲ್ಲದೆ 'ಹಿಂದೂ'ಗಳು ಡಜನ್‌ಗಟ್ಟಲೆ ಮಕ್ಕಳನ್ನು ಹೆರಬೇಕು ಎಂದು ಫರ್ಮಾನು ಹೊರಡಿಸುತ್ತಾನೆ ಈತ!!

ಈ ಥಿಯರಿಯನ್ನು ಒಂದಿನಿತೂ ಎಗ್ಗಿಲ್ಲದೆ ಟಿವಿ ಚಾನಲ್ ಒಂದರಲ್ಲಿ ಒದರಿದ. ನೇರ ಪ್ರಸಾರವಾಗುತ್ತಿರುವ ಕಾರ್ಯಕ್ರಮ ಎಂಬ ಕಾಮನ್ಸೆನ್ಸೂ ಇಲ್ಲದೆ ಹೀಗೆಲ್ಲಾ ಹೇಳುತ್ತಾನಲ್ಲ ಇವನು ರಾಷ್ಟ್ರ ರಕ್ಷಕ! ದೇವರ ರಕ್ಷಕ! ಧರ್ಮರಕ್ಷಕ!

ಈಗಲೇ ಅನ್ನ-ಬಟ್ಟೆ-ಆಶ್ರಯಗಳಿಲ್ಲದೆ ಕೋಟ್ಯಂತರ ಜನ ಹಾಹಾಕಾರ ಮಾಡುತ್ತಿದ್ದಾರೆ. ಒಂದೊಂದು ಡಜನ್ ಮಕ್ಕಳನ್ನು ಹಡೆಯಬೇಕಂತೆ. ಹೆಂಗಸರೇನು ಮಕ್ಕಳನ್ನೆರುವ ಕಾರ್ಖಾನೆಗಳು ಎಂದುಕೊಂಡಿದ್ದಾನೆಯೇ ಈ ಮೂರ್ಖ. "ಹಿಂದೂಗಳ ದೇವರುಗಳಿಗೆ ಅವಮಾನವಾದರೆ ಅದು ಹಿಂದೂಗಳ ಭಾವನೆಯನ್ನು ಘಾಸಿಗೊಳಿಸುತ್ತದೆ. ಹಿಂದೂಗಳಿಗೆ ಕಿಂಚಿತ್ ನೋವಾದರೂ ನಾವು ಸಹಿಸುವುದಿಲ್ಲ, ಎಂಥ ರಕ್ತಪಾತಕ್ಕೂ ಸಿದ್ಧ" ಎನ್ನುವ ಈತ ಹಿಂದೂಗಳು ಯಾರೆಂದು ಸ್ಪಷ್ಟವಾಗಿ ಹೇಳಬೇಕು. ಸಾವಿರಾರು ವರ್ಷಗಳಿಂದ ಬಡವರು ಮತ್ತು ಶೂದ್ರಾತಿ ಶೂದ್ರರ ಮೇಲೆ ಅಮಾನುಷವಾದ ದೌರ್ಜನ್ಯ ನಡೆಯುತ್ತಿದೆ. ಜಾತಿ, ಧರ್ಮ ಮುಂತಾದವುಗಳ ನೆಪದಲ್ಲಿ ದೇಶವೇ ಛಿದ್ರಛಿದ್ರವಾಗಿದೆ. ಸಾಮಾಜಿಕ ವ್ಯವಸ್ಥೆ ಹೀನಾಯವಾಗಿದೆ. ಆರ್ಥಿಕ ವ್ಯವಸ್ಥೆ ಕುಲಗೆಟ್ಟು ಹೋಗಿದೆ. ಇದೆಲ್ಲವೂ ಈತನ ಕಣ್ಣಿಗೆ ಕಾಣಿಸುವುದಿಲ್ಲವೆ? ಈ ಕೋಟ್ಯಂತರ ಜನರ ಕಷ್ಟನಿಷ್ಠೂರಗಳೇನು ಎಂಬುದು ಈತನಿಗೆ ತಿಳಿದಿದೆಯಾ? ಅವರು ಹೇಗೆ ಸತ್ತು ಬದುಕಿದ್ದಾರೆ ಎಂಬುದನ್ನು ಈತ ಬಲ್ಲನೆ? ಅವರು ಯಾರಿಂದ ಈ ರೀತಿಯಾದ ಅವಮಾನ, ಅನ್ಯಾಯಗಳನ್ನು ಅನುಭವಿಸುತ್ತಿದ್ದಾರೆ ಎಂಬುದು ಈತನಿಗೆ ತಿಳಿಯದ ವಿಚಾರವೆ? ಮಾತೆತ್ತಿದರೆ ಅಂತರ ರಾಷ್ಟ್ರೀಯ ಮಟ್ಟದ ಅಂಕಿಅಂಶ ನೀಡುವ ಈತನಿಗೆ ಭಾರತದಲ್ಲಿನ ಬಡವರ ಸಂಖ್ಯೆ ಗೊತ್ತಾ? ತುತ್ತು ಅನ್ನಕ್ಕೂ ಪರಿಪಾಟಲು ಪಡುವ ಬೀದಿ ಜನಗಳ ಸಂಖ್ಯೆ ಗೊತ್ತಾ? ಪ್ರತಿ ನಿಮಿಷಕ್ಕೆ ಶೋಷಿತ ಸಮುದಾಯಗಳ ಮೇಲೆ ನಡೆವ ಅತ್ಯಾಚಾರ, ದೌರ್ಜನ್ಯಗಳ ಲೆಕ್ಕಾಚಾರ ಗೊತ್ತಾ ಇವನಿಗೆ? ಈ ದೇಶದ ಬಡತನ, ದಾರಿದ್ರ್ಯ, ಎಲ್ಲಕ್ಕೂ ಇವನದೇ ಮನುವಾದ ಕಾರಣವೆಂಬ ಸತ್ಯ ಗೊತ್ತಿಲ್ಲವೆ ಇವನಿಗೆ? "ನಾವೆಲ್ಲ ಹಿಂದೂ ನಾವೆಲ್ಲ ಬಂಧು ನಾವೆಲ್ಲ ಒಂದು" ಎನ್ನುವವರಿಗೆ ಅದೇ ಜನಗಳು (ಶೋಷಿತರು) ಅನುಭವಿಸುವ ಅವಮಾನದ ಬೇಗುದಿಯ ನೋವಿನ ಅರಿವಿದೆಯಾ ಈತನಿಗೆ? ತನ್ನದೇ ಜನಗಳಿಂದ ಈ ಸಮುದಾಯಕ್ಕೆ ಇಷ್ಟೆಲ್ಲಾ ಅನ್ಯಾಯ ನಡೆಯುತ್ತಿದ್ದರೂ ನಾಚಿಕೆ ಇಲ್ಲದೆ ಭಾವನೆಗಳ ಬಗ್ಗೆ ಮಾತನಾಡುತ್ತಾನೆ. ಎಷ್ಟು ವರ್ಷಗಳಿಂದ ಎಷ್ಟೆಲ್ಲಾ ರೀತಿಯ ಅವಮಾನಗಳಿಂದ ಈ ದೇಶದ ವಾರಸುದಾರರಾದ ಶೋಷಿತ ಸಮುದಾಯಕ್ಕೆ ನಾವು ಘಾಸಿಗೊಳಿಸಿದ್ದೇವೆ ಎಂಬುದನ್ನು ಈತ ಎದೆಮುಟ್ಟಿ ನೋಡಿಕೊಂಡಾನೆಯೆ? ಅಂತಹ ಆತ್ಮಸಾಕ್ಷಿ ಇದೆಯಾ ಈತನಿಗೆ?-ಆತ್ಮಸಾಕ್ಷಿ ಇರುವವರು ಹೀಗೆ ಮುಠ್ಠಾಳರಂತಾಡುವುದಿಲ್ಲ.





ಇದು ಮುತಾಲಿಕ್ ಎಂಬ ಮುಠ್ಠಾಳನ ಕತೆಯಾದರೆ ಬೊಗಳುವ ಸಿಂಹದ ಕತೆ ಹೀಗಿದೆ:

ಸಿಂಹದ ಗುಣ ಎಲ್ಲರಿಗೂ ಗೊತ್ತೇ ಇದೆ. ಅದು ಗರ್ಜಿಸುತ್ತದೆ. ಆದ್ದರಿಂದಲೇ ಅದನ್ನು ಸಿಂಹ ಗರ್ಜನೆ ಎನ್ನುತ್ತೇವೆ. ಆದರೆ ಇದ್ಯಾವುದಿದು ಬೊಗಳುವ ಸಿಂಹ ಎಂದು ಹುಬ್ಬೇರಿಸುವಿರಾ? ಈ ಸಿಂಹ ವಿಜಯ ಕರ್ನಾಟಕ ಪತ್ರಿಕೆಯ ಅಂಕಣಕಾರ ಪ್ರತಾಪ್ ಸಿಂಹ! ಈತ ಎಂದೂ ಘರ್ಜಿಸುವುದಿಲ್ಲ ಬರೀ ಬೊಗಳುತ್ತಾನೆ! ಆದರೆ ತಾನು ಘರ್ಜಿಸುತ್ತಿದ್ದೇನೆ ಎಂಬ ಭ್ರಮೆಯಲ್ಲಿದ್ದಾನೆ ಈತ. ಹಾಗಾಗಿಯೇ ಈ ಬೊಗಳಿಕೆಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ.

ಸದರಿ ಸಿಂಹ (!) ಆಗಾಗ ಹಿಂದೂ ಧರ್ಮದ ಬಗ್ಗೆಯೂ ಇತರ ಸಾಮಾಜಿಕ ಮತ್ತು ಐತಿಹಾಸಿಕ ವಿಚಾರಗಳ ಬಗ್ಗೆಯೂ ಥೇಟ್ ಆರೆಸ್ಸೆಸ್ ಅಥವಾ ಭಜರಂಗಿಗಳ ಮುಖವಾಣಿಯಾಗಿಯೇ ವಿಶ್ಲೇಷಿಸುತ್ತಾನೆ. ವಿಶ್ಲೇಷಿಸುವ ಭರದಲ್ಲಿ ಬರೀ ಸುಳ್ಳು ಅಂಕಿ ಅಂಶಗಳನ್ನು ನೀಡುತ್ತಾ ಇತಿಹಾಸದ ಸತ್ಯಗಳನ್ನೇ ತಿರುಚಿ ಬರೆಯುತ್ತಾ ಉಪ್ಪು ಖಾರ ಮಸಾಲೆ ಬೆರೆಸಿ ಒಮ್ಮುಖವಾಗಿ ಚರ್ಚಿಸುತ್ತಾ ಓದುಗರನ್ನು, ನಿಮ್ಮ ರಕ್ತ ಕುದಿಯುತ್ತಿಲ್ಲವೆ? ಈ ಘೋರ ಅನ್ಯಾಯ ಸಾಧುವೇ? ಇದನ್ನು ನೋಡಿಯೂ ನೀವು ಸುಮ್ಮನಿರುವಿರಾ? ಹೀಗೆಲ್ಲಾ ಉದ್ರೇಕಗೊಳಿಸುವ ಪ್ರತಾಪದ(!) ಮಾತುಗಳನ್ನಾಡುತ್ತಾನೆ.

ಇತ್ತೀಚೆಗೆ 'ರಾಮಸೇತು' ವಿಚಾರವಾಗಿಯೂ ಈತ ತನ್ನ ಪ್ರತಾಪ ಲಹರಿಯನ್ನು ಹರಿಯಬಿಟ್ಟಿದ್ದಾನೆ. ಪೆರಿಯಾರ್‌ರಂತಹ ಪೆರಿಯಾರ್‌ರವರ ವ್ಯಕ್ತಿತ್ವಕ್ಕೆ ಅವಮಾನವಾಗುವ ರೀತಿಯಲ್ಲಿ ಬರೆದಿದ್ದಾನೆ. ಇಡೀ ತಮಿಳುನಾಡಿನ ದ್ರಾವಿಡರಿಗೆ ಸ್ವಾಭಿಮಾನ, ಆತ್ಮಗೌರವ ತಂದುಕೊಟ್ಟ ಯುಗಪುರುಷನ ಇತಿಹಾಸ ಮತ್ತು ಹೋರಾಟಗಳನ್ನು ಲೇವಡಿ ಮಾಡಿದ್ದಾನೆ. ಪೆರಿಯಾರ್ ಚಳವಳಿಯನ್ನು ಬೊಗಳೇ ಚಳವಳಿ, ಬುದ್ಧಿರಹಿತ ಚಳವಳಿ ಎಂದು ಬೊಗಳಿದ್ದಾನೆ.

ನಾವೇನು ಕಿವಿ ಮೇಲೆ ಹೂ ಇಟ್ಟುಕೊಂಡಿದ್ದೇವಾ? ತಮಿಳುನಾಡಿನ ದ್ರಾವಿಡರೇನು ದಡ್ಡರಾ? ಯಾರ ಶಕ್ತಿ ಎಷ್ಟೆಂದು ಬಲ್ಲರು. ಪೆರಿಯಾರ್ ಎಂದರೆ 'ಪೆರಿಯಾರ್' ಅಷ್ಟೆ. ಅವರನ್ನು ಈಗ ಹೀಗಳೆದಾಕ್ಷಣಕ್ಕೆ ಅದನ್ನು ನಂಬುವಷ್ಟು ಮೂರ್ಖರಾ ಬಹುಜನ? ಪಾಪ ಹಿಂದೂಗಳ ಮೂಢನಂಬಿಕೆಗಳನ್ನು ಧಿಕ್ಕರಿಸಿ ಮನುವಾದಕ್ಕೆ ಮಸಿಬಳಿದ ಪೆರಿಯಾರ್‌ರವರನ್ನು ಇವರು ಟೀಕಿಸದೆ ಬಿಟ್ಟಾರೆಯೇ? ಪ್ರಜ್ಞಾವಂತ ಸಮುದಾಯದಲ್ಲಿ ಮನುವಾದಕ್ಕೆ ನೆಲೆಯಲ್ಲಿರುತ್ತದೆ ಹೇಳಿ. ಪೆರಿಯಾರ್ ಎಂಬ 'ಆನೆ', ಬೊಗಳಿಕೆಗೆ ತಲೆ ಕೆಡಿಸಿಕೊಳ್ಳೋದು ಎಂಬ ಬೆತ್ತಲೆ ಸತ್ಯ ಜಗತ್ತಿಗೇ ಗೊತ್ತು. ಆದರೆ ಪ್ರತಾಪ ಎಂಬ ಶ್ವಾನ ಸಿಂಹನಿಗೆ ಗೊತ್ತಿಲ್ಲವೆ! ಬೊಗಳಿ ಬಣ್ಣ ಬಯಲು ಮಾಡಿಕೊಳ್ಳುತ್ತಿದ್ದಾನಲ್ಲ ಪಾಪ!

-ದಾ. ಕೃಷ್ಣಮೂರ್ತಿ ಚಮರಂ, ಮೈಸೂರು

ಕರ್ನಾಟಕ ರಾಜ್ಯದವರು ಕಂಪ್ಯೂಟರ್ ಇಂಜಿನಿಯರ್ ಕೆಲಸಕ್ಕಾಗಿ ಹೊರ ರಾಜ್ಯಕ್ಕೊ, ಹೊರ ದೇಶಕ್ಕೆ ಹೋದರೆ 'ನೀವು ಕರ್ನಾಟಕದವರ? ನೀವೇನಾ ಬಿಜೆಪಿಗೆ ಕೈ ಕೊಟ್ಟೋರು? ಮಾತಿಗೆ ತಪ್ಪದೋರು? ವಚನ ಭ್ರಷ್ಟರಾದೋರು? ಪುಣ್ಯಕೋಟಿ ಕಥೆ ಗೊತ್ತಿಲ್ಲದೆಯಿರೋರು?' ಎಂದು ಬಯ್ಯುತ್ತಾರಂತೆ!



ಯಡಿಯೂರಪ್ಪನಿಗೆ ಇನ್ನೇನು ಕುರ್ಚಿ ಸಿಕ್ಕೇಬಿಡ್ತು ಎನ್ನುವಷ್ಟರಲ್ಲಿ ದೇವೇಗೌಡ ಕುಮಾರಸ್ವಾಮಿ ಕುರ್ಚಿಯನ್ನು ಹಿಂದಕ್ಕೆ ಎಳೆದು ಬಿಟ್ಟರು. ಯಡಿಯೂರಪ್ಪ ದಬಾರೆಂದು ಬಿದ್ದು ಈಗ ಧರ್ಮಯಾತ್ರೆಯೆಂಬ ಅಧರ್ಮಯಾತ್ರೆಯೊಂದಿಗೆ ಈ ಮಾತನ್ನು ಎಲ್ಲೆಲ್ಲೂ ಅರಚುತ್ತಿದ್ದರೆ ನೀವು ವಿಶ್ಲೇಷಿಸಿದ ಹಾಗೆ ಕರ್ನಾಟಕದ ಐದೂವರೆ ಕೋಟಿ ಜನ ಇವರನ್ನೇನು ಬೆಂಬಲಿಸಿಲ್ಲ. ಮಾತೆತ್ತಿದರೆ ಇವರ ಪಟಾಲಂ ಕರ್ನಾಟಕದ ಐದುವರೆ ಕೋಟಿ ಜನಕ್ಕೆ ಕುಮಾರಸ್ವಾಮಿ ಮೋಸ ಮಾಡಿದ್ರು ಎಂದು ಅಬ್ಬರಿಸುತ್ತಾರೆ. ಕಳೆದ ಚುನಾವಣೆಯ ಮತದಾರರ ಅಂಕಿಅಂಶವು ಕೂಡ ಗೊತ್ತಿಲ್ಲವೆ ತಮ್ಮನ್ನು ಎಷ್ಟು ಜನ ಬೆಂಬಲಿಸಿದ್ದರೆಂದು!

ಒಂದೆಡೆ ಅನಂತಕುಮಾರ್ ಬಾಬಾಬುಡನ್‌ಗಿರಿಯನ್ನು ಬಿಜೆಪಿ ಅಧಿಕಾರಕ್ಕೆ ಬಂದರೆ ಸಂಪೂರ್ಣ ದತ್ತಪೀಠವನ್ನಾಗಿ ಮಾಡಲಾಗುವುದು ಎಂದಿರುವುದು ಪ್ರಜ್ಞಾವಂತ ಜನರ ನಿದ್ದೆ ಕೆಡಿಸಿದೆ. "ಮಾನವಧರ್ಮಕ್ಕೆ ಜಯವಾಗಲಿ" ಎಂದು ಹೇಳುವ ವೀರಶೈವ ಧರ್ಮ ಬಿಜೆಪಿಯನ್ನು ಬೆಂಬಲಿಸಿದರೆ ಅದರ ನಿಜ ಬಣ್ಣ ಬಯಲಾಗುತ್ತದೆ. ಆದ್ದರಿಂದ ಮಾನವಂತ ವೀರಶೈವರು, ಬಸವಣ್ಣನ ಅನುಯಾಯಿಗಳು ಜಾತ್ಯತೀತ ಮಾನವ ಧರ್ಮಕ್ಕೆ ಲೇಸನ್ನು ಬಯಸುವುದು ಆರೋಗ್ಯಕರ ಸಮಾಜಕ್ಕೆ ಒಳ್ಳೆಯದು.

-ಸಿ. ಶಿವಕುಮಾರ್, ತುಮಕೂರು

ನಾನು ನಿಮ್ಮ ಪತ್ರಿಕೆಯ ಕಟ್ಟಾ ಅಭಿಮಾನಿ. ಈ ವಾರ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ "ಚೆಡ್ಡಿಗಳಿಂದ ಯಡ್ಡಿಗೆ ದ್ರೋಹ" ಎಂಬ ಲೇಖನ ತುಂಬಾ ಚೆನ್ನಾಗಿತ್ತು. ಇದಕ್ಕಿಂತಲೂ ಹೆಚ್ಚಾಗಿ ನನಗೆ ಹೆಚ್ಚು ಸಂತೋಷವನ್ನುಂಟುಮಾಡಿದ ಲೇಖನವೆಂದರೆ ಕೊಳ್ಳೇಗಾಲದ ಕೇಬಲ್ ಕಳ್ಳ ರೇಣುಕೇಶ್‌ನ ಬಗ್ಗೆ ಬರೆದಿರುವುದು.



ಈತ ಕೊಳ್ಳೇಗಾಲದಿಂದ ನಮ್ಮ ಗ್ರಾಮ ಸತ್ತೇಗಾಲಕ್ಕೂ ಕೇಬಲ್ ಎಳೆದಿದ್ದಾನೆ. ಅದು ಸರಿಯಾಗಿ ಬರದೆ ಅಸ್ಪಷ್ಟವಾಗಿ ಬರುತ್ತದೆ. ಆದರೆ ಪ್ರತಿ ತಿಂಗಳು ಮಾತ್ರ 130 ರೂ.ಗಳನ್ನು ವಸೂಲಿ ಮಾಡುತ್ತಿದ್ದಾನೆ. ಈ ಬಗ್ಗೆ ಹಲವು ಬಾರಿ ಆತನನ್ನು ಪ್ರಶ್ನಿಸಿದಾಗ ಮಹಿಳೆಯರು ಎಂಬ ಪ್ರಜ್ಞೆ ಇಲ್ಲದೆ ಉಡಾಫೆ ಉತ್ತರ ಕೊಡುತ್ತಾನೆ. ಇವನ ಬಗ್ಗೆ ಪತ್ರಿಕೆ ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

-ಜೆ. ಸುಮಾವತಿ, ಕೊಳ್ಳೇಗಾಲ



ಗಾಂಧಿನಗರದಿಂದ ಮಾಯವಾದ ಕನ್ನಡ ಚಿತ್ರರಂಗ

ಇವತ್ತು ಭಾನುವಾರದಂದು ಕನ್ನಡ ಚಿತ್ರರಂಗ ಗಾಂಧಿನಗರದಲ್ಲಿ ಇರಲೇ ಇಲ್ಲ, ಹಾಗಂತ ಇಲ್ಲಿ ಬೊಮ್ಮಾಯಿ ನಿಧನಕ್ಕಾಗಿ ರಜೆ ಡಿಕ್ಲೇರ್ ಮಾಡಿದ್ದರೆಂದು ನೀವು ಭಾವಿಸಿದರೆ ನಿಮ್ಮ ಊಹೆ ತಪ್ಪಾಗುತ್ತದೆ.

ಆಗಿದ್ದು ಇಷ್ಟೇ: ಒಂದೆಡೆ ದರ್ಶನ್ ಅಭಿನಯದ 'ಗಜ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭ ದಾವಣಗೆರೆಯಲ್ಲಿ ಅದ್ದೂರಿಯಾಗಿ ನಡೆಯಿತು. ಇನ್ನೊಂದೆಡೆ, ಪ್ರೇಮ್ ಅಭಿನಯದ 'ಗುಣವಂತ' ಚಿತ್ರದ ಕ್ಯಾಸೆಟ್ ಬಿಡುಗಡೆ ಶಿವಮೊಗ್ಗದಲ್ಲಿ ಬಹಳ ಜೋರಾಗೇ ನಡೆಯಿತು. ಹೀಗಾಗಿ ಎರಡೂ ಚಿತ್ರತಂಡದ ಕಲಾವಿದರು ಶಿವಮೊಗ್ಗ ಮತ್ತು ದಾವಣಗೆರೆಯಲ್ಲಿ ಮೊಕ್ಕಾಂ ಹೂಡಿದ್ದರು. ಇನ್ನೊಂದಷ್ಟು ಜನ ಕಲಾವಿದರನ್ನು ಕಟ್ಟಿಕೊಂಡು ರವಿಚಂದ್ರನ್ ಸಕಲೇಶಪುರದಲ್ಲಿ 'ಮಂಜಿನ ಹನಿ'ಯಲ್ಲಿ ಶೂಟಿಂಗ್ ನಡೆಸುತ್ತಿದ್ದರು. ಇದೇ ಹೊತ್ತಿಗೆ ಪುನೀತ್ ವಿದೇಶಕ್ಕೆ ಹಾರಿಹೋಗಿದ್ದರು. ಉಳಿದ ಕಲಾವಿದರೆಲ್ಲಾ ದಸರಾ ಹಾಲಿಡೇ ಮೂಡ್‌ನಲ್ಲಿದ್ದರು. ಹೀಗಾಗಿ ಸಂಡೆ ಗಾಂಧಿನಗರ ಖಾಲಿಖಾಲಿಯಾಗಿತ್ತು.

ಚಿತ್ರರಂಗದ ಸದ್ಯದ ಸೂಪರ್‌ಸ್ಟಾರ್ ಗಣೇಶ್ ಮಾತ್ರ 'ಅರಮನೆ' ಚಿತ್ರಕ್ಕಾಗಿ ರಾಜರಾಜೇಶ್ವರಿ ನಗರದಲ್ಲಿ ಓಡಾಡುತ್ತಿದ್ದರು.

ಹುಚ್ಚರ ಹೊಳೆಯಲ್ಲಿ ಹುಚ್ಚರಿಗೆ ಲಾಭ

ಕನ್ನಡ ಚಿತ್ರರಂಗದಲ್ಲಿ ಎಂದೆಂದೂ ಕಂಡರಿಯದಷ್ಟು, ಕೇಳರಿಯದಷ್ಟು ಸಿನಿಮಾಗಳು ಈಗ ತಯಾರಾಗುತ್ತಿರುವುದನ್ನು ಕೇಳಿದ್ದೀರಿ. ಆದರೆ ಅವೆಲ್ಲ ಸಿನಿಮಾಗಳನ್ನು ಮಾಡುತ್ತಿರುವವರು, ಅವುಗಳಲ್ಲಿ ನಟಿಸುತ್ತಿರುವವರು, ತಾಂತ್ರಿಕವರ್ಗದವರು ಯಾರು? ಅವರೆಲ್ಲಿಂದ ಬಂದಿದ್ದಾರೆ? ಎಂಬುದರ ಬಗ್ಗೆ ಒಮ್ಮೆ ನೋಡಿದರೆ ಅಲ್ಲಿ ಅದೆಂತಹ ಅಧ್ವಾನ ನಡೆಯುತ್ತಿದೆ ಎಂಬುದರ ಅರಿವಾಗುತ್ತದೆ.

ಇತ್ತೀಚೆಗೆ ನಡೆದ ಒಂದು ಘಟನೆಯೇ ಇದಕ್ಕೆಲ್ಲ ಕನ್ನಡಿ ಹಿಡಿದಂತಿದೆ. ಆತ ಹೊಸ ನಿರ್ದೇಶಕ. ಅದರೆ ಆತನಿಗೆ ಚಿತ್ರಕತೆ ಅಂದರೆ ಹೇಗಿರುತ್ತೆ ಎಂಬುದು ಗೊತ್ತಿರುವುದಿರಲಿ, 'ಆಕ್ಷನ್' ಎನ್ನುವ ಮುನ್ನ 'ಲೈಟ್ಸ್' ಎಂದೂ, ಅದಾದ ನಂತರ 'ಕ್ಯಾಮೆರಾ' ಎಂದೂ ಕರೆಯಬೇಕೆಂಬುದೇ ಗೊತ್ತಿರಲಿಲ್ಲ. ಆತುರಕ್ಕೆ ಬಿದ್ದವನಂತೆ ಎಲ್ಲದಕ್ಕೂ ಮುಂಚೆಯೇ 'ಆಕ್ಷನ್' ಎಂದುಬಿಟ್ಟಿದ್ದಾನೆ ಈ ಪುಣ್ಯಾತ್ಮ! ಏಕಾಏಕಿ ಇವನ 'ಆಕ್ಷನ್' ಕಂಡ ಅಲ್ಲಿದ್ದ ನಟರೆಲ್ಲಾ ತಬ್ಬಿಬ್ಬಾಗಿಹೋಗಿದ್ದಾರೆ.

ಆದರೂ ಈ ಅಜ್ಞಾನಿ ತಾನು 'ಆಕ್ಷನ್' ಎಂದು ಆದೇಶಿಸಿದ್ದರೂ ನಟರು ನಟಿಸದೇ ಬೊಂಬೆಗಳಂತೆ ನಿಂತಿದ್ದಾರೆ ಎಂದು ಭಯಂಕರವಾಗಿ ಕೋಪಗೊಂಡನಂತೆ! ಕೊನೆಗೂ ಈತನ ಮಂಗಾಟಗಳನ್ನು ಸಹಿಸದೆ ಹಿತೈಷಿಯೊಬ್ಬ "ಅಲ್ಲಯ್ಯ, ನಿನಗೆ ಗೊತ್ತಿರದಿದ್ದರೆ ಒಂದು ಒಳ್ಳೆ ಅಸೋಸಿಯೇಟ್ ಡೈರೆಕ್ಟರ್‌ನನ್ನಾದರೂ ನಿನ್ನೊಂದಿಗೆ ಇಟ್ಟುಕೊ" ಅಂದಿದ್ದಕ್ಕೆ ಈ ನವ ನಿರ್ದೇಶಕ ಅಂದಿದ್ದೇನು ಗೊತ್ತಾ? "ಅಯ್ಯೋ ಈ ಸಿನಿಮಾ ಆದಮೇಲೆ ನಾನು ಇನ್ನೂ ಎರಡು ಸಿನಿಮಾಗಳನ್ನು ಮಾಡಬೇಕಿದೆ. ಆದ್ದರಿಂದ ನನ್ನ ತಲೆ ರೋಸಿಹೋಗಿದೆ" ಎಂದನಂತೆ! ಈ ಪುಣ್ಯಾತ್ಮ ಇನ್ನೆಂತಹ ಚಿತ್ರ ನಿರ್ದೇಶಿಸಿಯಾನು? ಅದ್ಯಾವ ನಿರ್ಮಾಪಕನಿಗೆ ಚೊಂಬು ಕೊಟ್ಟಾನು ಎಂದು ಯೋಚಿಸಿದರೆ ಗಾಬರಿಯಾಗುತ್ತದೆ.

ಇನ್ನು ಎಲ್ಲ ಚಿತ್ರಗಳಿಗೂ ನುರಿತ ಛಾಯಾಗ್ರಾಹಕರು ಇಲ್ಲವಾದ್ದರಿಂದ ಸಹ ಛಾಯಾಗ್ರಾಹಕರುಗಳು, ಕ್ಯಾಮೆರಾ ಅಸಿಸ್ಟೆಂಟುಗಳೆಲ್ಲಾ ಇವತ್ತು ಕ್ಯಾಮರಾಮೆನ್‌ಗಳಾಗಿದ್ದಾರೆ. ಈ ಕೊರತೆ ಚಿತ್ರ ನಿರ್ಮಾಣದ ಎಲ್ಲ ವಲಯಗಳನ್ನು ತಾಕಿದ್ದು, ಇವತ್ತು ಮೇಕ್‌ಅಪ್ ಮ್ಯಾನ್‌ಗಳಿಗೂ ಎಷ್ಟು ಬೇಡಿಕೆ ಇದೆ ಎಂದರೆ ಸಿನಿಮಾದವರು ಬ್ಯೂಟಿ ಪಾರ್ಲರ್‌ಗಳಿಂದ ಜನರನ್ನು ಕರೆಸಿ ನಟರ ಮುಖಕ್ಕೆ ಬಣ್ಣ ಬಳಿಸುತ್ತಿದ್ದಾರೆ! ಈ ಬ್ಯೂಟಿ ಪಾರ್ಲರ್‌ನವರಿಗೆ ಚಿತ್ರದಲ್ಲಿ ಕಂಟಿನ್ಯುಟಿ ಇರಬೇಕೆಂಬುದರ ಕಲ್ಪನೆಯೇ ಇಲ್ಲವಾದ್ದರಿಂದ ತೆರೆಯ ಮೇಲೆ ಪ್ರೇಕ್ಷಕರು ಯಾವ ಯಾವ ಅನಾಹುತಗಳನ್ನು ಕಾಣಬೇಕೋ ಗೊತ್ತಿಲ್ಲ.

ಇದು ಚಿತ್ರರಂಗದ ಪ್ರಗತಿಯೋ ಅಥವಾ ಅವನತಿಯೋ ಗೊತ್ತಾಗಲು ಬಹಳ ದಿನ ಉಳಿದಿಲ್ಲ ಎಂಬುದೇ ನೆಮ್ಮದಿಯ ವಿಷಯ!

'ಬಿಗ್' ಬೊಜ್ಜುಗಳು



ಇತ್ತೀಚೆಗೆ ಬ್ರಿಟ್ನಿ ಸ್ಪಿಯರ್ಸ್ ಎಂಬ ಇಂಗ್ಲಿಷ್ ಹಾಡುಗಾರ್ತಿ ಎರಡು ಇಂಚು ಅಗಲದ ಬಿಕಿನಿ ತೊಟ್ಟು ವೇದಿಕೆಯ ಮೇಲೆ ಕುಣಿದು ಕುಪ್ಪಳಿಸಿದಾಗ ಅವಳ ದೇಹದ ಮೇಲಿರುವ ಕೊಬ್ಬು ಆಕೆಯೊಂದಿಗೆ ಜೊತೆಜೊತೆಯಾಗಿ ಕುಣಿದಾಡಿದ್ದನ್ನು ಕಂಡು ಜನ ಅಚ್ಚರಿಗೊಂಡಿದ್ದರು.

ವೈವಾಹಿಕ ಜೀವನದಲ್ಲಿನ ಬಿರುಕಿನಿಂದಾಗಿ ಈಗ ಕುಡಿತ ಮತ್ತು ಮಾದಕ ದ್ರವ್ಯಗಳ ದಾಸಿಯಾಗಿರುವ ಬ್ರಿಟ್ನಿ ತನ್ನ ದೇಹ ಸೌಂದರ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದರಿಂದಲೇ ಆಕೆ ಎದ್ವಾತದ್ವಾ ಊದಿಕೊಂಡಿದ್ದಾಳೆ. ಆದರೆ ಹಾಗೆ ಊದಿಕೊಂಡಿದ್ದರೂ ಅಂತಹ ಕನಿಷ್ಠ ಉಡುಪು ಧರಿಸಿ ಮೈಯೆಲ್ಲಾ ಕುಣಿದಾಡುವಂತೆ ಸಾರ್ವಜನಿಕವಾಗಿ ನರ್ತಿಸುವ ಅಗತ್ಯವೇನಿತ್ತು ಎಂದು ಜನ ಆಕೆಯನ್ನು ಆಡಿಕೊಂಡಿದ್ದರು.

ಬ್ರಿಟ್ನಿಯ ನಂತರ ಈಗ ಹಿಂದಿ ಚಿತ್ರರಂಗದ ನಟಿ ರಾಣಿ ಮುಖರ್ಜಿಯ ಸರದಿ. ಈಕೆ ಎಂದೂ ತೆಳ್ಳಗಿರಲಿಲ್ಲ ನಿಜ, ಆದರೆ ಆಕೆ ಎಂದೂ ಇಷ್ಟೊಂದು ದಪ್ಪಗಾಗಿರಲಿಲ್ಲ. ಸೋಜಿಗದ ವಿಷಯವೆಂದರೆ, ರಾಣಿ ಕೂಡ ಇಷ್ಟು ದಪ್ಪವಾಗಿದ್ದರೂ ಅದನ್ನು ಮರೆಮಾಚುವುದರ ಬದಲಾಗಿ ಮೊನ್ನೆ ತೆಳ್ಳನೆಯ, ಪಾರದರ್ಶಕವಾದ ಕೆಂಪು ಸೀರೆ ತೊಟ್ಟು ತನ್ನ ದೇಹದಲ್ಲಿ ಈಗ ಸೊಂಟ ಎಂಬುದೇ ಇಲ್ಲವೆಂದೂ, ಬೊಜ್ಜೇ ಸಂಪೂರ್ಣವಾಗಿ ಆವರಿಸಿಕೊಂಡಿದೆ ಎಂದೂ ಬಹಿರಂಗಪಡಿಸಿದಳು.



ಇದನ್ನು ನೋಡಿ ಜನ ಮತ್ತೆ ನಗಾಡುತ್ತಿದ್ದಾರೆ, ರಾಣಿಗೆ ಬುದ್ಧಿ ಇಲ್ಲವೇ ಎಂದು ಮೂಗಿನ ಮೇಲೆ ಬೆರಳಿಟ್ಟು ಅಚ್ಚರಿ ವ್ಯಕ್ತಪಡಿಸುತ್ತಿದ್ದಾರೆ. ಚಿತ್ರೋದ್ಯಮದಲ್ಲಿ ಮತ್ತು ಮನರಂಜನಾ ಕ್ಷೇತ್ರದಲ್ಲಿ ಮಹಿಳೆಯ ದೇಹ ಸೌಂದರ್ಯವೂ ಎಷ್ಟು ಮುಖ್ಯವಾಗಿರುತ್ತದಲ್ಲವೇ?






ಹೀಗೊಂದು ಪ್ರೇಮದ ಇನ್ನಿಂಗ್ಸ್

ಇಮ್ರಾನ್ ಖಾನ್ ಎಂಬ ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಮತ್ತು ಹಾಲಿ ರಾಜಕಾರಣಿ ಸ್ವತಃ ಮುಸಲ್ಮಾನನಾಗಿದ್ದರೂ ಬ್ರಿಟನ್ನಿನ ಜೆಮೀಮಾ ಎಂಬ ಯಹೂದಿ ಮಹಿಳೆಯನ್ನು ಮದುವೆ ಆಗಿದ್ದು ಆನಂತರ ಅವರಿಬ್ಬರು ವಿಚ್ಛೇದನ ಪಡೆದಿದ್ದು ಈಗ ಇತಿಹಾಸ.

ಇಮ್ರಾನ್ ಖಾನ್ ಇವತ್ತಿಗೂ ಜೆಮೀಮಾಳೊಂದಿಗೆ ಪಡೆದ ಇಬ್ಬರು ಮಕ್ಕಳನ್ನು ನೋಡಿಕೊಳ್ಳುತ್ತಾ ಪಾಕಿಸ್ತಾನದ ಸರ್ವಾಧಿಕಾರಿ ಪರ್ವೇಜ್ ಮುಷಾರಫ್‌ನನ್ನು ವಿರೋಧಿಸುತ್ತಾ ತನ್ನ ರಾಜಕೀಯ ಬದುಕಿಗೊಂದು ದಿಕ್ಕು ಕಲ್ಪಿಸಿಕೊಳ್ಳಲು ಯತ್ನಿಸುತ್ತಿದ್ದರೆ, ಈಗ ಇಂಗ್ಲೆಂಡಿನಲ್ಲಿ ವಾಸಿಸುತ್ತಿರುವ ಜೆಮೀಮಾ ಮಾತ್ರ ಈಗಲೂ ಪುರುಷರ ಬೇಟೆಯಲ್ಲಿಯೇ ಬಿಜಿ ಆಗಿದ್ದಾಳೆ.

ಪಾಕಿಸ್ತಾನದಲ್ಲಿ ಇಮ್ರಾನನ ಮಡದಿಯಾಗಿ ಸಂಪ್ರದಾಯಸ್ಥ ಬದುಕನ್ನು ಸಾಗಿಸಲಾರೆ ಎಂದು ಆತನಿಗೆ ಸೋಡಾ ಚೀಟಿ ಕೊಟ್ಟು ಲಂಡನ್ನಿನಲ್ಲಿ ವಾಸಿಸುವ ಹ್ಯೂ ಗ್ರಾಂಟ್ ಎಂಬ ನಟನ ತೆಕ್ಕೆಗೆ ಬಿದ್ದಳು. ಆದರೆ ಪಾಪ ಜೆಮೀಮಾ, ಆಕೆ ಆತನನ್ನು ಒಲಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಆತ ಮಾತ್ರ ತನ್ನ ಮಾಜಿ ಪ್ರೇಯಸಿ ಮತ್ತು ಭಾರತ ಮೂಲದ ಸಾಹುಕಾರ ಪ್ರೊಕ್ರಿ ಅರುಣ್ ನಾಯ್ಯರ್ ಎಂಬಾತನ ಹಾಲಿ ಮಡದಿ ಎಲಿಜಬೆತ್ ಹರ್ಲಿಯ ಬಗ್ಗೆಯೇ ಭ್ರಮಿಸುತ್ತಿದ್ದ.




ಇದರಿಂದ ರೋಸಿಹೋದ ಜೆಮೀಮಾ ಆತನಿಗೂ ಟಾಟಾ ಹೇಳಿ ರಾಜಕುಮಾರ್ ಚಾರ್ಲ್ಸ್‌ನ ಮಡದಿ ಕೆಮಿಲಾ ಪಾರ್ಕರ್ ಬೌಲ್ಸಳ ಹತ್ತಿರ ಸಂಬಂಧಿ ಬೆನ್ ಇಲಿಯಟ್ ಎಂಬಾತನೊಂದಿಗೆ ಹಲವು ಕಾಲ ಚಕ್ಕಂದವಾಡಿದಳು.

ಇದೀಗ ಬಂದಿರುವ ಸುದ್ದಿಯ ಪ್ರಕಾರ ಆತನಿಗೂ ಬೈಬೈ ಹೇಳಿದ ಜೆಮೀಮಾ ತನ್ನ ಗಮನವನ್ನು ಮತ್ತೆ ಕ್ರಿಕೆಟ್ ಅತ್ತ-ಅಂದರೆ ಕ್ರಿಕೆಟಿಗರತ್ತ-ಹರಿಸಿದ್ದಾಳಂತೆ. ಹಾಗೆಯೇ ಆಕೆ ಈಗ ಸಂಬಂಧ ಏರ್ಪಡಿಸಿಕೊಂಡಿರುವುದು ಆಸ್ಟ್ರೇಲಿಯಾದ ಅಪ್ಪಾಪೋಲಿಯಾದ ನಿವೃತ್ತ ಆಟಗಾರ ಶೇನ್ ವಾರ್ನ್‌ನೊಂದಿಗೆ!


ಮಹಿಳೆಯರ ವಿಷಯದಲ್ಲಿ ಈತನದ್ದು ಎಂತಹ ಕುಖ್ಯಾತಿ ಎಂದರೆ ಇವನ ಅಸಂಖ್ಯಾತ ತರಲೆಗಳನ್ನು ತಡೆಯಲಾಗದೆ ಅವನ ಹೆಂಡತಿ ಡೈವೋರ್ಸ್ ನೀಡಿ ಹೊರ ನಡೆದಳು. ಈಗ ಶೇನ್ ವಾರ್ನ್ ಜೆಮೀಮಾಳನ್ನು ತನ್ನ ತೆಕ್ಕೆಗೆ ಬೀಳಿಸಿಕೊಂಡಿದ್ದಾನಂತೆ. ಮೊನ್ನೆ ಇವನನ್ನು ಭೇಟಿಯಾಗಲು ಜೆಮೀಮಾ ಅವನ ಮನೆಗೆ ಹೋದಳು. ಆದರೆ ಅದೇ ಹೊತ್ತಿಗೆ ಫೋನಿನಲ್ಲಿ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿದ್ದ ವಾರ್ನ್ ಜೆಮೀಮಾಳಿಗೆ ಒಂದು ಸಂದೇಶವನ್ನು ಎಸ್‌ಎಂಎಸ್ ಮೂಲಕ ರವಾನಿಸಿದ. ಅದರಲ್ಲಿ "ಹಾಯ್ ನನ್ನ ಸುಂದರಿ, ಮಕ್ಕಳೊಂದಿಗೆ ಮಾತನಾಡುತ್ತಿದ್ದೇನೆ. ಹಿಂದಿನ ಬಾಗಿಲು ತೆರೆದಿದೆ, ಒಳಗೆ ಬಾ" ಎಂದು ತನ್ನ ಮೊಬೈಲ್‌ನಲ್ಲಿ ಕೀ ಮಾಡಿದ ವಾರ್ನ್ ಅದನ್ನು ಜಮೀಮಾಗೆ ಕಳುಹಿಸಬೇಕೆಂದಿದ್ದರೂ ತನ್ನ ಮಾಜಿ ಮಡದಿಯ ಮೊಬೈಲಿಗೆ ಕಳುಹಿಸಿಯೇ ಬಿಟ್ಟ. ಇದನ್ನು ಓದಿ ಆತನ ಮಾಜಿ ಹೆಂಡತಿ ಥಕಥೈ ಎಂದು ಕುಣಿಯಲಾರಂಭಿಸಿ ವಾರ್ನ್ ಮತ್ತು ಜಮೀಮಾಳ ಸಂಬಂಧ ಜಗಜಾಹೀರಾಯಿತು!

ಕ್ರಿಕೆಟಿಗನೊಂದಿಗೆ ಪ್ರಾರಂಭವಾದ ಜೆಮೀಮಾಳ ಪ್ರಣಯ ಸಲ್ಲಾಪಗಳು ಮತ್ತೆ ಇನ್ನೊಬ್ಬ ಕ್ರಿಕೆಟಿಗನ ಬಳಿ ಬಂದು ನಿಂತಿವೆ. ಆಕೆಯ ಮುಂದಿನ ಪ್ರೇಮಪಯಣ ಮತ್ತೆಲ್ಲಿಗೋ?!

ಕರೀನಾ ಶಾಹಿದ್



ಇತ್ತೀಚಿನ ಸುದ್ದಿ ಪ್ರಸಾರಗಳನ್ನು ನೋಡಿದರೆ ಟೀವಿ ಚಾನೆಲ್‌ಗಳು ಮರುಳೋ, ಜನ ಮರುಳೊ ಎಂಬ ಚಿಂತೆ ಪ್ರಾರಂಭವಾಗುತ್ತದೆ. ಏಕೆಂದರೆ ಟಿಆರ್‌ಪಿ ರೇಟಿಂಗ್‌ನಿಂದಾಗಿ ಸದಾ ಪೈಪೋಟಿಯಲ್ಲಿರುವ ಟಿವಿ ಚಾನೆಲ್‌ಗಳು ರದ್ದಿಯನ್ನು ಸುದ್ದಿಯಾಗಿಸುತ್ತಾ, ಸುದ್ದಿಯನ್ನೇ ರದ್ದಿ ಮಾಡುತ್ತಾ ಸಾಗಿವೆ.



ಇದಕ್ಕೆ ಒಂದು ಉದಾಹರಣೆ ಮೊನ್ನಿನ ತನಕವೂ ಲವ್‌ಬರ್ಡ್ಸ್‌ನಂತಿದ್ದ ಕರೀನಾ ಕಪೂರ್ ಮತ್ತು ಶಾಹಿದ್ ಕಪೂರ್ ಎಂಬ ನಟ-ನಟಿಯರ ನಡುವೆ ವಿರಸವುಂಟಾಗಿದೆ ಎಂಬ ಗಾಸಿಪ್ಪು.

ಈಗ ಬೇರೆ ಬೇರೆ ಆಗಿರುವ ಈ ಲವ್‌ಬರ್ಡ್ಸ್‌ಗಳು ಜೊತೆ ಜೊತೆಯಾಗಿ ನಟಿಸುತ್ತಿರುವ ಚಿತ್ರವೊಂದರ ಉಳಿದಿದ್ದ ತೇಪೆ ಕೆಲಸದ ಚಿತ್ರೀಕರಣದಲ್ಲಿ ಇತ್ತೀಚೆಗೆ ಭಾಗವಹಿಸಿದ್ದರು. ಒಂದು ದಿಕ್ಕಿನಿಂದ ಆಕೆ, ಇನ್ನೊಂದು ದಿಕ್ಕಿನಿಂದ ಆತ ಬಂದು ಒಬ್ಬರ ಮುಖವನ್ನೊಬ್ಬರು ಸಾಧ್ಯವಾದಷ್ಟೂ ನೋಡದೆ ತಮ್ಮ ಕೆಲಸ ಮುಗಿಸಿಕೊಂಡು ಹೋದರು.

ಆದರೆ ಅವರಿಬ್ಬರೂ ಹೀಗೆ ವರ್ತಿಸಿದ್ದೇ ಒಂದು ದೊಡ್ಡ ಸುದ್ದಿ ಎಂಬಂತೆ, ಕಾಂಗ್ರೆಸ್ ಮತ್ತು ಎಡಪಕ್ಷಗಳ ನಡುವಿನ ಬಿರುಕಿಗಿಂತ ದೊಡ್ಡದೆಂಬಂತೆ ಟೀವಿ ಚಾನೆಲ್ ಒಂದು ಮತ್ತೆ ಮತ್ತೆ ಬಿತ್ತರಿಸುತ್ತಿತ್ತು, ಅದರ ಬಗ್ಗೆ ವರದಿ ಮಾಡುತ್ತಿದ್ದವಳಂತೂ "ನೋಡಿ ಕರೀನಾ ಮುಖದಲ್ಲಿ ಎಷ್ಟು ತಾತ್ಸಾರ ಇದೆ, ಶಾಹೀದ್ ಮುಖದಲ್ಲಿ ಎಷ್ಟು ನಿರ್ಲಕ್ಷ್ಯ ಇದೆ" ಎಂದೆಲ್ಲಾ ಒಂದೇ ಸಮನೆ ವದರುತ್ತಿದ್ದಳು. ಇವರಿಗೆಲ್ಲಾ ಬುದ್ಧಿ ಎಂಬುದು ಬರುವುದೆಂದು?!

RANJANE BODHANE PRACHODANE LANKESH, Kannada Weekly Price Rs. 10/- 24-10-2007 RNI No. KARKAN2005/14648 Regd.No.KA/BG(S)/2036/2005-0

ಪ್ರೇಮ ಕೈದಿ



ನಟಿ ರಕ್ಷಿತಾಳ ಪ್ರೇಮ ಬಂಧನದಲ್ಲಿ ಸಿಕ್ಕಿಹಾಕಿಕೊಂಡ ನಿರ್ದೇಶಕ ಪ್ರೇಮ್ ಆನಂತರ ಮದುವೆಯಾಗಿ ಹೌಸ್ ಅರೆಸ್ಟ್ ಆಗಿದ್ದು ಹಳೇ ವಿಷಯ. ಆದರೆ ಮೊನ್ನೆ ರಕ್ಷಿತಾಳ ಬಂಧನದಿಂದ ಹೊರಬಂದ ಪ್ರೇಮ್ ಮತ್ತೊಂದು ರೀತಿಯ ಬಂಧನಕ್ಕೆ ಒಳಗಾದರು. ಅದು ಆಗಿದ್ದು ಹೀಗೆ: ಮೊನ್ನೆ ಬೈಲಹೊಂಗಲದ ನ್ಯಾಯಾಧೀಶರು ಪ್ರೇಮ್ ವಿರುದ್ಧ ವಾರಂಟ್ ಹೊರಡಿಸಿದ್ದರಿಂದ ಅಲ್ಲಿಯ ಪೊಲೀಸರು ಪ್ರೇಮ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಆನಂತರ ವೈಯಕ್ತಿಕ ಜಾಮೀನು ಪಡೆದ ಮೇಲೆ ನ್ಯಾಯಾಧೀಶರು ಪ್ರೇಮ್‌ನನ್ನು ಬಿಡುಗಡೆ ಮಾಡಿದ್ದಾರೆ.

ಹೀಗೆ ಬಂಧನಕ್ಕೆ ಒಳಪಡಬೇಕಾದಂತಹ ದೊಡ್ಡ ಅಪರಾಧವನ್ನು ಪ್ರೇಮ್ ಮಾಡಿರಲಿಲ್ಲ. 'ತುಂಟ' ಚಿತ್ರದ ನಿರ್ಮಾಪಕ ಪ್ರಕಾಶ್ ಸೊಗಲದ ಎಂಬುವವರಿಂದ ಪ್ರೇಮ್ ಸಂಭಾವನೆ ಪಡೆದಿದ್ದರು. ಆದರೆ ಆ ಚಿತ್ರ ಸೆಟ್ಟೇರಲೇ ಇಲ್ಲ. ಆಗ ಪ್ರೇಮ್ ತಾವು ಪಡೆದಿದ್ದ ಸಂಭಾವನೆಯನ್ನು ಹಿಂದಕ್ಕೆ ಕಳುಹಿಸಿದರು. ಆದರಲ್ಲಿ ಒಂದು ಲಕ್ಷದ ಚೆಕ್ ಫುಟ್‌ಬಾಲ್ ಥರ ಎರಡು ಬಾರಿ ಬೌನ್ಸ್ ಆಯಿತು. ಅಷ್ಟಕ್ಕೇ ಪ್ರಕಾಶ್ ಸೊಗಲದ ಕೇಸ್ ಜಡಿದರು. ಅದಕ್ಕೆ ಸಂಬಂಧಿಸಿದಂತೆ ನ್ಯಾಯಾಧೀಶರು ಹೊರಡಿಸಿದ್ದ ವಾರಂಟ್‌ಗೆ ಪ್ರೇಮ್ ಉತ್ತರಿಸದೇ ಇದ್ದ ಕಾರಣದಿಂದ ಕೊನೆಗೆ ಜಾಮೀನು ರಹಿತ ವಾರೆಂಟ್ ಜಾರಿಗೊಳಿಸಲಾಗಿತ್ತು.

ಒಂದು ಲಕ್ಷ ರೂಪಾಯಿಯ ಚೆಕ್ ಬೌನ್ಸ್ ಆಗಿದ್ದರಿಂದ ಮತ್ತು ಕೋರ್ಟ್ ವಾರೆಂಟ್ ಅನ್ನು ನಿರ್ಲಕ್ಷಿಸಿದ್ದರಿಂದ ಪ್ರೇಮ್ ಸಾರ್ವಜನಿಕವಾಗಿ ಈ ಅವಮಾನವನ್ನು ಎದುರಿಸಬೇಕಾಯಿತು. ವಾಸ್ತವವಾಗಿ ಇದು ಒಂದು ಲಕ್ಷದ ಪ್ರಶ್ನೆಯೇ ಅಲ್ಲ. ಪ್ರಕಾಶ್ ಸೊಗಲದ ಮತ್ತು ಪ್ರೇಮ್ ನಡುವೆ ಕಳೆದ ಮೂರು ವರ್ಷಗಳಿಂದ ದೊಡ್ಡ ಯುದ್ಧವೇ ನಡೆಯುತ್ತಿದೆ. ಆ ಯುದ್ಧದ ಮೊದಲ ಘಟ್ಟವಾಗಿ ಈ ಬಂಧನ ನಡೆಯಿತು ಅಷ್ಟೇ!

ಮುಂದೆ ಇನ್ನೇನು ನಡೆಯಲಿದೆಯೋ?!

'ಶ್ರೀ ಮುತ್ತು' ಪ್ರವೇಶ

ನಾಡಿದ್ದು ಹದಿನೆಂಟರಂದು ಶಿವರಾಜ್‌ಕುಮಾರ್ ಹೊಸ ಮನೆಯನ್ನು ಪ್ರವೇಶಿಸಲಿದ್ದಾರೆ. ಈ ಮನೆಯ ಹೆಸರು 'ಶ್ರೀ ಮುತ್ತು'.

ಹೀಗಾಗಿ ಇನ್ನುಮುಂದೆ ಚಿತ್ರೋದ್ಯಮಿಗಳು ಶಿವಣ್ಣನನ್ನು ನೋಡಬೇಕಾದರೆ, ಹೆಬ್ಬಾಳ ಕೆರೆ ಪಕ್ಕದಲ್ಲಿರುವ ನಾಗವಾರ ದಾಟಿ ಮುಂದೆ ಹೋಗಬೇಕಾಗುತ್ತದೆ. 'ಇದು ನಮ್ಮ ಕುಟುಂಬದಲ್ಲಿ ನಾವೇ ಕಟ್ಟಿಸಿದ ಮೊದಲ ಮನೆ. ಅಪ್ಪಾಜಿ ಈ ಮನೆಯನ್ನು ನಿಧನ ಹೊಂದುವ ಎರಡು ದಿನದ ಮೊದಲು ನೋಡಿ ಹರಸಿದ್ದರು. ಅದೊಂದೇ ನನಗೆ ಸಮಾಧಾನದ ಸಂಗತಿ. ಅಪ್ಪಾಜಿ ಇದ್ದಾಗಲೇ ಗೃಹಪ್ರವೇಶವಾಗಿದ್ದರೆ ಇನ್ನಷ್ಟು ಸಂತೋಷಪಡುತ್ತಿದ್ದರು' ಎಂದು ಡಾ.ರಾಜ್‌ರನ್ನು ನೆನೆಯುವ ಶಿವರಾಜ್‌ಕುಮಾರ್ ದಂಪತಿಗಳು ಸ್ವತಃ ತಾವೇ ಉದ್ಯಮದವರ ಮನೆಗಳಿಗೆ ಹೋಗಿ ಗೃಹಪ್ರವೇಶದ ಆಹ್ವಾನ ಪತ್ರಿಕೆ ನೀಡುತ್ತಿದ್ದಾರೆ. ಹೀಗಾಗಿ ಹದಿನೆಂಟರಂದು ಶ್ರೀ ಮುತ್ತು ಅಂಗಳದಲ್ಲಿ ಇಡೀ ಚಿತ್ರರಂಗವೇ ಠಿಕಾಣಿ ಹೂಡುವುದರಲ್ಲಿ ಯಾವುದೇ ಸಂದೇಹವಿಲ್ಲ.





160 ಕೋಟಿ ಮುಳುಗಿಸಿದ ಮುಂಗಾರ ಮಳೆ

'ಮುಂಗಾರು ಮಳೆ' ಎಂಬ ಚಿತ್ರದಿಂದ ನಿರ್ಮಾಪಕ ಕೃಷ್ಣಪ್ಪನವರಿಗೆ 80 ಕೋಟಿ ರೂ ಲಾಭವಾಗಿದ್ದು ನಿಜ. ಆದರೆ ಅವರಿಗೆ ಅಷ್ಟೊಂದು ಲಾಭ ತಂದ ಸಿನಿಮಾ ಇತರರ ನಷ್ಟಕ್ಕೆ ಕಾರಣವಾಗುತ್ತಿದೆ ಎಂದರೆ ನಂಬುತ್ತೀರಾ?

ನಂಬಲೇ ಬೇಕು. ಯಾಕೆಂದರೆ ಕೃಷ್ಣಪ್ಪನವರ ಅದೃಷ್ಟವನ್ನು ಕಂಡು ಅದೆಷ್ಟೋ ಜನ ಹೊಸ ಸಿನಿಮಾ ತಯಾರಿಸುವುದರಲ್ಲಿ ಹಣ ಹೂಡಿದರು. ಈಗ ಅವುಗಳಲ್ಲಿ ಬಹಳಷ್ಟು ನಿಂತು ಹೋಗಿವೆಯಲ್ಲದೆ ಆಕಸ್ಮಾತ್ ಅವು ಸಂಪೂರ್ಣಗೊಂಡರೂ ಬಿಡುಗಡೆಯಾದಾಗ ಹಣ ಕಳೆದುಕೊಳ್ಳುವುದು ಗ್ಯಾರಂಟಿ ಎಂಬಂತಾಗಿದೆ. ಒಂದು ಅಂದಾಜಿನ ಪ್ರಕಾರ ಹೀಗೆ ನಷ್ಟವಾಗುವ ಒಟ್ಟು ಹಣದ ಬಾಬತ್ತೇ 160 ಕೋಟಿ ರೂಪಾಯಿಗಳು. ಅಂದರೆ '..ಮಳೆ' ತಂದು ಕೊಟ್ಟ ಲಾಭದ ಎರಡು ಪಟ್ಟು!

ಸ್ಟಾರ್‌ಸನ್ ಇದ್ದಾಗ ನಕ್ಷತ್ರ ಯಾಕೆ?

ಆಂಧ್ರದಲ್ಲಿ ಮತ್ತೊರ್ವ ಸ್ಟಾರ್ ಸನ್‌ನ ಉದಯವಾಗಿದೆ. ಚಿರಂಜೀವಿ ಎಂಬ ಮೆಗಾಸ್ಟಾರ್‌ನ ಸುಪುತ್ರ ರಾಮ್ ಚರಣ್‌ತೇಜನ ಪ್ರಥಮ ಚಿತ್ರ 'ಚಿರುತಾ' ಬಿಡುಗಡೆಗೊಂಡು ಮೊದಲ ವಾರದಲ್ಲೇ ಹನ್ನೆರಡು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದೆ. ಪುನೀತ್ ರಾಜ್‌ಕುಮಾರ್‌ನ ಚೊಚ್ಚಲ ಚಿತ್ರ 'ಅಪ್ಪು'ವನ್ನು ನಿರ್ದೇಶಿಸಿದ್ದ ಪೂರಿ ಜಗನ್ನಾಥ್ 'ಚಿರುತಾ'ನನ್ನೂ ನಿರ್ದೇಶಿಸಿದ್ದು ರಾಮ್ ಚರಣ್‌ತೇಜ್ ಕಂಗೊಳಿಸುವಂತೆ ಚಿತ್ರವನ್ನು ತೆಗೆದಿದ್ದಾರೆ. ಆದರೆ ತಮ್ಮ ನವನಟನ ಬಗ್ಗೆ ಅದೆಷ್ಟು ಕಾಳಜಿ ವಹಿಸಿದ್ದಾರೆಂದರೆ ಚಿತ್ರದಲ್ಲಿ ಕತೆ ಎಂಬುದೇ ಇಲ್ಲ ಎಂದು ಪ್ರೇಕ್ಷಕರು ಟೀಕಿಸಲಾರಂಭಿಸಿದ್ದಾರೆ.

ಸೂರ್ಯನಂತಹ ಪುತ್ರನೇ ಇರುವಾಗ ನಕ್ಷತ್ರದಂತಹ ಕತೆ ಯಾಕೆ ಎಂಬುದು ಪೂರಿ ವಾದವೇ ಎಂದೂ ಜನ ಆಡಿಕೊಳ್ಳುತ್ತಿದ್ದಾರೆ.



ಬಾ ಬೇಗ ಚಂದಮಾಮ ಚಿತ್ರದಲ್ಲಿ ಸುಹಾಸಿನಿ

ಪೋಷಕ ನಟರ ಮಕ್ಕಳ ಜೊತೆಜೊತೆಯಲಿ



ತೂಗುದೀಪ್ ಶ್ರೀನಿವಾಸ್‌ರವರ ಮಕ್ಕಳಾದ ದರ್ಶನ್ ಮತ್ತು ದಿನಕರ್ ಜೊತೆಗೂಡಿ ಮತ್ತೊಂದು ಹೊಸ ಚಿತ್ರ ಪ್ರಾರಂಭಿಸಲು ಹೊರಟಿದ್ದಾರೆ.

ಇದೇ 18ರಂದು ದಿನಕರ್ ನಿರ್ದೇಶನದ ಎರಡನೇ ಚಿತ್ರ 'ನವಗ್ರಹ' ಸೆಟ್ಟೇರಲಿದೆ. ಇಲ್ಲೊಂದು ವಿಷಯವನ್ನು ಗಮನಿಸಬೇಕು. ಈತ ನಿರ್ದೇಶಿಸಿದ್ದ ಮೊದಲ ಚಿತ್ರ 'ಜೊತೆಜೊತೆಯಲಿ' ರಜತಮಹೋತ್ಸವವನ್ನು ಕಂಡಿದ್ದರೂ ಮತ್ತೆ ಸ್ವಮೇಕ್ ಚಿತ್ರ ಮಾಡಬೇಕೆಂಬ ಹಂಬಲದಲ್ಲಿ ಎರಡು ವರ್ಷ ಸುಮ್ಮನೆ ಕುಳಿತಿದ್ದ. ಅಥವಾ ಮೊದಲ ಚಿತ್ರದ ಯಶಸ್ಸಿನ ಹ್ಯಾಂಗೋವರ್‌ನಲ್ಲೇ ದಿಢೀರೆಂದು ಮತ್ತೊಂದು ಚಿತ್ರ ಮಾಡಲು ಕೈಹಾಕಲಿಲ್ಲ.

'ನವಗ್ರಹ' ಚಿತ್ರದ ಸ್ಪೆಷಾಲಿಟಿ ಏನೆಂದರೆ, ಪೋಷಕ ಮತ್ತು ಖಳನಾಯಕ ಕಲಾವಿದರ ಮಕ್ಕಳನ್ನೇ ಆರಿಸಿಕೊಂಡು ದಿನಕರ್ ಈ ಹೊಸ ಚಿತ್ರವನ್ನು ಮಾಡುತ್ತಿದ್ದಾನೆ. ಹೀಗಾಗಿ ಈ ಚಿತ್ರದಲ್ಲಿ ಸೃಜನ್ ಲೋಕೇಶ್, ತರುಣ್ ಸುಧೀರ್, ನಾಗೇಂದ್ರ ಅರಸ್, ಹಾಸ್ಯನಟ ದಿನೇಶ್ ಮಗ ಗಣೇಶ್, ಕೀರ್ತಿ ಮಗ ಧರ್ಮ.... ಹೀಗೆ ಪೋಷಕನಟರ ಮಕ್ಕಳೇ ಇದರಲ್ಲಿದ್ದಾರೆ. ಆಫ್‌ಕೋರ್ಸ್ ಮುಖ್ಯ ಪಾತ್ರವೊಂದರಲ್ಲಿ ಪೋಷಕ ಮತ್ತು ಖಳನಟರಾಗಿದ್ದ ತೂಗುದೀಪ್ ರವರ ಪುತ್ರ ದರ್ಶನ್ ಕೂಡ ಇದ್ದಾರೆ!

ಈ ಚಿತ್ರದಲ್ಲಿ ಇಬ್ಬರು ನಾಯಕಿಯರಿರುತ್ತಾರಂತೆ. ಈ ಪಾತ್ರಗಳಿಗೂ ಪೋಷಕ ನಟರ ಮಕ್ಕಳನ್ನೇ ಆಯ್ಕೆ ಮಾಡಿಕೊಳ್ಳಬೇಕೆಂದು ದಿನಕರ್ ಹಠ ಹಿಡಿದು ಕುಳಿತುಕೊಂಡಿದ್ದಾರಂತೆ. ಅವುಗಳಲ್ಲಿ ಒಂದು ಪಾತ್ರಕ್ಕೆ ಸುಂದರ್ ರಾಜ್ ಮತ್ತು ಪ್ರಮೀಳಾ ಜೋಷಾಯ್ ದಂಪತಿಗಳ ಮಗಳು ಆಯ್ಕೆಯಾದರೂ ಆಗಬಹುದು ಎನ್ನುತ್ತಾರೆ ದಿನಕರ್.

ಅದೇನೇ ಇರಲಿ, ಹೊಸ ಹುಡುಗರು ಹೊಸ ಹುಮ್ಮಸ್ಸು ಮತ್ತು ಚಿಂತನೆಯುಂದ ಕಾರ್ಯೋನ್ಮುಖರಾಗುತ್ತಿರುವುದು ಸಂತೋಷ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajaji...